ಕ್ಷಣಭಂಗುರ

(ಐತಿಹಾಸಿಕ ನಾಟಕ)

ಲೇಖಕರು :

ಕ್ಷು. ಬಾಹುಬಲಿ ಮಹಾರಾಜರು.

ಶ್ರೀ ದೇಶಭೂಷಣ ಆಶ್ರಮ.

ಕುಪ್ಪಾನವಾಡಿ–ಕೋಥಳಿ.

೧೯೭೩.

ಪ್ರಕಾಶಕರು—

ಶ್ರೀ ದೇಶಭೂಷಣ ಆಶ್ರಮ,
ಕುಪ್ಪಾನವಾಡಿ–ಕೋಥಳಿ.
ತಾ : ಚಿಕ್ಕೋಡಿ
ಜಿ : ಬೆಳಗಾವಿ.

○

ಕ್ರಯ : ಐದು ರೂಪಾಯಿಗಳು.

ಅಧಿಕೃತ ಮಾರಾಟಗಾರರು—

ಚಂದ್ರ-ಗಂಗಾ ಜ್ಞಾನಪೀಠ, ಶೇಡಬಾಳ.

○

ಮುದ್ರಕರು—

ಮೋಹನ ಕುಲಕರ್ಣಿ
ವಿಜಯಲಕ್ಷ್ಮಿ ಆರ್ಟ ಪ್ರಿಂಟರ್ಸ,
ಶೇರಿಗಲ್ಲಿ–ಬೆಳಗಾಂವ.

ಅರಿಕೆ

ಜೈನ ಯುವಕರಿಗೆ ಜೈನಧರ್ಮದ ಪ್ರಸಾರಕ್ಕೆ ಅನುಕೂಲವಾದ ನಾಟಕವೊಂದು ಅಭಿನಯಿಸಲಿಕ್ಕೆ ತೀರ ಅವಶ್ಯಕವಾಗಿತ್ತು. ಅದು ಶ್ರೀ ಬಾಹುಬಲಿ ಸ್ವಾಮಿಗಳ ಈ ನಾಟಕ ಪ್ರಕಾಶನದಿಂದ ಪೂರ್ತಿಗೊಳ್ಳುತ್ತಲಿದೆ. ಆದರಿಂದ ಈ ನಾಟಕವನ್ನು ಪ್ರಕಟಿಸಲು ನಮಗೆ ತುಂಬಾ ಸಂತೋಷವಾಗುತ್ತಲಿದೆ. ಈ ಕನ್ನಡ 'ಕ್ಷಣಭಂಗುರ' ನಾಟಕವು ಹಿಂದಿ ಭಾಷೆಯಲ್ಲಿಯೂ ಮರಾಠಿಯಲ್ಲಿಯೂ ಈಗಲೇ ಪ್ರಕಟವಾಗುತ್ತಿದೆ. ಆದರಿಂದ ಇದರ ಜನಪ್ರಿಯತೆಯು ವ್ಯಕ್ತವಾಗುವದು.

ಇಂಥ ನಾಟಕವನ್ನು ರಂಗದ ಮೇಲೆ ತರಲು ಹಳ್ಳಿ ಹಳ್ಳಿಯಲ್ಲಿಯ ಯುವಕರು ಮುಂದೆ ಬರಬೇಕು. ಅದರಿಂದ ಸದ್ಧರ್ಮ ಪ್ರಸಾರವಾಗುತ್ತದೆ, ಧರ್ಮ ಪ್ರಭಾವನೆಯಾಗುತ್ತದೆ. ಆಗ ಲೇಖಕರ ಪರಿಶ್ರಮವು ಸಾರ್ಥಕವಾಗುತ್ತದೆ.

ಈ ನಾಟಕದ ಪದ್ಯಗಳನ್ನು ನಿರೂಪಿಸುವುದಕ್ಕೆ ಶ್ರೀ ಅಕ್ಕಾತಾಯಿ ತೇಜಗೌಡ ಪಾಟೀಲ ಐನಾಪುರ ಇವರ ನೆರವು ತುಂಬ ಆಗಿದೆ. ಅದರಂತೆ ಹಸ್ತ ಪ್ರತಿಯನ್ನು ಸಿದ್ಧಗೊಳಿಸಲು ಬೋಜ ಗ್ರಾಮದ ಶ್ರೀ ಎ. ಟಿ. ಬೆಟಗೇರಿಯವರು ನೆರವಾಗಿದ್ದಾರೆ.

ಜೈನ ಬಂಧುಗಳೂ ಕಲಾ ಪ್ರೇಮಿಗಳೂ ಈ ನಾಟಕವನ್ನು ಆದರದಿಂದ ಸ್ವೀಕರಿಸುವರೆಂದು ಭಾವಿಸುವೆ.

—ಲೇಖಕರು.


ದಿಲ್ಲಿ

೨೧-೯-೧೯೭೩.

— ಪ್ರಮುಖ ಪಾತ್ರಗಳು —

ರಾಜಾ ಸತ್ಯಂಧರ	....	ಹೇಮಾಂಗದ ದೇಶದ ಅರಸು.
ವಿಜಯಾರಾಣಿ	....	ಸತ್ಯಂಧರನ ಪ್ರೀತಿಯ ರಾಣಿ.
ಕಾಷ್ಠಾಂಗಾರ	....	ಸತ್ಯಂಧರನಿಂದ ರಾಜ್ಯ ಪಡೆದವ.
ಧರ್ಮದತ್ತ	....	ಪ್ರಧಾನ ಮಂತ್ರಿ.
ಕೋಶಾಧ್ಯಕ್ಷ	....	ಹೇಮಾಂಗದ ರಾಜ್ಯದ ಕೋಶಾಧಿಕಾರಿ.
ಪುರೋಹಿತ	....	ರಾಜ ಪುರೋಹಿತ.
ಸೇನಾಪತಿ	....	ರಾಜ್ಯದ ಸೇನಾನಾಯಕ.

ಇವರಲ್ಲದೆ ದಾಸ ದಾಸಿಯರು, ಶ್ರಾವಕರು, ಮುನಿಗಳು, ದಾರಿಕಾರರು, ಮಾಣಿಕಬಾಯಿ, ಪದ್ಮಾವತಿ, ಸರದಾರರು, ದ್ವಾರಪಾಲಕ ಮೊದಲಾದವರು.



ಪರಮಪೂಜ್ಯ ಆತ್ಮೋದ್ಧಾರಕ ಗುರುಗಳಾದ
ಸ್ವಸ್ತಿ ಶ್ರೀ ೧೦೮ ಆಚಾರ್ಯರತ್ನ ವಿದ್ಯಾಲಂಕಾರ
ಭಾರತಗೌರವ ದೇಶಭೂಷಣ ಮಹಾರಾಜರ
ಕರಕಮಲಗಳಲ್ಲಿ ಸಮರ್ಪಿತ. —ಲೇಖಕರು.

ಕ್ಷಣಭಂಗುರ

ಮೊದಲನೆಯ ಅಂಕ

ಮೊದಲನೆಯ ದೃಶ್ಯ

ಓಂ ಣಮೋ ಅರಹಂತಾಣಂ ।
ಓಂ ಣಮೋ ಸಿದ್ಧಾಣಂ ।
ಓಂ ಣಮೋ ಆಇರಿಯಾಣಂ ।
ಓಂ ಣಮೋ ಉವಜ್ಝಾಯಾಣಂ ।
ಓಂ ಣಮೋ ಲೋಏ ಸವ್ವಸಾಹೂಣಂ ।

ಚತ್ತಾರಿ ಮಂಗಲಂ, ಅರಹಂತ ಮಂಗಲಂ, ಸಿದ್ಧ ಮಂಗಲಂ, ಸಾಹೂ ಮಂಗಲಂ, ಕೇವಲಿ ಪಣ್ಣತ್ತೊ ಧಮ್ಮೊ ಮಂಗಲಂ ।
ಚತ್ತಾರಿ ಲೋಗುತ್ತಮಾ ಅರಹಂತ ಲೋಗುತ್ತಮಾ, ಸಿದ್ಧ ಲೋಗುತ್ತಮಾ, ಸಾಹೂ ಲೋಗುತ್ತಮಾ, ಕೇವಲಿ ಪಣ್ಣತ್ತೋ ಧಮ್ಮೊ ಲೋಗುತ್ತಮಾ ।
ಚತ್ತಾರಿ ಸರಣಂ ಪವಜ್ಜಾಮಿ, ಅರಹಂತ-ಸರಣಂ ಪವಜ್ಜಾಮಿ, ಸಿದ್ಧ ಸರಣಂ ಪವಜ್ಜಾಮಿ, ಸಾಹೂ ಸರಣಂ ಪವಜ್ಜಾಮಿ, ಕೇವಲಿ ಪಣ್ಣತ್ತೊ ಧಮ್ಮೊ ಸರಣಂ ಪವಜ್ಜಾಮಿ ।

ಮಂಗಲಾಚರಣ

ಮಂಗಲಮಯ ಶ್ರೀ ಜಿನವೀರಾ ಪಾಪ ಹರಾ ।
ಮಂಗಲಮಯ ಶ್ರೀ ವೀತರಾಗಾ ಭವ ಹರಾ ॥
ಮಂಗಲಮಯ ಶ್ರೀ ಗುಣಧೀರಾ ರೋಗಹರಾ ।
ಮಂಗಲಮಯ ಮಾನವ ಧರ್ಮಾ ದಯಾಘನಾ ॥
ಶ್ರೀಮತ್ ಭಗವಾನ್ ಪುಷ್ಯಾತ್ । ಭಕ್ತಾನಾಂ
ವಃ ಸಮೀಹಿತಂ । ಯದ್ ಭಕ್ತಿಃ ಶುಲ್ಕತಾಮೇತಿ ।
ಮುಕ್ತಿ ಕನ್ಯಾಕರ ಗ್ರಹೆ ॥

(ಹೇಮಾಂಗ ದೇಶದ ರಾಜಧಾನಿ ರಾಜಪುರಿ ಪಟ್ಟಣ. ಆ ಪಟ್ಟಣದಲ್ಲಿ ರಾಜ ದರ್ಬಾರವು ಬಹು ವೈಭವಶಾಲಿಯಾಗಿ ತೋರುತ್ತದೆ. ಅದು ಸುವರ್ಣಮಯವಾಗಿ ಕಾಣುತ್ತದೆ. ಎಲ್ಲ ಕಡೆಗೆ ಝುಗಮುಗಿಸುತ್ತ (ಭಾನುವಿನಂತೆ) ದೈದಿಪ್ಯಮಾನವಾಗಿ ತೋರುತ್ತದೆ, ಅದನ್ನು ನೋಡುವವರ ಕಣ್ಣುಗಳು ಕುಕ್ಕುತ್ತಿವೆ. ಇಂಥ ಸೌಂದರ್ಯ ದಿಂದ ಮೆರೆಯುವ ರಾಜಸಭೆಯನ್ನು ನೋಡಿದಾಗ ಮನಸ್ಸಿಗೆ ಉಲ್ಹಾಸವಾಗುತ್ತದೆ. ಅದರಲ್ಲಿ ರತ್ನಖಚಿತ ಸಿಂಹಾಸನವಿರುವದು. ಅದಲ್ಲದೆ ಪ್ರಧಾನ ಮಂತ್ರಿ, ಸೇನಾಪತಿ, ಕೋಶಾಧ್ಯಕ್ಷ, ವಿದ್ವಾಂಸರ, ಪ್ರಮುಖರ, ಪ್ರತಿಷ್ಠಿತರ ಈ ಎಲ್ಲರ ಆಸನಗಳು ಕ್ರಮ ವಾಗಿ ವಿಶೇಷವಾಗಿ ತೋರುತ್ತಿವೆ. ಅದೇ ಪ್ರಕಾರ ಸರದಾರ, ಸೈನಿಕ ಮತ್ತು ಪ್ರಜಾ ಜನರು ಕೂಡುವ ಸ್ಥಾನಗಳು ಅವರವರ ಮರ್ಯಾದೆಗೆ ತಕ್ಕಂತೆ ಇರುತ್ತವೆ. ಇಂಥ ರಾಜದರ್ಬಾರದಲ್ಲಿ ರತ್ನಖಚಿತ ಸಿಂಹಾಸನದ ಮೇಲೆ ಅತ್ಯಂತ ತೇಜಃಪುಂಜ ಮುಖ ವುಳ್ಳ, ನಗುಮುಖವುಳ್ಳ, ಸರ್ವರ ಚಿತ್ತಾಕರ್ಷಕ, ಸರ್ವರ ಪ್ರೀತಿಗೆ ಪಾತ್ರನಾದ, ಸತ ವಂತ, ಗುರುಜನ ಸೇವಕ, ಗೂಢ ರಹಸ್ಯವನ್ನು ತಿಳಿದವ, ಕಾರ್ಯಪರಾಯಣಿ, ವಿದ್ವತ್ತಾಪೂರ್ಣ ಗಂಭೀರ ಮತ್ತು ತೇಜಸ್ವಿ ಕಿರೀಟ ರತ್ನಹಾರಾದಿ ಸಂಪೂರ್ಣ ಅಲಂಕಾರಯುಕ್ತವಾದಂಥ ರಾಜಾ ಸತ್ಯಂಧರರು ವಿರಾಜಮಾನರಾಗಿದ್ದಾರೆ. ಧರ್ಮ ದುರಂಧರ ವಿವೇಕಿ, ಮುತ್ಸದ್ದಿ, ನ್ಯಾಯನೀತಿ ನಿಪುಣನಾದ ಧರ್ಮದತ್ತ ಪ್ರಧಾನ ಮಂತ್ರಿ, ಅತಿಶಯ ಶೂರ ವೀರ, ರಾಜಾಭಿಮಾನಿಯಾದ ರಾಜಬಹಾದ್ದೂರ ಸಿಂಹ ಸೇನಾಪತಿ, ತಮ್ಮ ಆಸನಗಳ ಮೇಲೆ ವಿರಾಜಮಾನರಾಗಿದ್ದಾರೆ. ರಾಜದೂತರು, ಕೋಶಾಧ್ಯಕ್ಷರು ಇನ್ನುಳಿದ ಸೈನಿಕರು ತಮ್ಮ ಸ್ಥಾನಗಳನ್ನು ಅಲಂಕರಿಸಿದ್ದಾರೆ. ಬೆಳ್ಳಿಯ ರಾಜದಂಡ ಕೈಯಲ್ಲಿ ಹಿಡಿದು ರಾಜನ ಎಡಬಲಗಳಲ್ಲಿ ವೇತ್ರಧರರು ನಿಂತುಕೊಂಡಿ ದ್ದಾರೆ. ಇಬ್ಬರೂ ಚವರಿಗಳನ್ನು ಬೀಸುತ್ತಿದ್ದಾರೆ. ಈ ಪ್ರಕಾರವಾಗಿ ರಾಜದರ್ಬಾ

ರವು ಕಂಡು ಬರುತ್ತದೆ. ಇಂಥ ತುಂಬಿದ ರಾಜಸಭಾಮಂಟಪದಲ್ಲಿ ರಾಜಸಿಂಹಾಸನ ಮೇಲೆ ಕುಳಿತಂಥ ರಾಜಾ ಸತ್ಯಂಧರರನ್ನು ನೋಡಿ ಎಲ್ಲರ ಮನಸ್ಸುಗಳು ಪ್ರಸನ್ನತೆಯಿಂದ ಉಲ್ಹಾಸವಾಗಿದ್ದದ್ದು ಕಂಡು ಬರುತ್ತದೆ. ಪರದೆಯನ್ನು ಮೇಲಕ್ಕೆತ್ತುವರು. ಸರದಾರನು ಜಯಘೋಷ ಮಾಡುತ್ತಾನೆ.)

ಸರದಾರ— ರಾಜಾಧಿರಾಜ, ಮಹಾರಾಜ, ಭೂಮಂಡಲಾಧಿಪತಿ ರಾಜಾ ಸತ್ಯಂಧರ ಮಹಾರಾಜರಿಗೆ (ದರಬಾರದ ಸಭಿಕರು ಎದ್ದು ನಿಂತು ರಾಜನಿಗೆ ನಮಸ್ಕರಿಸುವರು.) ಜಯವಾಗಲಿ! ಜಯವಾಗಲಿ! (ಎಂದು ಜಯಘೋಷ ಮಾಡಿ ಕುಳಿತುಕೊಳ್ಳುವರು.)

— ನೃತ್ಯ —

— ನರ್ತನ ಪದ —

ಓsss ಲೋಕಪಾಲ ತವಗೆ ನಮಿಸುವೆ ತವಗೆ ನಮಿಸುವೇs ।
ವಿವೇಕದಿಂದ ಕುಣಿಯುವೆ ।
ಸುಜೋಕೆಯಿಂದ ಮಣಿಯುವೆ ॥ ಓssss ಲೋಕಪಾಲ ॥ ಪ ॥
ರಾಜ ಸಭಾಂಗಣದಲ್ಲಿ । ನೆರೆದೀ ಜನ ಸಮುದಾಯದಲ್ಲಿ ।
ವೀಣೆಯ ಸ್ವರದಿ । ವಾಣಿಯ ತೆರದಿ । ಗಾನ ಸಂಭ್ರಮದಿ ॥೧॥
ಓsssss ಲೋಕಪಾಲ ।
ನಾಮಾಂಕಿತರು ನಮ್ಮ ಅರಸ ।
ಈ ಹೇಮಾಂಗ ದೇಶವು ಸರಸ ॥
ನಾಡ ಕೀರ್ತಿಸುವೆ । ನೋಡಿ ಅರ್ತಿಸುವೆ ।
ಹಾಡಿ ನರ್ತಿಸುವೆ ಓssss ಲೋಕಪಾಲ ॥ ೨ ॥

ಸತ್ಯಂಧರ— ಪ್ರಧಾನ ಮಂತ್ರಿಗಳೇ (ಮಂತ್ರಿಯು ಎದ್ದು ನಿಲ್ಲುತ್ತಾನೆ) ರಾಜಶಾಸನವು ಒಳ್ಳೆಯ ರೀತಿಯಿಂದ ನಡೆದಿರುವದೆ? ರಾಜ್ಯದಲ್ಲಿ ಏನಾದರೂ ಕೊರತೆಯೇ?

ಧರ್ಮದತ್ತ— ಮಹಾರಾಜರ ಕೃಪೆಯಿಂದ ಸುತ್ತಲೂ ಕುಶಲ, ಮಂಗಲವದೆ ರಾಜನ್!

ಸತ್ಯಂಧರ— ಕೋಶಾಧ್ಯಕ್ಷರೇ (ಕೋಶಾಧ್ಯಕ್ಷ ಎದ್ದು ನಿಲ್ಲುತ್ತಾನೆ; ಪ್ರಧಾನ ಮಂತ್ರಿ ಕುಳಿತುಕೊಳ್ಳುತ್ತಾನೆ.) ನಿಮಗೇನಾದರೂ ಅವಶ್ಯವಿದೆಯೋ ?

ಕೋಶಾಧ್ಯಕ್ಷ— ದಯಾನಿಧಿಯೇ, ತಮ್ಮ ಕೃಪಾಛತ್ರದಲ್ಲಿ ಕೊರತೆ ಇರಲು ಸಾಧ್ಯವೇ ?

ಸತ್ಯಂಧರ— ಪ್ರಜೆಗಳ ಸಂತೋಷವೇ ನಮ್ಮ ಸಂತೋಷ! ಪ್ರಜೆಗಳ ಸುಖದುಃಖವೇ ನಮ್ಮ ಸುಖದುಃಖ! ಸೇನಾಪತಿ (ಸೇನಾಪತಿ ಎದ್ದು ನಿಲ್ಲುತ್ತಾನೆ, ಕೋಶಾಧ್ಯಕ್ಷ ಕುಳಿತುಕೊಳ್ಳುತ್ತಾನೆ.) ಗಡಿಯ ಮೇಲೆ ಪರಕೀಯ ರಾಜರಿಂದ ಏನಾದರೂ ತೊಂದರೆಯೋ ?

ಸೇನಾಪತಿ— ಪ್ರಜಾಪಾಲಕರೇ ಹತ್ತೂ ದಿಕ್ಕಿನಲ್ಲಿ ತಮ್ಮದೇ ಗುಣಗಾನ ಪ್ರಶಂಸೆ ನಡೆದಿರುವಾಗ ಗಡಿಯ ಮೇಲೆ ಸೈನಿಕರ ಅವಶ್ಯಕತೆಯೇ ಇಲ್ಲ.

ಸತ್ಯಂಧರ— ಪ್ರಜೆಗಳಿರಾ ತಮಗೇನಾದರೂ ಹೇಳುವದಿದೆಯೇ ? (ಸೇನಾಪತಿಯು ಕುಳಿತುಕೊಳ್ಳುವನು. ಪ್ರಜೆಗಳು ಎದ್ದು ನಿಂತು.)

ಪ್ರಜೆಗಳು— ಮಹಾಪ್ರಭುಗಳೇ, ತಮ್ಮ ದಯಾದೃಷ್ಟಿಯು ನಮ್ಮ ಮೇಲೆ ಚಿರಕಾಲವಿರಲಿ.

ಸತ್ಯಂಧರ—ತಮ್ಮೆಲ್ಲರ ಕುಶಲವಾರ್ತೆಗಳನ್ನು ಕೇಳಿ ಸಂತೋಷಭರಿತನಾಗಿದ್ದೇನೆ. (ಪ್ರಜೆಗಳು ಕುಳಿತುಕೊಳ್ಳುವರು.)

(ತೆರೆ ಬೀಳುವದು)

ಎರಡನೆಯ ದೃಶ್ಯ

(ಊರ ಹೊರಗಿನ ಉದ್ಯಾನದಲ್ಲಿ ಓರ್ವ ಮುನಿರಾಜರು ಉಪದೇಶಮಾಡುತ್ತಿದ್ದಾರೆ, ಶ್ರೋತೃ ಜನರು ಕೇಳುತ್ತಿದ್ದಾರೆ. ಒಂದು ಕಡೆಗೆ ಕಟ್ಟಿಗೆ ಹೊರೆಯನು ತಲೆಯ ಮೇಲೆ ಹೊತ್ತುಕೊಂಡು ಉಪದೇಶವನ್ನು ಕೇಳುತ್ತಿದ್ದಾನೆ ಒಬ್ಬ. ಧೃಡ ಕಾಯ, ಕಪ್ಪಾದ ಶರೀರ, ವಯಸ್ಸು ಸುಮಾರು ೪೦-೪೫; ಮೈ ಮೇಲೆ ಆತ ಹರಕು ಮತ್ತು ಹೊಲಸಾದ ಬಟ್ಟೆಗಳನ್ನು ಧರಿಸಿಕೊಂಡು ನಿಂತಿರುವನು)



ರಾಜಾ ಚಿತ್ರಂಧರನ ರಾಜ ದರಬಾರವು ತುಂಬಿದೆ.
ರಾಜ್ಯದ ಕುಶಲ ಸಮಾಚಾರವನ್ನು ಮಂತ್ರಿಗಳ ದ್ವಾರ ಕೇಳುತ್ತಿದ್ದಾನೆ.

ಮುನಿಗಳು— ಓಂ ನಮಃ ಸಿದ್ಧೇಭ್ಯಃ । ಓಂ ನಮಃ ಸಿದ್ಧೇಭ್ಯಃ । ಓಂ ನಮಃ ಸಿದ್ಧೇಭ್ಯಃ ॥ ಮೋಕ್ಷ ಮಾರ್ಗ ತೋರುವ ನೇತಾ । ಕರ್ಮ ಸಮೂಹ ಭೇದನ ಮಾಡುವಾತಾ ॥ ಸಂಪೂರ್ಣ ವಿಶ್ವ ತತ್ವಗಳ ಜ್ಞಾತಾ । ನಮಸ್ಕಾರ ಅವರ ಗುಣಗಳ ಲಬ್ಧಿ ಅರ್ಥಾ ॥

ಎಲೇ ಭವ್ಯಾತ್ಮರೇ ಸಂಪೂರ್ಣ ಕರ್ಮಗಳ ನಾಶಮಾಡಿ ಮೋಕ್ಷ ಮಾರ್ಗ ತೋರುವ ನೇತಾ ।ವಿಶ್ವದಲ್ಲಿರುವ ಸಂಪೂರ್ಣ ತತ್ವಗಳನ್ನು ಒಂದೇ ಸಮಯದಲ್ಲಿ ತಿಳಿಯತಕ್ಕಂಥ ಜ್ಞಾತಾ । ಅವರ ಗುಣಗಳ ಪ್ರಾಪ್ತಿಗಾಗಿ ನಾನು ನಮಸ್ಕರಿಸುತ್ತೇನೆ. ಭವ್ಯ ಜೀವಾತ್ಮರೇ ! ಸಂಸಾರ ಅನಾದಿ ಅದೆ. ಜೀವ ಅನಾದಿ ಅದೆ, ಮೋಕ್ಷ ಮಾರ್ಗ ಅನಾದಿ ಅದೆ. ಸಂಸಾರವು ಅಸ್ಥಿರ ಅದೆ. ಮೋಕ್ಷವು ಸ್ಥಿರ ಅದೆ. ಸಂಸಾರದಲ್ಲಿ ಅನಂತ ಕಷ್ಟಗಳು ಬರುತ್ತವೆ. ಮೋಕ್ಷದಲ್ಲಿ ಸಂಕಟಗಳು ಬರುವದಿಲ್ಲ. ಸಂಸಾರದಲ್ಲಿ ಅಪಾರ ದುಃಖವನ್ನು ಭೋಗಿಸಬೇಕಾಗುತ್ತದೆ. ಮೋಕ್ಷದಲ್ಲಿ ಅಪಾರ ಸುಖವು ಭೋಗಿಸಲು ದೊರೆಯುತ್ತದೆ. ಸಂಸಾರದಲ್ಲಿ ಸದೈವ ಅಶಾಂತಿ ಇರುತ್ತದೆ. ಮೋಕ್ಷದಲ್ಲಿ ಸದೈವ ಶಾಂತಿ ಇರುತ್ತದೆ. ಹಿಂಸೆ, ಅಸತ್ಯ, ಚೌರ್ಯ, ಪರಸ್ತ್ರೀ, ಪರಿಗ್ರಹ ಸಂಚಯ, ಸಪ್ತ ವ್ಯಸನ, ಅಸಂಯಮ ಮತ್ತು ಧರ್ಮದ ಮೇಲೆ ಅಶ್ರದ್ಧಾನ ಮಾಡಿದ ಕಾರಣದಿಂದ ಈ ಜೀವಕ್ಕೆ ದುರ್ಗತಿಯಾಗುತ್ತದೆ. ಪಶು-ಪಕ್ಷಿ, ನರಕ, ನಿಗೋದಿ ಜೀವಗಳಿಗೆ ಅವರ ಪಾಪ ಕರ್ಮೋದಯದಿಂದ ಅತ್ಯಂತ ಕಷ್ಟ ಸಹನ ಮಾಡಬೇಕಾಗುತ್ತದೆ. ದೇವ ಪೂಜೆ, ಶಾಸ್ತ್ರ, ಸ್ವಾಧ್ಯಾಯ, ಗುರೂಪಾಸನೆ, ಜಪ, ತಪ, ಸಂಯಮ, ದಾನ, ಪರೋಪಕಾರಾದಿಗಳನ್ನು ಮಾಡುವದರಿಂದ ಜೀವದ ಸದ್ಗತಿಯಾಗುತ್ತದೆ. ತೀರ್ಥಂಕರ, ಚಕ್ರವರ್ತಿ, ದೇವಲೋಕದ ದೇವ ದೇವತೆಗಳಿಗೆ ಅವರವರ ಪುಣ್ಯೋದಯದಿಂದ ಅತ್ಯಂತ ಆನಂದ ಶಾಂತಿ ಸೌಖ್ಯ ಸಿಗುತ್ತದೆ. ಪಾಪ, ಪುಣ್ಯ, ಸುಖ

ದುಃಖ ಇದು ಪ್ರತ್ಯೇಕ ಜೀವನು ಮಾಡಿದ ಕೃತಿಗಳ ಫಲವಿದೆ. ಇದು ಅರಿಹಂತ ದೇವರು ಹೇಳಿದ ವಚನವಿದೆ. ಅದನ್ನೇ ನಾವು ತಮಗೆ ಹೇಳುತ್ತೇವೆ.

ಎಲೈ ಭವ್ಯ ಜೀವಗಳಿರಾ, ಯಾರಿಗೆ ಈ ಸಂಸಾರ ದುಃಖದೊಳಗಿಂದ ಪಾರಾಗಿ ಅನಂತ ಸುಖ ಮತ್ತು ಶಾಂತಿ ಅರ್ಥಾತ್ ಪರಮಾತ್ಮ ಪದ ಪಡೆಯುವ ಇಚ್ಛೆ ಇದೆಯೋ ಅವರು ಮನ ವಚನ ಕಾಯಗಳಿಂದ ಹಿಂಸಾದಿ ಪಾಪ ಕೃತ್ಯಗಳನ್ನು ತಮ್ಮ ತಮ್ಮ ಶಕ್ತ್ಯಾನುಸಾರವಾಗಿ ತ್ಯಾಗ ಮಾಡಬೇಕು. ಅಂದರೆ ಕ್ರಮದಿಂದ ಭವ ಭವಾಂತರದಲ್ಲಿ ಸುಖ ಶಾಂತಿ ಲಭಿಸುತ್ತದೆ. ಮತ್ತು ಸ್ವರ್ಗ ಮೋಕ್ಷಾದಿಗಳ ಪ್ರಾಪ್ತಿಯೂ ಆಗುತ್ತದೆ. ಆದ ಕಾರಣ ಜಿನೇಂದ್ರ ದೇವನ ಶಾಸನಕ್ಕೆ ಅನುಸರಿಸಿ ಯಥಾ ಶಕ್ತಿ ವ್ರತ ನಿಯಮಗಳನ್ನು ಪಾಲಿಸಿ ಆತ್ಮ ಕಲ್ಯಾಣ ಮಾಡಿ ಕೊಳ್ಳಬೇಕು ಓಂ ಶಾಂತಿಃ ಶಾಂತಿಃ ಶಾಂತಿಃ

(ಮುನಿಗಳು ಶ್ರಾವಕರು ಸೇರಿ ಕೆಳಗಿನ ಪದ ಹೇಳುವರು)

ಈ ಜಿನ ಕಥೆಯನು ಕೇಳಿದವರ ಪಾಪ ।
ಬೀಜ ನಿರ್ನಾಶನವಹುದು ॥
ತೇಜವಹುದು, ಪುಣ್ಯವಹುದು
ಮುಂದೊರಿದಪರಾಜಿತೇಶ್ವರನ ಕಾಣುವರು ॥
ಪ್ರೇಮದಿಂದಿದನೋದಿದರೆ ಪಾಡಿದರೆ ಕೇಳ್ದ
ರಾಮೋದ ವೈದುವರವರು ।
ನೇಮದಿ ಸುರರಾಗಿ ನಾಳೆ ಶ್ರೀಮಂಧರ ಸ್ವಾಮಿಯ
ಕಾಣ್ಬರರ್ತಿಯೊಳು ॥

ಶ್ರಾವಕರು— ಜಿನ ಭಗವಾನರಿಗೆ ಜಯ ॥ ಸಿದ್ಧಾಂತ ಶಾಸ್ತ್ರಕ್ಕೆ ಜಯ ನಿರ್ಗ್ರಂಥ ಗುರುಗಳಿಗೆ ಜಯ ॥ ವೀತರಾಗ ಧರ್ಮಕ್ಕೆ ಜಯ ನಮೋಸ್ತು ಮಹಾರಾಜ ನಮೋಸ್ತು ನಮೋಸ್ತು.

ಓರ್ವ ಶ್ರಾವಕ— ಮಹಾರಾಜರೇ, ನನಗೆ ನಿತ್ಯ ದೇವ ದರ್ಶನ ಮಾಡುವ ನಿಯಮ ಕೊಡಿರಿ.

ಮುನಿಗಳು— ಹಾಂ ತಕ್ಕೊಳ್ಳಿರಿ, ನಿಮಗೆ ಪ್ರತಿನಿತ್ಯ ದೇವದರ್ಶನ ಮಾಡುವ ವ್ರತವಿರಲಿ (ಆಶೀರ್ವಾದ ಕೊಡುತ್ತಾರೆ. ಪ್ರತ್ಯೇಕರು ಮುಂದೆ ಬಂದಾಗ ಅವರಿಗೆ ಆಶೀರ್ವಾದ ಮತ್ತು ನಿಯಮ ಕೊಡುತ್ತಾರೆ.)

ಎರಡನೆಯ ಶ್ರಾವಕ— ಮಹಾರಾಜರೇ, ನನಗೆ ರಾತ್ರಿ ಭೋಜನ ತ್ಯಾಗ ವ್ರತ ಕೊಡಿರಿ.

ಮುನಿ ಮಹಾರಾಜ— ನಿಮಗೆ ರಾತ್ರಿ ಭೋಜನ ತ್ಯಾಗ ವ್ರತವಿರಲಿ.

ಮೂರನೆಯ ಶ್ರಾವಕ— ಗುರುಗಳೇ, ನಾನು ಈ ಹೊತ್ತಿನಿಂದ ನೀರನ್ನು ಸೋಸಿ ಕುಡಿಯುತ್ತೇನೆ. ಮತ್ತು ಯಾವದೆ ತೊಗಲಿನ ವಸ್ತುವನ್ನು ಉಪಯೋಗಿಸುವದಿಲ್ಲ.

ಮುನಿಗಳು— ಇಂದಿನಿಂದ ನಿನಗೆ ನೀರು ಸೋಸಿ ಕುಡಿಯುವ ವ್ರತ ಕೊಟ್ಟದ್ದೇವೆ. ಮತ್ತು ಯಾವದೇ ತೊಗಲಿನ ವಸ್ತು ಉಪಯೋಗಿಸಬಾರದು. ಇದು ನಿಯಮ.

ನಾಲ್ಕನೆಯ ಶ್ರಾವಕ— ಸ್ವಾಮಿಯವರೇ ನಾನು ಪರಿಗ್ರಹ ಪ್ರಮಾಣ ಮಾಡುತ್ತೇನೆ— ೫೦,೦೦೦ ರೂಪಾಯಿಗಳಿಗಿಂತ ಹೆಚ್ಚಿಗೆ ಪ್ರಾಪ್ತಿಯಾದರೆ ಧರ್ಮ ಮತ್ತು ಶಿಕ್ಷಣ ಕಾರ್ಯದಲ್ಲಿ ಖರ್ಚು ಮಾಡುವೆ.

ಮುನಿಗಳು— ಧನ್ಯವಿದೆ ನಿಮ್ಮ ಜೀವನ ! ಕಲ್ಯಾಣವಾಗಲಿ !

ಐದನೆಯ ಶ್ರಾವಕ— ಮಹಾರಾಜರೇ, ನನಗೆ ದಿನಾಲು ಸ್ವಾಧ್ಯಾಯ ಮಾಡುವ ನಿಯಮ ಕೊಡಿರಿ.

ಮುನಿಗಳು— ಆಗಲಿ ದಿನಾಲು ಸ್ವಾಧ್ಯಾಯ ಮಾಡಿರಿ.

ಓರ್ವ ಶ್ರಾವಿಕೆ— ಗುರುದೇವರೇ, ನಾನು ನಿತ್ಯ ದೇವ ಪೂಜೆ ಗುರು ಉಪಾಸನೆ ಮಾಡುವೆ.

ಮುನಿಗಳು— ಆಗಲಿ ನಿತ್ಯ ದೇವ ಪೂಜೆ ಮತ್ತು ಗುರು ಉಪಾಸನೆ ಮಾಡುತ್ತ ಹೋಗಿರಿ.

ಇಬ್ಬರು ಹೆಣ್ಣು ಮಕ್ಕಳು— ನಮಗೆ ಕುಂಕುಮ ನೋಂಪಿ ಕೊಡಿರಿ ಮಹಾರಾಜರೇ.

ಮುನಿ ಮಹಾರಾಜ— ಪುಣ್ಯ ಜೀವಿಗಳೇ ಇದೇ ಪ್ರಕಾರ ಮುಂದಾದರೂ ದೇವ ಪೂಜೆ, ಆಹಾರ ದಾನ, ನೋಂಪಿ, ವ್ರತ, ಉದ್ಯಾಪನಾದಿಗಳನ್ನು ಮಾಡುತ್ತಲಿರಬೇಕು ಅಂ ಹೆಣ್ಣು ಮಕ್ಕಳೆ.

ಹೆಣ್ಣುಮಕ್ಕಳು— ಹಾಂ ! ಮಹಾರಾಜರೇ ಮಾಡುತ್ತೇವೆ.

ಒಬ್ಬ ತರುಣ— (ವಯಸ್ಸು ೨೦) ಗುರುಗಳೇ ನಾನು ನಿತ್ಯ ದೇವ ದರ್ಶನ ಮಾಡುತ್ತೇನೆ, ನೀರು ಸೋಸಿ ಕುಡಿಯುತ್ತೇನೆ. ದಿನಾಲು ಸ್ವಾಧ್ಯಾಯ ಮಾಡುತ್ತೇನೆ, ರಾತ್ರಿ ಭೋಜನ ತ್ಯಾಗ ಮಾಡಿದ್ದೇನೆ. ಉಳ್ಳಿಗಡ್ಡಿ, ಒಳ್ಳೊಳ್ಳಿ ಮುಂತಾದ ಕಂದ ಮೂಲಗಳನ್ನು ತಿನ್ನುವದಿಲ್ಲ. ಇನ್ನು ನನಗೆ ದೀಕ್ಷೆ ತೆಗೆದುಕೊಳ್ಳಬೇಕೆಂಬ ಇಚ್ಛೆಯುಂಟಾಗಿದೆ. ಕೃಪೆಮಾಡಿ ತಾವು ನನಗೆ ದೀಕ್ಷೆ ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುವೆ.

ಮುನಿಗಳು— ಎಲೈ ಭವ್ಯ ಜೀವನೇ, ನೀನು ನಿಯಮ-ವ್ರತಗಳನ್ನು ಧೃಡತೆಯಿಂದ ಪಾಲನ ಮಾಡಿ, ಧಾರಣೆ ಮಾಡಿ ಆತ್ಮ ಹಿತವನ್ನು ಮಾಡಿಕೊಳ್ಳುವ ಇಚ್ಛೆಯನ್ನು ಮಾಡಿರುವಿ; ಅದು ಒಳ್ಳೇ ಸ್ತುತ್ಯವಾಗಿದೆ. ಆದರೆ ಕೆಲವು ದಿನಗಳ ವರೆಗೆ ಗುರು ಸೇವೆಯಲ್ಲಿ ನಿಂತು ಅಧ್ಯಯನ ಮಾಡಬೇಕಾಗುವದು. ಆ ಮೇಲೆ ಧರ್ಮದ ಮೇಲಿನ ನಿನ್ನ ಅಚಲ ಶ್ರದ್ಧೆಯನ್ನು ಮತ್ತು ನಿಯಮ ವ್ರತಾದಿ ನಿಶ್ಚಲ ಚಾರಿತ್ರ್ಯವನ್ನು ನೋಡಿ ದೀಕ್ಷೆಕೊಡಬಹುದು.

ತರುಣ— ಗುರುಗಳ ಅಪ್ಪಣೆಯಂತೆ ಆಗಲಿ. ನಮೋಸ್ತು ಮಹಾರಾಜರೇ!

ಮುನಿಗಳು— ನಿನ್ನ ಹೆಸರೇನು ?

ತರುಣ— ನನ್ನ ಹೆಸರು ಮುಮುಕ್ಷು ! ಗುರುಗಳೇ ಹೋಗಿ ಬರುವೆ. (ಹೋಗುವನು)

ಕಾಷ್ಠಾಂಗಾರ— (ಸ್ವಲ್ಪ ಮುಂದೆ ಬಂದು) ಸಾಧು ಮಹಾರಾಜರೇ ನನಗಾದರೂ ಒಂದ ಯಾವದರ ವರತ ಕುಡರಿಲಾ !

ಮುನಿ ಮಹಾರಾಜ— ನೀ ಯಾರಪ್ಪಾ ?



ಕಾಷ್ಠಾಂಗಾರ— ನಾನರೀ ? ಕಟ್ಟಿಗೆ ಹೊರೆಯನ್ನು ಮಾರಿ ಹೊಟ್ಟೆ ಹೊರೆದುಕೊಳ್ಳುವ ಒಬ್ಬ ಬಡವರಿ.

ಮುನಿಗಳು— ಆಗಲಿ, ಆಗಲಿ, ನಿನ್ನ ಇಚ್ಛೆಯು ಪ್ರಕಾರ ನಿನಗೆ ನೀಗುವಂತಹ ಯಾವ ವ್ರತಬೇಕು ಹೇಳು ?

ಕಾಷ್ಠಾಂಗಾರ— ಸಾಧು ಮಹಾರಾಜರೇ, ಅದರಾಗ ನನಗ್ಯಾನ ತಿಳಿತದರಿ. ನೀವ ಯಾವದರ ಕೊಡರಿಲಾ.

ಮುನಿಗಳು— ನೀನು ಸೆರೆ ಕುಡಿಯುತ್ತಿದ್ದರೆ ಅದನ್ನು ಬಿಟ್ಟು ಬಿಡು.

ಕಾಷ್ಠಾಂಗಾರ— ಛೀ ! ಛೆ ! ಅದ್ಯಾನ ನನಗ ಜಮುಸುದುಲ್ಲ ಬಿಡ್ರಿ !

ಮುನಿಗಳು— ಮಾಂಸ ತಿನ್ನುವದನ್ನು ಬಿಡು.

ಕಾಷ್ಠಾಂಗಾರ— ಸಾಧುಗಳೇ, ನಮ್ಮ ಜಲ್ಮ ಅದರಾಗ ಆಗೆತಿರಿ ಮತ್ತ ಅದ ನನಗ ಬಿಡಲಾಕ ಹೆಂಗ ನಿಬಾಸೀತು ? ಅದ ನೀವ ಹೇಳಿರಿ.

ಮುನಿಗಳು— ಸಿಕಾರ, ಜೂಗಾರ, ಪರಸ್ತ್ರೀ ಇದರೊಳಗಿಂದ ಯಾವದಾದರೊಂದು ಬಿಡತಿಯೇನಪ್ಪಾ ?

ಕಾಷ್ಠಾಂಗಾರ— ಇದರೊಳಗಿಂದಾದರೂ ನೀಗುವಂಗ ಯಾನ ಕಾಣಸಾಂಗಿಲ್ಲರಿ ಬಿಡ್ರಿ.

ಮುನಿಗಳು— ಅಂದ ಮೇಲೆ ಹೀಗೆ ಮಾಡು ತಿಂಗಳಲ್ಲಿ ಒಂದು ದಿವಸ ಅಂದರೆ ಹುಣ್ಣಿವೆಯ ದಿನ ಬ್ರಹ್ಮಚರ್ಯ ವ್ರತ ಪಾಲನೆಯನ್ನಾದರೂ ಮಾಡತಿಯಾನ ?

ಕಾಷ್ಠಾಂಗಾರ— ಹಾಂ ಕಿದ ಪಾಡತಿ ನೋಡ್ರಿ ತಿಂಗಳದಾಗ ಒಂದ ದಿನ ನಿಬಾಸಿತ ನೋಡ್ರಿ ! ಆದರ ಹುಣ್ಣಿವೆ ಅಂದರ ಯಾನರಿ ?

ಮುನಿಗಳು— ಹುಣ್ಣಿವೆ ಅಂದರೆ ಯಾವ ಸಮಯದಲ್ಲಿ ಪಶ್ಚಿಮಕ್ಕೆ ಸೂರ್ಯನು ಮುಳುಗುತ್ತಾನೆಯೋ ಅದೇ ಸಮಯದಲ್ಲಿ ಪೂರ್ವಕ್ಕೆ ಪೂರ್ಣಗೋಲ ಚಂದ್ರನು ಉದಯನಾಗುತ್ತಾನೆ; ಆ ದಿವಸ.

ಕಾಷ್ಠಾಂಗಾರ— ಮಹಾರಾಜರ ನಮಸ್ಕಾರರಿ ಹೋಗಲ್ಯಾನರಿ

(ಹೋಗುವನು)

ಮುನಿಗಳು— ಓಂ ಓಂ ಓಂ (ಧ್ಯಾನ ಮಗ್ನರಾಗುತ್ತಾರೆ)

(ತೆರೆ ಬೀಳುವದು)

ಮೂರನೆಯ ದೃಶ್ಯ

(ಕಾಷ್ಠಾಂಗಾರನು ಕಟ್ಟಿಗೆ ಹೊರೆಯನ್ನು ಹೊತ್ತುಕೊಂಡು ನಗರದ ಬೀದಿಯಲ್ಲಿ ಬರುತ್ತ "ಕಟ್ಟಿಗೆ ತಗೋರಿ ಕಟ್ಟಿಗೆ" ಎಂದು ಕೂಗುತ್ತಿದ್ದಾನೆ. ಮತ್ತು ಒಂದೆರಡು ಸುತ್ತು ಹಾಕಿ ರಸ್ತೆಯ ಒಂದು ಬದಿಗೆ ನಿಲ್ಲುತ್ತಾನೆ. ಕಟ್ಟಿಗೆ ಹೊರೆಯನ್ನು ಇಳಿಸುತ್ತಾನೆ. ಅಷ್ಟರಲ್ಲಿ ಅವನು ನಿಂತ ಮನೆಯ ಮಹಡಿಯ ಮೇಲೆ ಓರ್ವ ಹೆಣ್ಣು ಮಗಳು ಅವನನ್ನು ನೋಡಿ ತುಚ್ಛ ಬುದ್ಧಿಯಿಂದ ಜುಗುಪ್ಸೆ ಪಟ್ಟು ಅವನ ಮೇಲೆ ಎಲೆ ತಿಂದು ಉಗುಳುತ್ತಾಳೆ. ಅವನು ಉಗುಳಿದವರಾರೆಂದು ಮೇಲೆ ನೋಡುತ್ತಾನೆ. ಅವಳು ಪುನಃ ಅವನ ಮೇಲೆ ಥೂ ಎಂದು ಉಗುಳುತ್ತಾಳೆ. ಕಾಷ್ಠಾಂಗಾರನು ಸಿಟ್ಟಿನಿಂದ)

ಕಾಷ್ಠಾಂಗಾರ— ಎಲಾ ಇಕಿ ಉಗಳಾಕ ಯಾನಾತು ? (ರಸ್ತೆಯಿಂದ ಹೋಗುವ ಮನುಷ್ಯನಿಗೆ ಕೇಳುತ್ತಾನೆ) ಓ ದಾದಾ ಓ ಅಣ್ಣಾರಿ ಮೇಲಿನ ಮಾಳಿಗೆ ಮ್ಯಾಲ ಯಾವ ಹೆಣ್ಣ ಮಗಳ ಅದಾಳೊ ಯಾರಿಗೊತ್ತ ಯಾಡ ಸಾರೆ ನನ್ನ ನೋಡಿ ನೋಡಿ ನನ್ನ ಮೈ ಮ್ಯಾಲ ಉಗಳಿದಳ ನೋಡ್ರಿ.

ದಾರಿಕಾರ— ಎಲೋಪಾ ನೀ ಇಲ್ಲ್ಯಾಕ ನಿಂತಿದಿ ? ಆ ಹೆಣ್ಣ ಮಗಳ ಯಾರ ಅದಾಳು ನಿನಗ ಗೊತ್ತಿಲ್ಲಾ ? ವೇಶ್ಯಾ ಅದಾಳ ವೇಶ್ಯಾ !

ಕಾಷ್ಠಾಂಗಾರ— (ಆಶ್ಚರ್ಯದಿಂದ) ಏನು ! ವೇಶ್ಯಾ ?

ದಾರಿಕಾರ— ಹೌದು; ಹೌದು; ವೇಶ್ಯಾ ಅದಾಳ (ಎಂದು ಅನ್ನುತ್ತ ಹೋಗುವನು)

ಕಾಷ್ಠಾಂಗಾರ— ಎಲಾ ಇವಳ ವೇಶ್ಯಾ ಮತ್ತು ನನ್ನ ಮೈ ಮೇಲೆ ಉಗುಳುತ್ತಾಳೆ. ಆಕಿ ಕಿಂತ ನಾ ಯಾನ ಕೆಟ್ಟದನು ? ನಿಂದರನಿ ಒಂದಿಲ್ಲ ಒಂದಿನ ನಿನ್ನ ಸೇಡ ತಗೊಂಡ ಬಿಡತೇನ. (ಹೋಗುವನು)

(ತೆರೆ ಬೀಳುವದು)

ನಾಲ್ಕನೆಯ ದೃಶ್ಯ

(ರಾಜಪುರಿ ನಗರದಲ್ಲಿ ಅರಮನೆಯು ಅತ್ಯಂತ ಶೋಭಾಯಮಾನವಾಗಿದೆ. ಅದು ಸುವರ್ಣಮಯವಾಗಿ ಕಾಣುತ್ತದೆ. ಸುತ್ತಲೂ ಝಗಮಗಿಸುತ್ತದೆ. ಎಲ್ಲರ ಮನಸ್ಸುಗಳು ಪ್ರಫುಲ್ಲಿತಗೊಳ್ಳುತ್ತವೆ. ಇಂಥ ಅರಮನೆಯಲ್ಲಿ ನವ ವಿವಾಹಿತಳಾದ ವಿಜಯಾರಾಣಿ ಸುಪ್ರಸಿದ್ಧಳೂ, ಸುಯೋಗ್ಯಳೂ, ಪತಿವ್ರತೆಯೂ, ಉದಾರಳೂ ಮತ್ತು ಗುಣ ಸೌಂದರ್ಯಯುಕ್ತಳೂ, ಎಲ್ಲ ರಾಣಿಯರಿಗಿಂತಲೂ, ಸ್ವರ್ಗದ ಅಪ್ಸರೆಯರಿಗಿಂತಲೂ ಸುಂದರ ಮತ್ತು ಸರ್ವರ ಪ್ರೀತಿಗೆ ಪಾತ್ರಳಾಗಿ ಹೆಸರಿನಂತೆ–ವಿಜಯಕ್ಕೆ ಗುಣಿಯಾಗಿರುವಳು. ಇಂಥ ವಿಜಯಾರಾಣಿಯ ಜೊತೆಯಲ್ಲಿ ರಾಜಾ ಸತ್ಯಂಧರ ಮಹಾರಾಜರು ಭೋಗ ವಿಲಾಸದಲ್ಲಿ ಮಗ್ನರಾದದ್ದು ಕಂಡು ಬರುತ್ತದೆ. ಪಲಂಗ, ಗಾದಿ, ಟೆಕ್ಕೆ ಮೊದಲಾದ ಶಯನ ಗೃಹವು.)

ಸತ್ಯಂಧರ— ವಿಜಯಾ ! ಸ್ವರ್ಗೀಯ ಸೌಂದರ್ಯವೂ, ಮಧ್ಯಲೋಕದ ಸೌಂದರ್ಯವೂ ರಾಜ ಸೌಂದರ್ಯಗಳೆಲ್ಲ (ಕೈ ಮತ್ತು ಕಣ್ಣುಗಳ ಸನ್ನೆ ಮಾಡುತ್ತ) ನಿನ್ನಲ್ಲಿ ಸಮಾವೇಶವಾಗಿವೆ. ನೀನು ನನಗೆ ಆಕೃತಿಯಲ್ಲ ಪೃಥ್ವಿಯಾಗಿರುವೆ. ನಿನ್ನ ಈ ಸೌಂದರ್ಯವೂ, ನಿನ್ನ ಕೋಮಲ ಕಾಯವೂ, ಮುಗುಳ ನಗೆಯೂ ನನಗೆ ಆನಂದವನ್ನುಂಟು ಮಾಡುತ್ತಲಿದೆ. ನಿನ್ನ ಮುಂದೆ ಜಗತ್ತು ಶೂನ್ಯಮಯವಾಗಿದೆ. (ಅತ್ಯಂತ ಆಸಕ್ತಿಯಿಂದ ರಾಣಿಯನ್ನು ತನ್ನ ಹತ್ತಿರ ತಕ್ಕೊಳುತ್ತಾನೆ) ವಿಜಯಾ !

ವಿಜಯಾರಾಣಿ— ಪ್ರಾಣನಾಥರೇ! ನನ್ನ ಸೌಂದರ್ಯದ ತಿಲಕವು ನೀವೆ. ಮಹಾರಾಜರ ದಯೆ ಮತ್ತು ಉದಾರ ಪ್ರೇಮಾಂಕುರದ ಗಂಧವೇ ಎನಗೆ ಸುಗಂಧಿತ ಮಾಡುತ್ತಿದೆ. ಸೌಭಾಗ್ಯದಿಂದ ನೀವೇ ನನ್ನ ಹಣೆಯ ತಿಲಕವಾಗಿ ಹೊಳೆಯುತ್ತಿರುವಿರಿ. ನಿಮ್ಮಿಂದ ನನಗೆ ಈ ಸೌಂದರ್ಯ, ಲಕ್ಷ್ಮೀರೂಪ, ಲಾವಣ್ಯ ಮತ್ತು ಸೌಭಾಗ್ಯ ಪ್ರಾಪ್ತವಾಗಿದೆ.

ಸತ್ಯಂಧರ— ರಾಣಿಯ ಸಹವಾಸವು ನನಗೆ ಆನಂದದ ಪ್ರತೀಕವಾಗಿದೆ.

ವಿಜಯಾರಾಣಿ— ರಾಜೇಂದ್ರ ತಮ್ಮ ಪ್ರಾಣದಲ್ಲಿಯೇ ನನ್ನ ಜೀವನವು. ತಮಗೆ ಯಾವ ತರದಿಂದ ಸುಖ ಶಾಂತಿಗಳ ಲಾಭವಾಗುತ್ತ

ದೆಯೋ ಅದನ್ನು ತಮಗೆ ಅರ್ಪಣ ಮಾಡಿರುವೆ. ತಮ್ಮ ಕ್ಷೇಮವೇ ನನ್ನ ಕ್ಷೇಮ. "ಪತಿರಾಜರ ಮಾನಸಿಕ ಇಚ್ಛೆಗಳನ್ನು ತೃಪ್ತಿ ಪಡಿಸುವದೇ ಸೌಭಾಗ್ಯವತಿಯ ಲಕ್ಷಣ."

ಸತ್ಯಂಧರ— ಸೌಭಾಗ್ಯವತಿಯ ಆಕಾಂಕ್ಷೆಗಳನ್ನು ಈಡೇರಿಸುವದೇ ಪತಿದೇವರ ಆದ್ಯ ಕರ್ತವ್ಯ.

ವಿಜಯಾರಾಣಿ— ಪತಿದೇವರೆ ನಾನು ತಮ್ಮ ಈ ಶಾಂತ ಆಲ್ಹಾದ ಮಾದ ಕತೆಯ ಕಕ್ಷೆಯಲ್ಲಿ ಸಮಾವೇಶಳಾಗಿದ್ದೇನೆ. ನನ್ನ ಸುಖವು ತಮ್ಮಲ್ಲಿಯೇ ಅಡಕವಾಗಿದೆ.

ಸತ್ಯಂಧರ— ಮಹಾರಾಣಿಯೇ ! ಯಾವನು ಅತಿ ಉಷ್ಣತೆಯಿಂದ ಸಂತಪ್ತನಾಗುತ್ತಾನೆಯೋ ಅವನಿಗೆ ಮಂದವಾದ ವಾಯುವಿನ ಸ್ಪರ್ಶವೂ ಶಾಂತ ಮಾಡುತ್ತದೆ. ಅದೇ ಪ್ರಕಾರ ನಿನ್ನ ಮನೋಭಾವನೆ, ಸೌಂದರ್ಯ, ಗುಣ ಸಂಪನ್ನತೆಯಿಂದ ಕೂಡಿದ ನಿನ್ನ ಸುಂದರ ಕಾಯವು ನನಗೆ ಸ್ವರ್ಗೀಯ ಆನಂದವನ್ನುಂಟು ಮಾಡುತ್ತಲಿದೆ.

ವಿಜಯಾರಾಣಿ— ಕಾಮದೇವರೆ ! ತಮ್ಮ ಜೊತೆಯಲ್ಲಿಯೇ ಚಿರಕಾಲದ ವರೆಗೆ ಇರಬೇಕೆಂದು ನನಗೆನಿಸುತ್ತದೆ. ಹೀಗೆ ಇರಬಹುದಲ್ಲವೆ?

ಸತ್ಯಂಧರ— (ರಾಣಿಯ ಪ್ರೀತಿಯ ಮಾತುಗಳಿಂದ ಪ್ರೇಮಭರಿತನಾಗಿ) ವಿಜಯಾ, ವಿಜಯಾ, ನಿನ್ನನ್ನು ಎಂದಿಗೂ ಬಿಡಬಾರದೆಂದನಿಸುತ್ತದೆ.ಅಂತರದ ಮಾತನಾಡಿದರೆ ಮನಸ್ಸಿಗೆ ಬಹಳಷ್ಟು ವ್ಯತ್ಯಾಸವಾಗುತ್ತದೆ. ವಿಜಯಾ ನಿನ್ನ ಮುಖ ಕಮಲದೆಡೆಗೆ ನೋಡಿದರೆ ನನ್ನ ಹಸಿವೆ ನೀರಡಿಕೆಗಳು ಹಾರಿ ಹೋಗುತ್ತವೆ. ನಿನ್ನ ನಯನಗಳನ್ನು ನೋಡಿದ ಕೂಡಲೇ ಏಕಾಗ್ರ ಚಿತ್ತನಾಗಿ ನೋಡುತ್ತಲೇ ಇರಬೇಕೆಂದೆನಿಸುತ್ತದೆ. ನಿನ್ನ ಗುಲಾಬಿ ಗಲ್ಲಗಳನ್ನು ನೋಡಿದಾಗ ಗುಲಾಬಿಯ ಪುಷ್ಪಗಳನ್ನು ಕೈಯಲ್ಲಿ ತಿಕ್ಕಿ ಸುಗಂಧ ವಾಸನೆ ತೆಗೆದುಕೊಳ್ಳುವ ಹಾಗೆ ಮನವು ಹಾತೊರೆಯುತ್ತಿದೆ. ಈ ನಿನ್ನ ರಸಭರಿತ ಚಂದುಟಿಯ ಮುದ್ದು ತಕ್ಕೊಂಡು ಮಾಧುರ್ಯದ ಸ್ವಾದ ತಕ್ಕೊಳ್ಳಬೇಕೆಂದೆನಿಸುತ್ತದೆ. ಈ ಎಲ್ಲ

ಸರ್ವಾಂಗ ಶರೀರವನ್ನು ನೋಡಿದರೆ ಅದು ಸುಗಂಧಯುಕ್ತ ಚಂದನ ವೃಕ್ಷವೆನ್ನುವಂತೆ ಶೋಭಿಸುತ್ತಿದೆ. ರಾಣಿಯೇ ನಿನ್ನ ಈ ಕೋಮಲ ಶರೀರಕ್ಕೆ ಮತ್ತು ಮಾಧುರ್ಯಕ್ಕೆ ನಾನು ಲುಬ್ಧನಾಗಿದ್ದೇನೆ.

ವಿಜಯಾರಾಣಿ— ಪ್ರಾಣನಾಥರೇ ಹೇಗೆ ಸುಗಂಧಯುಕ್ತ ಚಂದನದ ವೃಕ್ಷಕ್ಕೆ ಮೋಹಿತವಾಗಿ ಸರ್ಪವು ಬಿಡದೆ ಸುತ್ತಿಕೊಳ್ಳುತ್ತದೆಯೋ ಅದೇ ಪ್ರಕಾರ ಈ ತಮ್ಮ ಯೌವನ ಪ್ರೇಮಾಮೃತಕ್ಕೆ ಮೋಹಿತಳಾಗಿದ್ದೇನೆ. ಈ ಪ್ರಕಾರ ತಮ್ಮ ಸಂಗಡ ಸ್ವರ್ಗದ ಸುಖಕ್ಕಿಂತಲೂ ಮಿಗಿಲಾದ ಈ ಯೌವ್ವನ ಪ್ರೇಮದ ಭೋಗೋಪಭೋಗ ಸುಖವನ್ನು ಭೋಗಿಸಬೇಕೆಂದು ಅಪೇಕ್ಷಿಸುತ್ತೇನೆ.

ಸತ್ಯಂಧರ— ಮನೋದೇವಿ, ನೀನು ಸೌಂದರ್ಯದ ಖನಿಯಂತೆ, ಸದ್ಗುಣದ ಪುತ್ಥಳಿಯಂತೆ, ಪ್ರೀತಿಯ ಭಾಂಡಾರದಂತೆ ಕಂಗೊಳಿಸುತ್ತಲಿರುವಿ. ವಿಜಯಾ, ಒಂದು ಹಾಡನ್ನು ಹಾಡಿ ನನ ಮನವನ್ನು ಸಂತೋಷಗೊಳಿಸು.

ವಿಜಯಾರಾಣಿ— ಸಂಧ್ಯಾ ರಾಗದಿ ಚಂದಿರ ಛಾಯೆ ।
ಸುಂದರ ಪ್ರಭೆಯಾನಂದವನೀಯೋ ।
ನಿನ್ನೊಳು ಅಡಗಿದ ಸುಮಧುರ ಮಾಯೆ ।
ಧರಣಿಯನೇ ಆವರಿಸುವದು ऽऽऽ ॥
ವರ ಸುಖ ವೃಷ್ಟಿ ಸುರಿಸುವದು ।
ಭುವಿಯೊಳಗಾಂತಿಹ ಕ್ರಾಂತಿಯ ದೂಡಿ ।
ಜೀವಿಗಳೆಲ್ಲಕೆ ಶಾಂತಿಯ ನೀಡಿ ।
ಅವನಿಯ ತನ್ನಯ ಕರವಶ ಮಾಡಿ
ಕರುಣೆಯ ಹೊನಲನು ಹರಿಸುವದು ऽऽऽ ॥

ಸತ್ಯಂಧರ— ಆಹಾ ಏನಿದು ? ಎಂತಹ ಮೃದು ಕಂಠ, ಕೋಮಲ ವಚನಗಳ ಮಾಧುರ್ಯ. ಈ ನಿನ್ನ ನಯನ ಕಟಾಕ್ಷದಿಂದ ಮಂಕನಾದೆನು. ಮೂರು ಲೋಕದಲ್ಲಿಯ ಅತ್ಯಂತ ಮೌಲ್ಯವಾದ

ದೃಷ್ಟಿಗೋಚರ ವಸ್ತುಗಳು ಈ ನಿನ್ನ ಆಕೃತಿಯಲ್ಲಿ ಸಮಾವೇಶವಾಗಿವೆ. ಕೊಳಲ ನಾದಕ್ಕೆ ನಾಗಸರ್ಪವು ಹೆಡೆಯೆತ್ತಿ ಆಡುತ್ತಿದೆಯೋ ಏಕಾಂತ ಚಿತ್ತವಾಗುತ್ತದೆಯೋ ಆ ಪ್ರಕಾರ ಈ ನಾಗಿಣಿಯ ಸ್ವರಕ್ಕೆ ಈ ನಾಗರಾಜನು ಏಕಾಗ್ರ ಚಿತ್ತನಾಗಿದ್ದಾನೆ.

ವಿಜಯಾರಾಣಿ— ಓ ಹೋ ! ಎನಿತಾದರೂ ತಾವು ರಾಜರು, ಪತಿರಾಜರೇ ತಮ್ಮ ಕೀರ್ತಿರೂಪಿ ಧ್ವಜವು ನಾಲ್ಕು ದಿಕ್ಕಿನಲ್ಲಿ ಹಬ್ಬಿರುತ್ತದೆ. ರಾಜ್ಯದಲ್ಲಿ ನ್ಯಾಯ ನೀತಿಯಿಂದ ಪ್ರಜೆಗಳ ಪಾಲನೆ ಪೋಷಣೆ ಮಾಡುವ ಹೊಣೆಗಾರಿಕೆಯು ತಮ್ಮ ಮೇಲೆ ಇರುವದು. ಪ್ರಧಾನರು, ಮಂತ್ರಿಗಣರು, ಮಾಂಡಲಿಕರು, ಸರದಾರರು, ಸೈನಿಕರು, ಪ್ರಜೆಗಳು ಸಮಾಧಾನ ಮತ್ತು ಶಾಂತಿ ಪೂರ್ವಕ ನ್ಯಾಯ ರೀತಿಯಿಂದ ನಡೆದಿರುವರೋ ಅಥವಾ ಇಲ್ಲವೋ ? ರಾಜಸಿಂಹರ ರಾಜ್ಯವು ಸತ್ಯದಿಂದ ನಡೆದಿರಲೇಬೇಕು. ಆದರೂ ಕೂಡಾ ನಾವು ರಾತ್ರಿ ಹಗಲಿ ಭೋಗ ವಿಲಾಸದಲ್ಲಿ ಮಗ್ನವಾದರೆ ಪ್ರಜೆಗಳ ಸುಖದುಃಖವೇನೆಂಬುದನ್ನು ಒಂದಿಲ್ಲೊಂದು ದಿನ ಅವಶ್ಯವಾಗಿ ನೋಡಬೇಕಾಗುವದು. ಇಲ್ಲದಿದ್ದರೇ !

ಸತ್ಯಂಧರ— ಇಲ್ಲದಿದ್ದರೇನು ? ಏನಾದರೂ ನಮ್ಮ ಪ್ರಜೆಗಳು ಆನಂದದಿಂದಲೇ ಇರುವರು. ಇನ್ನು ನಮ್ಮ ರಾಜ್ಯದ ಕಡೆಗೆ ನೋಡುವ ಅವಶ್ಯಕತೆಯೇ ಇಲ್ಲಾ.

ವಿಜಯಾರಾಣಿ— ಆಗಲಿ. ಆದರೆ ನಾನು ನಿಮ್ಮ ಅಚ್ಚುಮೆಚ್ಚಿನ ರಾಣಿಯಲ್ಲಾ, ಇನ್ನು ಎಷ್ಟೋ ರಾಣಿಯರಿದ್ದಾರೆ ಮತ್ತು ಸುಂದರವಾಗಿಯೂ ಇದ್ದಾರೆ.

ಸತ್ಯಂಧರ— ಹಾಂ ! ಆದರೆ ಆ ಎಲ್ಲ ರಾಣಿಯರಲ್ಲಿ ನೀನೊಬ್ಬಳೇ ಸರ್ವಗುಣ ಸಂಪನ್ನಳಾಗಿರುವಿ. ಆದರಿಂದ ನಿನ್ನ ಮೇಲೆ ಅತಿಶಯ ಪ್ರೇಮವಿರುವದು. (ರಾಣಿಯ ಕೆನ್ನೆ ಹಿಡಿದು) ಗೊತ್ತಾಯಿತೆ ?

ವಿಜಯಾರಾಣಿ— ಆದರೂ..................

ಸತ್ಯಂಧರ— ಆದರೂ ನೀನು ಏನೂ ಚಿಂತೆಯನ್ನು ಮಾಡಬೇಡ (ರಾಣಿಯ ಗದ್ದ ಹಿಡಿದು)

ವಿಜಯಾರಾಣಿ— ಮಹಾರಾಜರೇ ! ಯಾವ ಸಮಯಕ್ಕೆ ಅಶಾಂತಿಯ ಸ್ಥಾನ ಪ್ರಾಪ್ತವಾಯಿತೋ ಅದೇ ವೇಳೆಗೆ ಚಿಂತೆಯ ಸ್ಥಾನವು ದೂರಾಯಿತು. ತಾವು ತಮ್ಮ ವೈಭವದ ವೃದ್ಧಿಯನ್ನು ಮಾಡಬೇಕೆಂದು ಅಪೇಕ್ಷೆ.

ಸತ್ಯಂಧರ— ಮಹಾರಾಣಿ ಈ ಸಮಯದಲ್ಲಿ ಅನ್ಯ ಮಾತುಗಳ ವಿಚಾರವೇ ಬೇಡ. ಪಂಚ ಪಕ್ವಾನ್ನಗಳ ಸ್ವಾದ ತಕ್ಕೊಳ್ಳುತ್ತಿರುವವನಿಗೆ ಜೇವಿನಕಾಯಿಯ ಚಟ್ನಿಯನ್ನು ಕೊಟ್ಟರೆ ಏನಾಗಬಹುದು ?

ವಿಜಯಾರಾಣಿ— ಪತಿದೇವರೇ ನಾನು ಹೇಳುವ ಮಾತೇನೆಂದರೆ.

ಸತ್ಯಂಧರ— ನಾನು ತಿಳಿದುಕೊಂಡಿರುವೆ.

ವಿಜಯಾರಾಣಿ— ಮಹಾರಾಜರೇ ಬೇರೆ ಏನೂ ತಿಳಕೊಳ್ಳಬಾರದು.—

ಸತ್ಯಂಧರ— ನಾನು ಬೇರೆ ಏನನ್ನು ತಿಳಿದುಕೊಂಡಿಲ್ಲ ಮಹಾರಾಣಿ. ಅದರಲ್ಲಿಯೂ ಹಿತಮಿತ ಮಾತುಗಳಿರುವವು. ಆದರೆ ಹೇಳುವದಿಷ್ಟೇ, ಎಲ್ಲಿ ನಮಗೆ ಐಶ್ಚಿಕ ವಸ್ತು ಪ್ರಾಪ್ತವಾಗಿದೆ ಅಂದ ಮೇಲೆ ಇಚ್ಛಾ ಪೂರ್ತಿಯನ್ನು ಮಾಡಬಾರದೆ ?

ವಿಜಯಾರಾಣಿ— (ಲಜ್ಜಿತಳಾಗಿ, ಹಸನ್ಮುಖಿಯಾಗಿ) ಹಾಂ ! ಬೇಕು. ಯಾವ ಪ್ರಕಾರ ಹಿಮದಿಂದ ತುಂಬಿ ಕಾಣಿಸುವ ಹಿಮಾಲಯ ಪರ್ವತವೂ ಸೂರ್ಯ ಕಿರಣಗಳು ಬಿದ್ದು ಆ ಹಿಮಾಲಯದ ತೇಜ............

ಸತ್ಯಂಧರ— ನಿನ್ನ ಹಾಗೆ ಹೊಳೆಯುವದಲ್ಲವೆ ? ಹೀಗೆ ಅಲ್ಲವೆ ?

ವಿಜಯಾರಾಣಿ— (ಲಜ್ಜಿತಳಾಗಿ) ಉಂಹುಃ ತಮ್ಮ ಹಾಗೆ ಹೊಳೆಯುತ್ತದೆ.

ಸತ್ಯಂಧರ— ನಮ್ಮಂತೆಯೇ ! ಮತ್ತೆ ನಿನ್ನ ಹಾಗೆ.

ವಿಜಯಾರಾಣಿ— ನನ್ನ ಹಾಗಲ್ಲ ನಿಮ್ಮ ಹಾಗೆ.

ಸತ್ಯಂಧರ— ನಮ್ಮಿಬ್ಬರ ಹಾಗೆ.

ವಿಜಯಾರಾಣಿ— ತಮ್ಮ ಹಾಗೆ. ಏಕೆಂದರೆ ಅರುಣೋದಯ ಪ್ರಕಾಶದ ಸಮಾನ ಸತ್ಯ ಚಾರಿತ್ರಮಯ ನಯನದ ತೇಜವು ಸಮಸ್ತ ಪ್ರಜೆಗಳ ಮೇಲೆ ಹಬ್ಬಿದೆ. ಇದೇ ಕಾರಣದಿಂದ ಸಮಸ್ತ ಪ್ರಜೆಗಳು ನ್ಯಾಯ ನೀತಿಯಿಂದ ನಡೆದಿರುತ್ತಾರೆ. ಮುಂದಾದರೂ ಇದೇ ಪ್ರಕಾರ ನಡೆಯುವದಕ್ಕೋಸ್ಕರ ತಮಗೆ ಒಂದಿಲ್ಲೊಂದು ದಿನ ಒಡ್ಡೋಲಗದಲ್ಲಿ ಸಿಂಹಾಸನದ ಮೇಲೆ ಕೂಡ್ರಬೇಕಾಗುವದು. ಮತ್ತು ಆಜ್ಞೆ ಯಾವಾಗಲೂ ಉಳಿಯಬೇಕು. ಅದು ನಿಂತರೆ ರಾಜಕಾರಣದಲ್ಲಿ ಅಸ್ಥಿರತೆಯು ನಿರ್ಮಾಣವಾಗಬಹುದು.

ಸತ್ಯಂಧರ— ನೀನು ಹೇಳುವದು ನಿಜವಾದರೂ ನನ್ನದೂ ನಿಜ.

ವಿಜಯಾರಾಣಿ— ಹಾಂ ತಮ್ಮದು ಯಾವಾಗಲೂ ಅಯೋಗ್ಯವಿಲ್ಲಾ. ಯೋಗ್ಯತೆಯ ವೃದ್ಧಿಯಾಗುತ್ತ ನಡೆದಿದೆ. ಇದರ ಸಲುವಾಗಿ ಸ್ವಲ್ಪ ವೇಳೆಯನ್ನು ವೆಚ್ಚ ಮಾಡಬೇಕಾಗುವದು.

ಸತ್ಯಂಧರ— ಆ ಸಮಯ ಬರುವವರೆಗೆ ಎಲ್ಲ ಸಮಯವು ನಿನಗಾಗಿ.

ವಿಜಯಾರಾಣಿ— ತಮ್ಮ ಪೂರ್ವ ಕೃತ ಪುಣ್ಯವು ಅಪಾರವಿದೆ ಆದರಿಂದ ತಮಗೆ ಈ ಭವದಲ್ಲಿ ಸಂಸಾರದ ಯಥೇಚ್ಛ ಸುಖವು ಪ್ರಾಪ್ತವಾಗಿದೆ.


ಸತ್ಯಂಧರ— ಹೌದು ಅದಕ್ಕಾಗಿ ನಾವು ಸಮಸ್ತ ಪ್ರಜೆಗಳಿಂದ ನಿಃಶಂಕರಾಗಿದ್ದೇವೆ.

ವಿಜಯಾರಾಣಿ— ಪುಣ್ಯವಿರುವವರೆಗೆ ಅಸಾಧ್ಯವು ಸಾಧ್ಯವಾಗುತ್ತದೆ. ಪುಣ್ಯದ ಸಮಾಪ್ತಿಯಾದಾಗ ಸಾಧ್ಯವು ಅಸಾಧ್ಯವಾಗುತ್ತದೆ.

ಸತ್ಯಂಧರ— ಹೌದು. ಈ ಹೊತ್ತು ಎಲ್ಲವೂ ಸಾಧ್ಯವಿದೆ.

ವಿಜಯಾರಾಣಿ— ಸ್ವಾಮಿ, ತಮ್ಮ ಸುಕೃತ ಪುಣ್ಯದಲ್ಲಿ ಅನಂತ ಗುಣಗಳ ಸಮೂಹವಿದೆ. ಆ ಗುಣ ಸಮೂಹವು ಈ ತಮ್ಮ ಕಾಮನಂತಿರುವ ಆಕೃತಿಯಲ್ಲಿ ಇಳಿದಿರುತ್ತದೆ. ಇದಕ್ಕೋಸ್ಕರ........

ಸತ್ಯಂಧರ— ಹೇಳು, ಹೇಳು ರಾಣಿ. ನಿಲ್ಲಿಸಿದೇಕೆ ?



ರಾಜಾ ಸತ್ಯಧ್ವಜನು ಪ್ರಿಯ ವಿಜಯಾರಾಣಿಯ ಕೂಡ ಪ್ರೇಮವಿಲಾಸದಲ್ಲಿ ಇದ್ದಾನೆ.

ವಿಜಯಾರಾಣಿ— ರಾಜೇಂದ್ರ ನಾನು ಮಾತನಾಡುವದಿಷ್ಟೇ, ಜೇನುಹುಳಗಳು ಸುಗಂಧ ಪುಷ್ಪದ ಮಧುವನ್ನು ಶೋಧಿಸುವಂತೆ ನಾನು ಈ ಕಾಮರೂಪಿ ಕೋಮಲ ಕಾಯದಿಂದ ಪ್ರೇಮಾಮೃತವನ್ನು ಶೋಷಣ ಮಾಡುತ್ತಿದ್ದೇನೆ. ವಾಸ್ತವದಲ್ಲಿ ತಮಗಿಂತಲೂ ನಾನು ಹೆಚ್ಚಿಗೆ ಮೋಹಿತಳಾಗಿದ್ದೇನೆ. ಒಂದು ಕ್ಷಣವೂ ಕೂಡಾ ತಮ್ಮನ್ನು ಅಗಲಿರಲಾರೆ.

ಸತ್ಯಂಧರ— ನಿನ್ನನ್ನು ಬಿಟ್ಟು ನಿಲ್ಲುವದು ಸಾಧ್ಯವಾಗಲಾರದು. ಸರೋವರದಲ್ಲಿರುವ ಕಮಲಿನಿಯ ಮಾಧುರ್ಯಕ್ಕೆ ಮೋಹವಶವಾದ ಭ್ರಮರವು ಸೂರ್ಯನು ಅಸ್ತನಾದರೂ ಕೂಡಾ ಹೊರಗೆ ಹೋಗಲಾರದು. ಕಮಲನಿಯು ಪಕ್ಕಳೆಗಳನ್ನು ಮುಚ್ಚಿಕೊಳ್ಳುತ್ತದೆ. ಆಗ ಆ ಭ್ರಮರವು ಒಳಗೆ ಸಿಲುಕುವಂತೆ ನಾನು ಈ ರೂಪ ಸೌಂದರ್ಯದಿಂದ ತುಂಬಿರುವ ನಿನ್ನ ಅಮಲಪ್ರೇಮಕ್ಕೆ ಲುಬ್ಧನಾಗಿದ್ದೇನೆ. ತಿಳಿಯಿತೆ? ಎಲ್ಲ ಸೃಷ್ಟಿಯು (ರಾಣಿಯ ಎರಡು ಭುಜಗಳನ್ನು ಹಿಡಿದು ಪಾದದಿಂದ ಮಸ್ತಕದವರೆಗೆ ಕೈಯಿಂದ ತೋರಿಸುತ್ತಾನೆ.) ಇದರಲ್ಲಿ ಸಮಾವೇಶವಾಗಿದೆ ಅಂದಮೇಲೆ ಈ ಸೃಷ್ಟಿಯನ್ನು ಬಿಟ್ಟು ನಾನೆಲ್ಲಿಗೆ ಹೋಗಬೇಕು. (ಎಂದು ರಾಣಿಯನ್ನು ಅಪ್ಪಿಕೊಂಡು ಅಲಿಂಗಿಸಲು ಪ್ರಾರಂಭಿಸುತ್ತಾನೆ.)

ಸಂವಾದ ಪದ

ರಾಣಿ— ಮಮಕರುಣಸಾಗರ ಪ್ರೇಮಸಾಗರ ಓಽಽಽ ।

ರಾಜ— ಮಮಹೃದಯ ಸ್ವಾಮಿನಿ ಹಂಸಗಾಮಿನಿ ಓಽಽಽ ।

ಇಬ್ಬರೂ— ಈ ಪ್ರೀತಿಯ ಜ್ಯೋತಿ ಅಮರವಾಗಲಿ
ಬಾಳು ಬೆಳಗಲಿ ಓಽಽಽ ।

ರಾಜ— ಕೋಕಿಲೆ ನೀನೆ ಮಾಮರ ನಾನೇ ।
ಗಾನವ ಪಾಡುವ ಸಂಭ್ರಮ ಮನ್ಮಥರತಿಯ ಸಮಾಗಮ

ರಾಣಿ— ಚಂದಿರ ನೀವೇ ರೋಹಿಣಿ ನಾನೇ ಹೃದಯ
ಹೃದಯಗಳ ಸಂಗಮು ತಿಂಗಳ ಬೆಳಕಿನ ಪೂರ್ಣಿಮು
ಇಬ್ಬರೂ— ಜೀವನ ನೌಕೆಗೆ ಪ್ರೇಮು ಪತಾಕೆ ವಿರಚಿಸಿ
ನಡೆಯೋಣ ॥ ೧ ॥
ರಾಜ—ಸುಮಧುರ ವಾಣಿ ಸುಂದರ ರಾಣಿ ನಾರಿ ಕುಲಕೆ ಶಿರೋಮಣಿ
ರಾಣಿ— ವೀರರ ವೀರ ಗುಣ ಗಂಭೀರ ಅರಿಕುಲಕೃತ
ಸಂಹಾರ ಒssss ।
ಇಬ್ಬರೂ— ನಮ್ಮಯ ಸರಸ ಪ್ರೇಮು ವಿಲಾಸ ಹೃದಯಕೆ
ಸಂತೋಷ
ರಾಜ— ಸರಸಿಯು ನೀನೇ ಹಂಸನು ನಾನೇ ನಮ್ಮೀರ್ವರ
ಒಡನಾಟವು ಕಣ್ಮನಗಳ ಸವಿಯೂಟವು
ರಾಣಿ— ದಿನಕರ ನೀವೇ ಕಮಲಿನಿ ನಾನೇ ಕಿರಣದಿ
ವಿಕಸಿತಳಾಗುವೆ ಮುಕರಂದವ ಸಲೆ ಬೀರುವೆ ॥
ಇಬ್ಬರೂ— ಈರ್ವರೂ ಕೂಡಿ ಕಾರ್ಯವ ಮಾಡಿ
ರಾಜ್ಯವ ನಡೆಸೋಣ ॥ ಈರ್ವರೂ.... ॥ ೨ ॥

(ತೆರೆ ಬೀಳುವದು)

ಐದನೆಯ ದೃಶ್ಯ

(ವೇಶ್ಯೆಯ ಮನೆಗೆ ಕಾಷ್ಠಾಂಗಾರನು ಬರುತ್ತಿದ್ದಾನೆ. ಸ್ವಚ್ಛ ಅರಿವೆಗಳನ್ನು ಹಾಕಿಕೊಂಡು ಒಳ್ಳೇ ಥಾಟಾಗಿದ್ದಾನೆ. ವೇಶ್ಯೆಯು ಕಾಷ್ಠಾಂಗಾರನ ಬರುವಿಕೆಯನ್ನು ತಿಳಿದು)

ವೇಶ್ಯಾ— ಬರ್ರಿ ಬರ್ರಿ ರಾವಸಾಹೇಬರ ಅಣ್ಣಾಸಾಹೇಬರ ಬರ್ರಿ ಬರ್ರಿ. ಎಲ್ಲಿಂದ ಬಂದಿರಿ ? ಬರ್ರಿ ಕುಳಿತುಕೊಳ್ಳಿರಿ, ಕುಳಿತುಕೊಳ್ಳಿರಿ (ಕೂಡ್ರಲು ಆಸನ ಕೊಡುತ್ತಾಳೆ.)

ಕಾಷ್ಠಾಂಗಾರ— ಬಂದಿರುವೆ ನಿನ್ನ ಕಡೆಗೇ ಬಂದಿರುವೆ.

ವೇಶ್ಯಾ— ಕುಳಿತುಕೊಳ್ಳಿರಿ, ಕುಳಿತುಕೊಳ್ಳಿರಿ. [ಆದರದಿಂದ ಕೂಡ್ರಿಸುತ್ತಾಳೆ. ಕಾಷ್ಠಾಂಗಾರನು ಕುಳಿತುಕೊಳ್ಳುತ್ತಾನೆ. ಜೇಬಿನಿಂದ ಸುವರ್ಣ ನಾಣ್ಯ ತುಂಬಿದ

ರೇಶಿಮೆಯ ಚೀಲ ತೆಗೆದು ಕೊಡುತ್ತಾನೆ. ವೇಶ್ಯೆಯು ಅದನ್ನು ತೆಗೆದುಕೊಂಡು ಸಂತೋಷದಿಂದ ನಗುತ್ತಾ ಒಳಗೆ ಹೋಗುತ್ತಾಳೆ. ಕಾಷ್ಠಾಂಗಾರನು ಸಹಜವಾಗಿ ಅಂಜಿಕೆಯಿಂದ ಹೊರಗೆ ನೋಡುತ್ತಾನೆ. ಕಿಡಿಕಿಯೊಳಗಿಂದ ಪಶ್ಚಿಮ ದಿಶೆಯ ಕಡೆಗೆ ನೋಡುತ್ತಾನೆ. ಪೂರ್ವ ಪಶ್ಚಿಮ ಎರಡೂ ದಿಕ್ಕುಗಳ ಕಡೆಗೆ ನೋಡಿ ಹೊರಟು ಹೋಗುತ್ತಾನೆ. ವೇಶ್ಯೆಯು ಒಳಗಿನಿಂದ ಹಣ್ಣು ಹಾಲು ಮುಂತಾದ ಉಪಹಾರದ ತಟ್ಟೆಯನ್ನು ತಕ್ಕೊಂಡು ಹೊರಗೆ ಬಂದು ಅತ್ತಿತ್ತ ನೋಡಿ) ಏನ ಅವ್ವಾ ಎಲ್ಲಿ ಹೋತಿದು ಮೀನು? (ಮತ್ತೆ ಹೊರಗೆ ಒಳಗೆ ನೋಡುತ್ತಾಳೆ,) ಒಂದಲ್ಲಾ ಎರಡಲ್ಲಾ ಹಣದ ಚೀಲಾನಃ ಕೊಟ್ಟಿದ್ದಾನೆ. ಮತ್ತ ಏನ ಚಮತ್ಕಾರ ಇದಾ? ತುಸು ಹಣ ಕೊಟ್ಟವನು ಹಾಗೇ ಹೋಗುವದಿಲ್ಲ. ಬಹಳ ಹಣ ಕೊಟ್ಟಾನಂತ ಭಲೋ ಭಲೋ ಮಾಡಿ ತರಬೇಕಂತ ಒಳಗ ಹೋದಿನಿ ಹೊರಗ ಬರುವದರೊಳಗ ಇವನ ಪತ್ತೆನ ಇಲ್ಲಲಾ? ಇದರಲ್ಲಿ ಏನರೆ ರಹಸ್ಯ ಇರಬೇಕು. ಇರಲಿ ಇವನ ಶೋಧ ಇನ್ನ ಮಾಡಲಿಕ್ಕೆ ಬೇಕು, ಹೋಗಿ ನೋಡುತ್ತೇನೆ. (ಹೋಗುವಳು.) (ರಾಜದರ್ಬಾರು ದಲ್ಲಿ ಬರುತ್ತಾಳೆ.)

ವೇಶ್ಯಾ— ನಮಸ್ಕಾರರಿ ಸರಕಾರ.

ಸತ್ಯಂಧರ— (ಪ್ರಧಾನ ಮಂತ್ರಿಯ ಕಡೆಗೆ ಸ್ವಲ್ಪ ಆಶ್ಚರ್ಯದಿಂದ ನೋಡಿ) ಇವಳು ಯಾರು?

ವೇಶ್ಯಾ— ನಾನು ನಗರ ವೇಶ್ಯಾ ಇರುವೆ ಸರಕಾರ.

ಸತ್ಯಂಧರ— ಏನು ನಗರ ವೇಶ್ಯಾ! ಮತ್ತು ಈ ರಾಜದರಬಾರದಲ್ಲಿ!

ವೇಶ್ಯಾ— ನೋಡರಿ ಸರಕಾರ ತಿರುಗಿ ತಿರುಗಿ ದಣದ ಬನ್ನಿ ಒಂದ ಮನ ಸ್ಯಾನ ಸಲುವಾಗಿ.

ಪ್ರಧಾನ ಮಂತ್ರಿ— ಅವ್ವಾ ನಿನಗ ಏನ ಹೇಳುವದದೆ?

ವೇಶ್ಯಾ— ಏನು ಹೇಳ್ಳಿ ನಮ್ಮದೂ ವೇಶ್ಯಾನ ಧಂದೆ ದಿನಾಲು ಹತ್ತಾರು ಜನ ಬರುತ್ತಾರೆ ಹೋಗುತ್ತಾರೆ. ಆದರ ನಿನ್ನಿನಂಥ ಮನಸ್ಯಾನ ಇನ ತನಕ ಎಂದೂ ಕಂಡಿಲ್ಲ.

ಪ್ರಧಾನ ಮಂತ್ರಿ— ಅವ್ವಾ ನಿನ್ನ ವಿಷಯ ಏನದ ಹೇಳಿ ಬಿಡು.

ವೇಶ್ಯಾ— ಒಬ್ಬ ಮನುಷ್ಯ ಬಂದ. ಅವನನ್ನು ಸ್ವಾಗತಿಸಿ ಮೇಲೆ ಕರೆದೆನು. ಅವನು ಬಂದು ಕುಳಿತುಕೊಂಡ ಮತ್ತು ಹೊನ್ನಿನ ನಾಣ್ಯ ತುಂಬಿದ ಚೀಲ ನನ್ನ ಕೈಯಲ್ಲಿಟ್ಟ. ನಾನು ಸಂತೋಷದಿಂದ ತೆಗೆದುಕೊಂಡು ಅವನಿಗೆ ಉಪಹಾರದ ಸಾಮಗ್ರಿಯನ್ನು ತರಲು ಒಳಗೆ ಹೋದೆ. ಹೊರಗೆ ಬರುವಷ್ಟರಲ್ಲಿ ಅವನು ಹೋಗಿ ಬಿಟ್ಟಿದ್ದ. ಇಂಥ ಮನುಷ್ಯನು ಯಾವನಿರಬೇಕು ? ಇದರ ಶೋಧ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುವೆ.

ಸತ್ಯಂಧರ— ಮಂತ್ರಿವರ್ಯರೇ ! ಈ ಹೊತ್ತೇ ಇದರ ಶೋಧ ಮಾಡಿಕೊಡಬೇಕು.

ಪ್ರಧಾನ ಮಂತ್ರಿ— ರಾಜಾಜ್ಞೆ ! ಸೇವಕನೇ ನಗರದಲ್ಲಿ ಡಂಗುರ ಸಾರಿ ಇಂಥ ಮನುಷ್ಯನು ಯಾವನಿರಬೇಕೆಂಬುದನ್ನು ಶೋಧಿಸಿ ಅವನನ್ನು ದರಬಾರದಲ್ಲಿ ಹಾಜರ ಮಾಡಬೇಕು. ಅವನು ಸ್ವತಃ ಹಾಜರಾಗುವಂತೆ ಮಾಡಬೇಕು.

ಸಿಪಾಯಿ— ಅಪ್ಪಣೆ ಮಂತ್ರಿವರ್ಯರೇ (ಹೋಗುವನು) (ಪರದೆ ಬೀಳುತ್ತದೆ) (ಸಿಪಾಯಿಯು ಪ್ರವೇಶಿಸಿ ಡಂಗುರ ಸಾರುತ್ತಾನೆ). ಹಡಪ್, ಝಡಪ್ ಪಕಢ ಕೇಳರ್‍ಯಪೋ ಕೇಳಿರಿ. ನಿನ್ನಿನ ದಿವಸ ನಗರ ವೇಶ್ಯೆಯ ಮನೆಗೆ ಹೋಗಿ ಹಣದ ಚೀಲವನ್ನು ಕೊಟ್ಟು ಯಾವನು ತಿರುಗಿ ಬಂದಿದ್ದಾನೆಯೋ ಅವನು ಈಗೀಂದೀಗಲೆ ರಾಜದರಬಾರದಲ್ಲಿ ಬಂದು ಹಾಜರಾದರೆ ಒಳ್ಳೇದು. ಇಲ್ಲವಾದರೆ ಅವನ ಶೋಧ ಮಾಡಿ ಗಲ್ಲಿನ ಶಿಕ್ಷೆ ಕೊಡಲಾಗುವದಪೋ (ಡಂಣ್ ಡಂಣ್ ಎಂದು ತಮಟೆ ಬಾರಿಸುವನು ಹಿಂದೆ ಹೋಗಿ ಮತ್ತೊಮ್ಮೆ ಸಾರುತ್ತಾನೆ ಡಂಗುರದವನು ದಾರಿಯಲ್ಲಿ ಬರುವಷ್ಟರಲ್ಲಿ ಒಂದು ಕಡೆಯಿಂದ ಹರಕು ಬಟ್ಟೆಗಳನ್ನು ಹಾಕಿಕೊಂಡು ಕಾಷ್ಠಾಂಗಾರನು ಭಯಭೀತನಾಗಿ ಪ್ರವೇಶಿಸುತ್ತಾನೆ.)

ಕಾಷ್ಠಾಂಗಾರ— (ಸ್ವಗತ) ರಾಜಾ ಹುಕುಮು ತಗದ ವ್ಯಾಲ ಫಾಸಿ ಕೊಟ್ಟಲ್ಲದ ಬಿಡವನ ಅಲ್ಲ ಅಂದ ವ್ಯಾಲ ನಾನ ಮೊದಲ

ಹೋಗಿ ಹಾಜರಾದ್ನಿ ಅಂದರ ನನ್ನ ಜೀವರ ಉಳದೀತು. (ಪ್ರಕಟ) (ಸಿಪಾಯಿಯನ್ನು ಉದ್ದೇಶಿಸಿ) ಓ ಸಿಪಾಯಿ ದಾದಾ ನಡಿರಿ ನಾನ ಆದಿನರಿ ಆ ಮನಿಸ್ಯಾ.

ಸಿಪಾಯಿ— ಹೂಂ ನಡಿ (ಇಬ್ಬರೂ ಹೋಗುವರು ಪರದೆ ಏಳುತ್ತದೆ. ಇಬ್ಬರೂ ರಾಜದರ್ಬಾರದಲ್ಲಿ ಹಾಜರ ಆಗುವರು.) ನಮಸ್ಕಾರ ಪ್ರಭುಗಳೇ. ತಮ್ಮ ಅಪ್ಪಣೆಯಂತೆ (ಕಾಷ್ಠಾಂಗಾರನ ಕಡೆಗೆ ಕೈ ಮಾಡಿ ತೋರಿಸುತ್ತಾನೆ.)

ಕಾಷ್ಠಾಂಗಾರ— ನಮಸ್ಕಾರ ಸರಕಾರರ ನಾನರಿ ಆ ಮನಿಸ್ಯಾ (ವೇಶ್ಯಾ ಮತ್ತು ರಾಜದರ್ಬಾರದ ಜನರು ಆಶ್ಚರ್ಯಚಕಿತರಾಗುತ್ತಾರೆ.)

ಪ್ರಧಾನಮಂತ್ರಿ—ಇದ್ದ ಸಂಗತಿಯನ್ನೆಲ್ಲಾ ಸರಿಯಾಗಿ ಹೇಳಿ ಬಿಡಪ್ಪಾ.

ಕಾಷ್ಠಾಂಗಾರ— ಸರಕಾರ! ನಾ ಕಟ್ಟಿಗಿ ಮಾರಿ ಹೊಟ್ಟಿ ತುಂಬಿಕೊಳ್ಳುವ ಮನಿಸ್ಯಾರಿ. ದಿನದ್ಹಂಗ ಕಟಗಿ ಮಾರುದಕ ಊರಾಗ ಹೋಗಿನ್ರರಿ ಅಲ್ಲಿ ಈ ಹೆಂಗಸ ಮಾಳಿಗಿಮ್ಯಾಲಿಂದ ನನ್ನ ಮೈಮ್ಯಾಲ ಉಗಳಿದಳು ನಾ ಮ್ಯಾಲ ನೋಡೋದರೊಳಗ ಮತ್ತ ಉಗಳಬೇಕೇನರಿ? ನಾನು ಹಾದ್ಯಾಗ ಒಬ್ಬನ್ನ ಈ ಹೆಂಗಸ ಯಾರಪಾ ನನ್ನ ಮೈಮ್ಯಾಲ ಎಲಿ ತಿಂದ ಉಗಳಿದಳು ಅಂತ ಕೇಳಿದ್ನಿ. ಅವಾ ಅಕಿ ನಗರ ವೇಶ್ಯಾ ಆದಾಳಂತ ಹೇಳಿದ. ನನಗ ಸಿಟ್ಟು ಬಂದ ಎರಡ ತಿಂಗಳತನಕ ದುಡದ ದುಡದ ನೂರಾರು ಹೊನ್ನ ಗೊಳೆ ಮಾಡಿ ಆಕಿ ಮನಿಗಿ ಹೊದಿನರಿ ಆಕಿಗೆ ಹಣವೆಲ್ಲ ಕೊಟ್ಟೆನರಿ. ರೂಪಾಯಿ ತಗೊಂಡ ಆಕಿ ಒಳಗ ಹ್ವಾದ್ಲು. ಆ ವೇಳೆದಾಗ ಅಂಜಿಕಿಯಿಂದ ಯಾರರೆ ಬಂದಾರಂತ ನಾ ಹೊರಗ ನೋಡ್ನಿ. ಅಷ್ಟೊತ್ತಿನಾಗ ಗುಂಡ ಚಂದ್ರಾಮ ಮುಗಲಮ್ಯಾಲ ಮೂಡಿದ್ದ ಕಾಣಿಸ್ತ ನೋಡರಿ. ಕಿಡಕ್ಯಾಗಿಂದ ಪಶ್ಚಿಮುಕ ನೋಡಿದ್ನಿ ಆ ಕಡೆ ಸೂರ್ಯ ಮುಣಗಲಾಕ ಹತ್ತಿದ್ದ ಕಾಣಿಸಿತು. ಆವಾಗ ಏಕಾಏಕಿ ಸ್ವಾಮಿಗೊಳ ಕಡಿಂದ ಹುಣ್ಣಿವಿ ದಿನ ಬರಮುಚಾರಿ ವರತ ತಗೊಂಡದ್ದ ನೆಪ್ಪ ಆತ ನೋಡರಿ. ಸಾಧು ಮಹಾರಾಜರ ಕಡಿಂದ ತಗೊಂಡ

ನೇಮ ಮುರಿಬಾರದಂತ ಅಲ್ಲಿಂದ ಬಂದ ಬಿಟ್ನ ಇದ ನೋಡಿರಿ!

ಸತ್ಯಂಧರ— ಧರ್ಮದ ಮೇಲೆ ಶ್ರದ್ಧೆ ಇಟ್ಟು ಪ್ರಾಮಾಣಿಕತನದಿಂದ ನಡೆದುಕೊಳ್ಳುವ ಜನ ನಮ್ಮ ರಾಜ್ಯದಲ್ಲಿ ಇದ್ದಾರೆ. ಇದೇ ನಮ್ಮ ರಾಜ್ಯಕ್ಕೆ ಭೂಷಣ. ನಿಜವಾದ ವೈಭವ. ಮಂತ್ರಿಗಳೇ ಇವನಿಗೆ ವಿಶೇಷ ಬಹುಮಾನ ಕೊಟ್ಟು ಕಳಿಸಿರಿ.

ಕಾಷ್ಠಾಂಗಾರ— (ತನ್ನ ಜೀವ ಉಳಿದದ್ದೇ ವಿಶೇಷವೆಂದು ತಿಳಿದು) ನನಗ ಇನಾಮೂ ಬ್ಯಾಡ ಯಾನ ಬ್ಯಾಡ ಹೋಗತ್ಯಾನ ನಾ ಕಳಸರಿ !

ವೇಶ್ಯಾ— ನಾನು ಮಹಾ ಪಾಪಿ ರಾಜ್ಯಕ್ಕೆ ಕಲಂಕ ಹತ್ತುವದು ನನ್ನಂಥ ವರಿಂದ ದುರಾಚಾರಕ್ಕಿಂತ ಸದಾಚಾರ ಮತ್ತು ನಿಯಮ ವ್ರತ ಶ್ರೇಷ್ಠ ಈ ಹಣದ ಚೀಲವನ್ನು ತಿರುಗಿ ತಗೊಳ್ಳಿರಿ. ಇಂದಿನಿಂದ ನಾನು ವೇಶ್ಯಾವೃತ್ತಿಯನ್ನು ಬಿಟ್ಟೆ ಸರಕಾರ.

ಸತ್ಯಂಧರ— ನಮ್ಮ ರಾಜ್ಯದ ಬಗ್ಗೆ ನಮಗೆ ಅಭಿಮಾನವೆನಿಸುತ್ತದೆ. ಮಂತ್ರಿಗಳೇ ಇವಳಿಗಾದರೂ ಬಹುಮಾನ ಕೊಟ್ಟು ಕಳಿಸಿರಿ.

ಪ್ರಧಾನಮಂತ್ರಿ— ಅಪ್ಪಣೆ ಪ್ರಭು.

ವೇಶ್ಯಾ— ಸರಕಾರ ಪಾಪ ಮಾಡುವದನ್ನು ಬಿಟ್ಟದ್ದೇ ನನಗೆ ದೊಡ್ಡ ಬಹುಮಾನ ನಾನು ಹೋಗುವೆ ನಮಸ್ಕಾರ ದೊರೆಗಳೇ.
(ನಮಸ್ಕರಿಸಿ ವೇಶ್ಯೆ ಹಾಗೂ ಕಾಷ್ಠಾಂಗಾರ ಇಬ್ಬರೂ ಹೋಗುವರು.)

(ತೆರೆ ಬೀಳುವದು)

ಆರನೆಯ ದೃಶ್ಯ

ಕಾಷ್ಠಾಂಗಾರ— ಕಟ್ಟಿಗೆ ತಕ್ಕೊಳ್ಳಿರಿ ಕಟ್ಟಿಗೆ............ಕಟ್ಟಿಗೆ ತಕ್ಕೊಳ್ಳಿರಿ ಕಟ್ಟಿಗೆ (ಇವನ ಧ್ವನಿಯು ಅರಮನೆಯಲ್ಲಿರುವ ರಾಜನ ಕಿವಿಗೆ ಬೀಳಲು ಸಿಪಾಯಿಯನ್ನು ಕಳಿಸಿ ಆ ಕಾಷ್ಠಾಂಗಾರನನ್ನು ಕರೆದುಕೊಂಡು ಬರಲು ಹೇಳುವನು. ಸಿಪಾಯಿಯು ಕಾಷ್ಠಾಂಗಾರನ ಬಳಿಗೆ ಹೋಗುತ್ತಾನೆ ಮತ್ತು ....)

ಸಿಪಾಯಿ— ಎಲೋ ಕಾಷ್ಠಾಂಗಾರ, ಮಹಾರಾಜರ ಅಪ್ಪಣೆಯ ಮೇರೆಗೆ ನಿನ್ನನ್ನು ಕರೆಯಲು ಬಂದಿರುವೆನು.

ಕಾಷ್ಠಾಂಗಾರ— (ಆಶ್ಚರ್ಯದಿಂದ) ನನಗೆ? ನನಗೆ ಏಕೆ ಕರೆದಿದ್ದಾರೆ? ನಾನು ಬಂದದ್ದು ಅವರಿಗೇನು ಗೊತ್ತು?

ಸಿಪಾಯಿ— ನಿನ್ನ ಧ್ವನಿಯನ್ನು ರಾಜರು ಕೇಳಿರುವರು.

ಕಾಷ್ಠಾಂಗಾರ— (ಅಂಜುತ್ತ) ಏನು? ನನ್ನ ಧ್ವನಿ! ರಾಜರ ಕಿವಿಯ ಮೇಲೆ!

ಸಿಪಾಯಿ— ಹೌದು ರಾಜರ ಕಿವಿಯ ಮೇಲೆ. ಏನ ಕೇಳತ್ತಿಯೋ ನಡೆ ಮೊದಲು.

ಕಾಷ್ಠಾಂಗಾರ— ನಿಜವಾಗಿ ಸರಕಾರರ ಆಜ್ಞೆಯಾಗಿರುವದೆ?

ಸಿಪಾಯಿ— ನಾನೇನು ಸುಳ್ಳು ಹೇಳುತ್ತೇನೆ ನಿನಗೆ, ನಡೆ ಬೇಗನೆ.

ಕಾಷ್ಠಾಂಗಾರ— ನಾನು ಅಂಥದನ್ನು ಏನು ಮಾಡಿರುವೆ? ನನ್ನನ್ನು ಒಮ್ಮೆಲೆ ಕರೆಯಲಿಕ್ಕೆ.

ಸಿಪಾಯಿ— ವಿಚಾರ ಮಾಡಲು ಸಮಯವಿಲ್ಲ ಆಜ್ಞೆ ಎಂದರೆ ಆಜ್ಞೆ ನಡೆ ಬೇಗನೆ.

ಕಾಷ್ಠಾಂಗಾರ— (ಅಂಜುತ್ತ ಅಂಜುತ್ತ) ಹೌದರಿ ಸರಕಾರರ ಆಜ್ಞೆ ಹೋಗಲಿಕ್ಕೆ ಬೇಕು. ಇನ್ನು ಏನು ಮಾಡುತ್ತಾರೆಯೋ ಏನು ಗೊತ್ತು. ನಡೆಯಿರಿ ನಡೆಯಿರಿ ಸಿಪಾಯಿ ಅಣ್ಣನವರೇ.

ಸಿಪಾಯಿ— (ಸ್ವಗತ) ಇನ್ನು ಇವನ ಸ್ಥಿತಿ ಏನಾಗುವದೋ ಯಾರಿಗೆ ಗೊತ್ತು. (ಪ್ರಕಟ) ನಡೆ ಬೇಗನೆ– (ಇಬ್ಬರೂ ಹೋಗುತ್ತಾರೆ)

(ಎರಡನೆಯ ಕಡೆಯಿಂದ ರಾಜ್ಯದಲ್ಲಿ ಪ್ರಸಿದ್ಧನಾದ, ವಿದ್ವಾಂಸನಾದ ಪಂಡಿತನಾದ ಪುರೋಹಿತ ಮತ್ತು ಒಬ್ಬ ಸುಶಿಕ್ಷಿತ ಸಭ್ಯಗೃಹಸ್ಥನು ಪ್ರವೇಶ ಮಾಡುತ್ತಾರೆ.)

ಪುರೋಹಿತ— ಇಂದಿನ ಯುಗದಲ್ಲಿ ಸಂಪೂರ್ಣ ಭೂತಲದ ಮೇಲೆ ಹುಡುಕಾಡಿ ನೋಡಿದರೂ ನಮ್ಮ ಮಹಾರಾಜರ ಸಮಾನ ಯಾರೂ ಸಿಗುವದಿಲ್ಲ.

ಸಜ್ಜನರಾಯ— ಪುರೋಹಿತರೇ ತಾವು ಹೀಗೆ ಹೇಗೆ ಅನ್ನುವಿರಿ? ಯಾವ

ಯಾವ ರಾಜರು ಆಗುತ್ತಾರೆಯೋ ಅವರವರು ತಮ್ಮ ಪೂರ್ವ ಪುಣ್ಯಕ್ಕನುಸಾರವಾಗಿ ಶ್ರೇಷ್ಠ, ವಿದ್ವಾನ ಮತ್ತು ಪರಾಕ್ರಮಿ ಯಾಗಿರುತ್ತಾರೆ.

ಪುರೋಹಿತ— ಹಾಗಲ್ಲಾ ಸಜ್ಜನರಾಯರೇ ಪ್ರತಿಯೊಬ್ಬ ರಾಜರಲ್ಲಿ ಒಂದು ವೇಳೆ ಶ್ರೇಷ್ಠತೆ, ವಿದ್ವತ್ತತೆ, ಪರಾಕ್ರಮ ಮುಂತಾದ ಅನೇಕ ಗುಣಗಳಿದ್ದರೂ ಅವುಗಳಲ್ಲಿ ಕೆಲವನ್ನು ಉಪಯೋಗಿ ಸುತ್ತಾರೆ ಮತ್ತು ಉಳಿದ ಗುಣಗಳ ಕಡೆಗೆ ಲಕ್ಷವನ್ನೇ ಕೊಡುವದಿಲ್ಲ.

ಸಜ್ಜನರಾಯ— ಪುರೋಹಿತರೇ ಯಾವ ಗುಣಗಳನ್ನು ಅವಗುಣಗಳೆಂದು ಕಂಡುಕೊಳ್ಳುವದು.

ಪುರೋಹಿತ— ಕೇಳಿರಿ ಸಜ್ಜನರಾಯರೇ ಯಾರು ಪರಾಕ್ರಮಿಗಳಾಗಿರು ವರೋ ಅವರಲ್ಲಿ ದಯೆ, ವಾತ್ಸಲ್ಯಗಳಿರುವದಿಲ್ಲ. ಯಾರು ವಿದ್ವಾನರಿರುವರೋ ಅವರಲ್ಲಿ ದಾನಗುಣವಿರುವದಿಲ್ಲ. ಯಾರು ದಾನಿಗಳಾಗಿರುವರೋ ಅವರಲ್ಲಿ ಭಕ್ತಿ ಇರುವದಿಲ್ಲ. ಯಾರಲ್ಲಿ ಭಕ್ತಿ ಇರುವದೋ ಅವರಿಗೆ ನ್ಯಾಯುವಾದ ವ್ಯವಹಾರವಿರುವ ದಿಲ್ಲ. ಯಾರು ನ್ಯಾಯುವಾಗಿ ವ್ಯವಹಾರ ಮಾಡುತ್ತಾರೆಯೋ ಅವರಲ್ಲಿ ಮುಂದಾಲೋಚನೆ ಇರುವದಿಲ್ಲ. ಮುಂದಾಲೋಚನೆ ಇದ್ದ ಕೆಲವರು ದುರ್ಬಲರಿರುವರು, ಶಕ್ತಿವಾನರಿರುವರು ವ್ಯಸ ನಾಧೀನರಾಗುತ್ತಾರೆ. ಹಾಗೆ ನೋಡಿದರೆ ನಮ್ಮ ಸತ್ಯಂಧರ ಮಹಾರಾಜರಲ್ಲಿ ಅಂಥಹದು ಏನೂ ಇಲ್ಲಾ. ವಿದ್ವಾನ, ವಿವೇಕಿ, ಮುಂದಾಲೋಚನೆ, ಪರಾಕ್ರಮಿ, ಧೀರವೀರ, ಗಂಭೀರ, ನ್ಯಾಯನೀತಿಪರ, ದಾನಧರ್ಮ, ದಯಾನಿಧಿ, ಸಂಪೂರ್ಣ ಪ್ರಜಾ ವಾತ್ಸಲ್ಯಭಾವ, ವಿಜಯಿ. ಪ್ರೇಮಸಾಗರ ರಾಗಿದ್ದಾರೆ. ಅತ್ಯಂತ ಮಹತ್ವಪೂರ್ಣ ಕೊನೆಯ ಮಾತೆಂದರೆ ಜಗತ್ತಿನ ಎಲ್ಲ ವ್ಯಸನಗಳಿಗೆ ತಿಲಾಂಜಲಿ ಕೊಟ್ಟಿದ್ದಾರೆ. ಅಂದರೆ ಇವರಲ್ಲಿ ಯಾವ ವ್ಯಸನಗಳಿಲ್ಲಾ. ಅವರು ವಿಷಯ ವಾಸನೆ ಗಳಿಂದ ದೂರವಿದ್ದಾರೆ.

ಸಜ್ಜನರಾಯ— ಹೌದು. ಈಗ ನನಗೆ ನಿಮ್ಮ ಮಾತಿನ ಅರ್ಥವಾಯಿತು. ಇದೇ ಕಾರಣಕ್ಕಾಗಿ ಸತ್ಯಂಧರ ಮಹಾರಾಜರ ಪ್ರಭಾವವು ಕೇವಲ ನಮ್ಮ ದೇಶದಲ್ಲಿ ಅಷ್ಟೆ ಅಲ್ಲಾ ವಿಶ್ವದ ಸಮಸ್ತ ಪ್ರಜೆಗಳ ಮೇಲೆ ಪಸರಿಸಿದೆ.

ಪುರೋಹಿತ— ಇಷ್ಟೆ ಅಲ್ಲಾ. ಸಂಸಾರ ಗಾಡಿಯ ಎರಡು ಚಕ್ರಗಳು ಸಮಾನವಿದ್ದರೆ ಮಾತ್ರ ಸಂಸಾರದ ಗಾಡಿಯು ಸುಗಮವಾಗಿ ಮುಂದೆ ಸಾಗುವದು. ಆ ಪ್ರಕಾರ ರಾಜಾ ಸತ್ಯಂಧರ ಮಹಾರಾಜರಿಗೆ ಸಮಾನ ಚಕ್ರ ಅಂದರೆ ಸಮತೋಲ ಬುದ್ಧಿಯುಳ್ಳ ವಿಜಯಾರಾಣಿ ಅರ್ಧಾಂಗಿನಿಯಾಗಿ ಪ್ರಾಪ್ತಳಾಗಿದ್ದಾಳೆ. ವಾಸ್ತವದಲ್ಲಿ ಸಂಸಾರಿ ಪ್ರತ್ಯೇಕ ಮಾನವನಿಗೆ ಸಮತೋಲ ಅರ್ಧಾಂ-ಗಿನಿ ಇದ್ದರೆ ಮಾತ್ರ ಸಂಸಾರ ಜೀವನವು ಸುಖದಿಂದ ಸಾಗಲು ಶಕ್ಯವಾಗುವದು. ಹಾಗೆ ನೋಡಿದರೆ ನಮ್ಮ ಮಹಾರಾಜರಿಗೆ ರಾಣಿಯೆಂದರೆ ದೇವತೆಯೇ! ಅವಳು ಜನಿಸಿದ ಸಮಯದಲ್ಲಿ ತಾಯಿ ತಂದೆಗಳು ವಿಜಯಾ ಎಂಬ ಹೆಸರಿನಿಂದ ಪ್ರಸಿದ್ಧಿಗೆ ತಂದಿದ್ದಾರೆ. ಅವಳಲ್ಲಿ ಸದ್ಗುಣ ರತ್ನಗಳು ಮನೆ ಮಾಡಿಕೊಂಡಂತೆ ಪ್ರತೀತವಾಗುತ್ತದೆ. ಚತುರ್ನಿಕಾಯ ದೇವಿಯರು ಜ್ಯೋತಿರ್ಲೋಕ, ಭೂಲೋಕ, ಭವನವಾಸಿ, ಸ್ವರ್ಗದಲ್ಲಿರುವ ಅಪ್ಸರೆಗಳಿಗಿಂತಲೂ ರೂಪ, ಸೌಂದರ್ಯ ಮತ್ತು ಗುಣಗಳಲ್ಲಿ ಶ್ರೇಷ್ಠಳೆಂದು ತಿಳಿದು ನಮ್ಮ ಸತ್ಯಂಧರ ಮಹಾರಾಜರ ಜೋಡಿಗೆ ಕಳಿಸಿ ಕೊಟ್ಟಿದಾರೆಂದು ಪ್ರತೀತವಾಗುತ್ತದೆ. ಓಹೋ! ಸಜ್ಜನರಾಯರೇ ಈ ಹೊತ್ತು ನಮಗೆ ಎಷ್ಟು ಆನಂದವಾಗುತ್ತದೆಯೋ ಅಷ್ಟೇ ಆನಂದವು ಸಮಸ್ತ ಪ್ರಜೆಗಳಿಗೆ ಆಗುತ್ತಿರಬಹುದು. ಈ ಪೃಥ್ವಿಯ ಪೃಷ್ಠ ಭಾಗದ ಮೇಲೆ ಹರಿಯುವ ನದಿಗಳು, ಸರೋವರಗಳು ತಮಗೆ ಧನ್ಯ ಮಾನಿಸಿಕೊಳ್ಳುತ್ತಿರಬಹುದು. ಹೂದೋಟಗಳು ಪ್ರಫುಲ್ಲಿತವಾಗಿ ಹರ್ಷದಿಂದ ಅಲುಗಾಡುತ್ತಿರಬಹುದು. ಆಕಾಶದಲ್ಲಿರುವ ಚಂದ್ರ ತಾರೆಗಳು ಕೌತುಕದಿಂದ ನೋಡುತ್ತಿರಬಹುದು.

ಸಜ್ಜನರಾಯ— ಹೌದರಿ. ಇದು ನಿಜವಾಗಿದ್ದರೆ ನಾವು ಎಷ್ಟು ದುರ್ದೈವಿಗಳು ಅಂತಹ ಪುಣ್ಯಾತ್ಮರ ಮುಖಕಮಲಗಳನ್ನು ನೋಡುವ ಭಾಗ್ಯ ನಮಗೆ ಪ್ರಾಪ್ತವಾಗಿಲ್ಲ. ಸ್ವಲ್ಪಾದರೂ ಅವರ ಮುಖಗಳನ್ನು ನೋಡಿದರೆ ನಾವು ಧನ್ಯರಾಗಬಹುದು.

ಪುರೋಹಿತ— ಸಜ್ಜನರಾಯರೇ ಅಂತಹ ಪುಣ್ಯಾತ್ಮರ ದರ್ಶನವಾಗಬೇಕಾದರೆ ಪುಣ್ಯ ಬೇಕು. ಪುಣ್ಯವೆಂದರೆ ದೈವ, ಹಣೆಬರ ಎನ್ನುತ್ತೇವೆ. ದೈವವಾದರೂ ಎಲ್ಲರಿಗೂ ಸಹಜವಾಗಿ ಪ್ರಾಪ್ತವಾಗುವದಿಲ್ಲ. ಈ ಸಂಸಾರ ಚಕ್ರದಲ್ಲಿರುವ ಪ್ರತಿಯೊಬ್ಬ ಮಾನವನ ಹಿಂದೆ ಒಂದಿಲ್ಲೊಂದು ವ್ಯಾಧಿಯು ಹತ್ತಿಯೇ ಇರುವದು. ಆ ವ್ಯಾಧಿಯು ಅವನ ಅಂತ್ಯಕಾಲದ ವರೆಗೆ ಮತ್ತು ಮುಂದಾದರೂ ಇರುವದು. ವ್ಯಾಧಿಯು ಯಾರಿಗೂ ಬಿಟ್ಟದ್ದಿಲ್ಲಾ.

ಸಜ್ಜನರಾಯ— ನೀವು ಹೇಳುತ್ತಿರುವ ಹಾಗೆ ನನ್ನ ಭಾವನೆಗಳು ಹೆಚ್ಚುತ್ತಿರುವವು ದರ್ಶನವು ಯಾವಾಗಾಗಬಹುದು ಎಂಬುದನ್ನು ಹೇಳಿರಿ ?

ಪುರೋಹಿತ— ದರ್ಶನವಾಗುವದು ಬಲು ಕಷ್ಟ.

ಸಜ್ಜನರಾಯ— ಏಕೆ ?

ಪುರೋಹಿತ— ಏಕೆ; ಆಶ್ಚರ್ಯವೆನಿಸುವ ಮಾತಲ್ಲಾ. ರಾಜರ ಪುಣ್ಯ ಮಹತ್ತರವಾಗಿದೆ. ಅವರ ಪ್ರಜೆಗಳು ನ್ಯಾಯ ನೀತಿ ಮತ್ತು ಶಾಂತಿಯಿಂದ ನಡೆದುದರಿಂದ ಅವರಿಗೆ ಯಾವ ಪ್ರಕಾರದ ಚಿಂತೆಯನ್ನು ಮಾಡುವ ಆವಶ್ಯಕತೆ ಇಲ್ಲಾ. ಇದರಿಂದ ರಾಜಾ ಸತ್ಯಂಧರರು ತಮ್ಮ ನವಯುವತಿ ವಿಜಯಾರಾಣಿಯೊಂದಿಗೆ ನವಯೌವನದ ಸಂಸಾರ ಸುಖೋಪ ಭೋಗವನ್ನು ಶಾಂತಿಯಿಂದ ಭೋಗಿಸುತ್ತಲಿದ್ದಾರೆ. ಪ್ರತಿಯೊಬ್ಬರಿಗೆ ಸಂಸಾರ ಸುಖವು ಯಥೇಚ್ಛವಾಗಿ ಸಿಗುವದೆಂದು ಹೇಳಲಿಕ್ಕೆ ಬರುವದಿಲ್ಲ.

ಸಜ್ಜನರಾಯ— ಇನ್ನೇನು ಹೇಳಬೇಕು ಪುರೋಹಿತರೇ ? ಕಿಮ್ಮತ್ತು ಕವಡಿಯದಿಲ್ಲಾ ಸಮಯಕ್ಕೆ ಅವಕಾಶವಿಲ್ಲಾ, ಬಲವು ಚಿ.ನ

ಮರಿ ಕಾಳಿನಷ್ಟಿಲ್ಲಾ. ಹೀಗಿದ್ದರೂ ನಮ್ಮಷ್ಟು ದೊಡ್ಡವನು ಯಾವನಿಲ್ಲವೆಂದು ಪುಕ್ಕಟೆ ಜಂಬ ಕೊಚ್ಚಿಕೊಳ್ಳುತ್ತೇವೆ. ಪುರೋಹಿತರೇ ನೀವು ಹೇಳುವದು ನಿಜ. ಈ ಜಗತ್ತಿನಲ್ಲಿ ಯಾರೂ ಸುಖಿಗಳಿಲ್ಲಾ. ಅನಂತ ವ್ಯಾಧಿಗಳ ತಂತ್ರವು ಪ್ರತಿಯೊಬ್ಬ ಪ್ರಾಣಿಯ ಹಿಂದೆ ಹತ್ತಿರುವದು. ಆದರೂ ಮನುಷ್ಯ ಪ್ರಾಣಿ ಕಪ್ಪೆಯಂತೆ ತನ್ನ ಶರೀರವನ್ನು ಉಬ್ಬಿಸಿ ಹೇಳುತ್ತಾನೆ ನಾನು ದೊಡ್ಡವ. ಎಂತಹ ದೊಡ್ಡವನು ? ದೊಡ್ಡವನೆನ್ನುವ ಅಹಂಕಾರವನ್ನು ತೆಗೆಯದ ವರೆಗೆ ಜಿವನಿಗೆ ನಿಜವಾದ ಸುಖವು ಪ್ರಾಪ್ತವಾಗುವದಿಲ್ಲ ಮತ್ತು ಕಲ್ಯಾಣವಾಗುವದಿಲ್ಲ.

ಪುರೋಹಿತ— ಸಜ್ಜನರಾವ ಈ ಕಾಲದಲ್ಲಿ ಮತ್ತು ಸತ್ಯಂಧರ ಮಹಾರಾಜರ ಪುಣ್ಯ ಭೂಮಿಯಲ್ಲಿ ಹುಟ್ಟಿರುವದೇ ನಮ್ಮ ಪುಣ್ಯವೆಂದು ತಿಳಿಯಬೇಕು. ನಮ್ಮ ಪುಣ್ಯವು ಒಂದಿಲ್ಲೊಂದು ದಿನ ಅವಶ್ಯವಾಗಿ ಉದಯವಾಗಬಹುದು ಭಾವದ ಜೊತೆಗೆ ಭಕ್ತಿಯಿರುವದು. ಅಂತಹ ಭಕ್ತನಿಗೆ ಭಗವಂತನ ಸ್ಥಿತಿಯು ಪ್ರಾಪ್ತವಾಗುತ್ತದೆ. ಇದೇ ಪ್ರಕಾರ ನಮಗಾದರೂ ಒಂದಿಲ್ಲೊಂದು ದಿನ ಪುಣ್ಯ ತೀರ್ಥ ಸತ್ಯಂಧರ ಮಹಾರಾಜರ ದರ್ಶನವು ಅವಶ್ಯವಾಗಿ ಆಗಬಹುದು. ನಡೆಯಿರಿ ಸಜ್ಜನರಾಯರೇ ವೇಳೆಯಾಯಿತು. ನಮಗೆ ಸಂಧ್ಯಾ ಪೂಜೆ, ಸ್ವಾಧ್ಯಾಯ ಜಪ ಮಾಡುವದಿದೆ.

ಸಜ್ಜನರಾಯ— ನಡೆಯಿರಿ ಪುರೋಹಿತರೇ ನಮಗಾದರೂ ಕೆಲಸಕ್ಕೆ ವೇಳೆಯಾಗಿದೆ.

(ಪುರೋಹಿತ, ಸಜ್ಜನರಾಯ ಹೋಗುವರು. ಎರಡನೆಯ ಬದಿಯಿಂದ ಸಿಪಾಯಿ ಅತಿ ಭಯಭೀತನಾಗಿ ಮನಸ್ಸಿನಲ್ಲಿ ಅಸಂತೋಷ ನಿರ್ಮಾಣವಾಗಿ ಜೋರಿನಿಂದ ಸಪ್ಪಳ ಮಾಡುತ್ತ ಪ್ರವೇಶಿಸುತ್ತಾನೆ.)

ಸಿಪಾಯಿ— ಹಾಳಾಯಿತು ! ಹಾಳಾಯಿತು ! ನಮ್ಮ ಮತ್ತು ಪ್ರಜೆಗಳ ದೈವವು ನಾಶಹೊಂದಿತು. ಅಯ್ಯೋ ಭಗವಂತನೇ ನಮ್ಮ ಮಹಾರಾಜರಿಗೆ ಎಂತಹ ಬುದ್ಧಿ ಕೊಟ್ಟೆ ! ಪ್ರಭುದೇವಾ ಇದ

ನ್ನೇನು ಮಾಡಿದೆ ? ಇಲ್ಲಿಯ ವರೆಗೆ ಸೃಷ್ಟಿಯು ಆನಂದದಿಂದ ನಗುತ್ತ, ಹರ್ಷದಿಂದ ಕುಣಿದಾಡುತ್ತಿತ್ತು. ಪ್ರಜೆಗಳೆಲ್ಲರೂ ಆನಂದದಿಂದ ಕುಣಿದಾಡುತ್ತಿದ್ದರು. ಜಗತ್ತನ್ನು ನಡೆಸುವವನು ನೀನು, ಜಗತ್ತನ್ನು ಪ್ರೀತಿಸುವವನು ನೀನು, ಜಗತ್ತಿನ ಆಗುಹೋಗುಗಳನ್ನು ಮಾಡುವವನು ನೀನೇ, ಜಗತ್ತನ್ನು ಸಮಾನ ರೀತಿಯಲ್ಲಿ ನಡೆಸುವವನು ನೀನೇ. ನೀನು ಹೀಗೇಕೆ ಮಾಡಿದೆ. ಏನಾಯಿತು ನಿನಗೆ (ಸ್ವಲ್ಪ ಧೀರತಾಳಿ ದೇವರು ಅನ್ಯಾಯ ಮಾಡಿದ್ದಾನೆ. ಈ ಸಂದರ್ಭದಲ್ಲಿ) ಇಲ್ಲಾ, ಇಲ್ಲಾ. ನೀನು ಬುದ್ಧಿವಾನನೆಂದು, ಸಮಾನವಾದ ನ್ಯಾಯದಿಂದ ನಡೆಯುವನೆಂದು ನಿನ್ನ ದರ್ಶನವನ್ನು ಮಾಡಿದೆ. ಆದರೆ ಈಹೊತ್ತಿನಿಂದ ನಿನ್ನ ದರ್ಶನವನ್ನು ಮಾಡಲಾರೆ, ಭಗವಂತನ ಬುದ್ಧಿ ಪಲ್ಲಟವಾಗಿದೆಂದು ಜಗತ್ತಿಗೆ ಹೇಳುತ್ತೇನೆ. ಅಂದಾಗ ಯಾರೂ ನಿನ್ನ ದರ್ಶನ ತೆಗೆದು ಕೊಳ್ಳುವದಿಲ್ಲ. ಆವಾಗ ನಿನಗೆ ತಿಳಿಯ ಬಹುದು. ಅಕಟಾ ! ಇದೇನಾಯಿತು ? (ಮಸ್ತಕಕ್ಕೆ ಎರಡು ಕೈಗಳನ್ನು ಹಚ್ಚಿ ಕುಳಿತು ಕೊಳ್ಳುತ್ತಾನೆ. ಅಷ್ಟರಲ್ಲಿ ನಾಲ್ಕು ದಿಕ್ಕುಗಳಿಂದ ಆಕಾಶವಾಣಿಯಾಗುವದು)—ಭಗವಂತನಿಗೆ ಏನೆಂದು ಅಪವಾದನ್ನು ಕೊಡುತ್ತಿರುವೆ. ತನ್ನ ಕರ್ಮವು ನಾಶಹೊಂದಿತೆಂದರೆ ಜಗತ್ತಿನ ಕರ್ಮವು ನಾಶ ಹೊಂದಿದಂತೆ ತನ್ನ ಭಾವದಲ್ಲಿ ಬದಲಾವಣೆಯಾದರೆ ಎಲ್ಲ ಕಡೆಗೆ ಬದಲಾವಣೆಯಾದಂತೆ ಸರಿ. ತನ್ನ ದೃಷ್ಟಿಯಲ್ಲಿ ಬದಲಾವಣೆಯಾದರೆ ಜಗತ್ತಿನ ದೃಷ್ಟಿಯು ವಿಪರೀತವಾಗಿ ಕಾಣುತ್ತದೆ. ತನ್ನ ಬುದ್ಧಿ ಭೃಷ್ಟವಾದರೆ ಚಾರಿತ್ರ್ಯವು ಹೀನವಾಗುತ್ತದೆ. ಜಗತ್ತಿಗೆ ಕಲಂಕವನ್ನು ಹಚ್ಚುವದ ನೀಚರ ಕೃತಿಯಾಗಿದೆ. ಭಾವನೆಯ ಮೇಲೆ ಕೃತಿ ಯಾವುದಕ್ಕೆ ನಾವು ಚಾರಿತ್ರ್ಯವೆನ್ನುತ್ತೇವೆಯೋ ಆ ಚಾರಿತ್ರ್ಯದಲ್ಲಿ ಬದಲಾವಣೆಯಾಗುತ್ತದೆ. ಭಾವನೆ ಮತ್ತು ಚಾರಿತ್ರ್ಯದ ಮೇಲೆ ಶುಭಾಶುಭ ಕರ್ಮಗಳ ಬಂಧವಾಗುತ್ತದೆ. ಅದೇ ಬಂಧವು ಪುಣ್ಯ ಪಾಪದ ರೂಪದಲ್ಲಿ ಈ ಜಗತ್ತಿನ ರಂಗಮಂಟ



ಆಕಾಶದಾಗ ತಿರುಗುತ್ತಲಿದೆ. ಶಿಪಾಯಿಯು ಭಯಭೀತ, ಆಶ್ಚರ್ಯ, ಭಾವುಕನಾಗಿ
ಈ ಚಮತ್ಕಾರವನ್ನು ನೋಡುತ್ತಲಿದ್ದಾನೆ. ಕೇಳುತ್ತಲಿದ್ದಾನೆ.

ಪದ ಮೇಲೆ ನಾಟಕ ರೂಪದಿಂದ ಆಡಿಯೇ ಆಡುತ್ತದೆ. ಆದಕ್ಕೆ ನಾವು ದೈವ ನಶೀಬ ಅನ್ನುವೆವು. ಪುಣ್ಯ ಪಾಪಗಳ ಮೇಲೆ ಜಗತ್ತಿನ ಸುಖದುಃಖ, ಶಾಂತಿ ಅಶಾಂತಿಯು ಅವಲಂಬಿಸಿದೆ. ಭಗವಂತನು ಮಾಡುತ್ತಾನೆ, ದೇವರು ಮಾಡುತ್ತಾನೆ ಎಂದು ಭಗವಂತನಿಗೆ ದೋಷ ಕೊಡುವದರಲ್ಲೇನು ಅರ್ಥ. ಸ್ವಾರ್ಥವು ಉಗಮವಾದರೆ ವಾಸನೆಯು ಬದಲಾಗುವದು, ವಿಷಯಾಸಕ್ತವಾಗುವದು. ಯಾವಾಗ ಮಾನವನು ವಿಷಯಾಸಕ್ತನಾಗುತ್ತಾನೆಯೋ ಆವಾಗ ಮಾನವನ ಎಲ್ಲ ಗ್ರಹಗಳು ಬದಲಾಗುತ್ತವೆ. ಮಾನವನ ಭಯಾನಕ ಪಾಪವೃತ್ತಿಯು ವೃದ್ಧಿಯಾಗುತ್ತದೆ. ಯಾವ ಪ್ರಕಾರ ಸೂರ್ಯನಿಗೆ ಗ್ರಹಣ ಹತ್ತುವ ಮೊದಲು ವೇದನೆಯಾಗುವಂತೆ ವಿಪರೀತ ವರ್ತನದ ಭವಿಷ್ಯತ್ಕಾಲದ ದುರ್ದೈವ ಘಟನೆಗಳಿಗೆ ಅಶುಭ ಚಿಹ್ನಗಳು ನಿರ್ಮಾಣವಾಗಿವೆ. ಕ್ಷಮಾಧಾರಣ ಮಾಡುವ ಭೂಮಾತೆಯಾದರೂ ಈ ಮಾತಿಗೆ ಸಹನವಾಗದೆ ಒಂದೇ ಸವನೆ ನಡಗುತ್ತಿರುವಳು. ಜ್ವಾಲಾಮುಖಿ ಒಮ್ಮೆಲೆ ಮೇಲಕ್ಕೆ ಬಂದು ಮಾನವರ ಸಂಹಾರವಾಗುತ್ತದೆ. ತನ್ನಂತೆ ಪರರು ಎಂಬ ಬುದ್ಧಿಯು ನಷ್ಟವಾಗಿ ಹೋಗಿದೆ. ದಯೆ ಇರುವವನೇ ಮಾನವ. ದಯೆ ಇಲ್ಲದವನು ದಾನವನೆಂದು ತಿಳಿಯಬೇಕು. ವಿಶ್ವದ ಸಮಸ್ತ ಪ್ರಾಣಿಗಳು ಸಮಾನವಿರುವವು. ನಿಮ್ಮಂತೆ ಅವುಗಳಿಗೆ ಜೀವನವನ್ನು ಸಾಗಿಸುವ ಅಧಿಕಾರವಿದೆ. ಯಾವನು ಕ್ರೂರ ವೃತ್ತಿಯನ್ನು ಧಾರಣಮಾಡಿ ಜೀವಗಳನ್ನು ನಾಶ ಮಾಡಿ ಅವುಗಳ ಶರೀರ ಭಕ್ಷಣ ಮಾಡುವನೋ ಅವನು ಪ್ರಾಣಿಗಳಿಗಿಂತಲೂ ನೂರು ಪಟ್ಟು ಸ್ವತಃ ಕಸಾಬ ಖಾನೆಯಲ್ಲಿ ಬಲಿ ಹೋಗಬೇಕಾಗುತ್ತದೆ. ದಯೆಯೇ ನಿಜವಾದ ಧರ್ಮ. ಮಾನವರಿಗೆ ಆಕಾಶಗಾಮಿನಿ ದೇವತೆಯ ನಿರೋಪವೇನೆಂದರೆ ಜೀವ ಹಿಂಸೆಯನ್ನು ಮಾಡಬೇಡಿರಿ. ಜೀವ ಹಿಂಸೆಯನ್ನು ಮಾಡಬೇಡಿರಿ. ಪಾಪ ಕೃತ್ಯ ಮಾಡಬೇಡಿರಿ, ಪಾಪ

ಕೃತ್ಯ ಮಾಡಬೇಡಿರಿ ಪಾಪ ಕೃತ್ಯ ಮಾಡಿದರೇ ನರಕ ಕುಂಡದಲ್ಲಿ ಹೋಗಿ ಬಿದ್ದು ಅನಂತ ದುಃಖಗಳಿಗೆ ಗುರಿಯಾಗಬೇಕಾಗುವದು. ದೇವತೆಯ ವಾಣಿ ಇದು, ದೇವತೆಯ ವಾಕ್ಯ ಇದು. (ಸಿಪಾಯಿ ಅತ್ಯಂತ ಭಯಭೀತನಾಗಿ ಯಾವ ದಿಕ್ಕಿನಿಂದ ಧ್ವನಿಯು ಬರುತ್ತದೆಯೋ ಅತ್ತ ಕಡೆಗೆ ಕೌತುಕದಿಂದ, ಆಶ್ಚರ್ಯದಿಂದ ಗಂಭೀರ ಮುದ್ರೆಯಿಂದ ನೋಡುತ್ತ, ಕೇಳುತ್ತ ಇದ್ದಾನೆ. ಈ ಪ್ರಕಾರ ಸಿಪಾಯಿಯು ಆಕಾಶವಾಣಿಯನ್ನು ಕೇಳುತ್ತಿರುವಾಗ ಪರಿವರ್ತನೆಯಾಗುತ್ತಲಿದೆ)

ಸಿಪಾಯಿ— ನಾನು ಏನು ನೋಡುತ್ತಿದ್ದೇನೆ? ಏನು ಕೇಳುತ್ತಿದ್ದೇನೆ? ಏನು ಚಮತ್ಕಾರವಿದು? ದೇವತೆಯ ಕೋಪವೋ? ಏನು ದೈವದ ಕೋಪವೋ? ಏನು ನಿಸರ್ಗಕ್ಕಾದರೂ ಧ್ವನಿ ಬಂದಿತಲ್ಲಾ. ಏಕೆಂದರೆ ನಿಸರ್ಗಕ್ಕಾದರೂ ಈ ಮಾನವ ಕೃತ್ಯ ಅಸಹ್ಯವಾಯಿತು. ಇನ್ನೆಲ್ಲಿ ಹೋಗಲಿ, ಯಾರಿಗೆ ಹೇಳಲಿ, ಏನು ಹೇಳಲಿ ಭಗವಾನ್, ಭಗವಾನ್. ದೇವತೆಯೇ ನನ್ನದು ತಪ್ಪಾಯಿತು. ಇನ್ನು ಎಂದೆಂದಿಗೂ ಭಗವಂತನಿಗೆ ಸುಳ್ಳು ಎನ್ನಲಾರೆ, ಹೆಸರಿಡಲಾರೆ, ಭಗವಂತನು ಸತ್ಯನಿರುವನು, ಅರಹಂತನು ಸತ್ಯನಿರುವನು, ನನ್ನದು ತಪ್ಪಾಯಿತು ಭಗವಾನ. ಮನುಷ್ಯನು ಮಾಡಿದ ನ್ಯಾಯ ಅನ್ಯಾಯ, ಸತ್ಯ ಅಸತ್ಯ, ಒಳ್ಳೆಯದು ಕೆಟ್ಟ ಇದೆಲ್ಲಾ ಕರ್ಮವು. ಯಾವನು ಏನು ಮಾಡುತ್ತಾನೆಯೋ ಅವನಿಗೆ ಅದೇ ಪ್ರಕಾರದ ಕರ್ಮದ ಫಲವನ್ನು ಅನುಭವಿಸಬೇಕಾಗುತ್ತದೆ. ಇದೇ ಪಾಪ ಮತ್ತು ಪುಣ್ಯ. ಹೌದು ಇದೇ ಪ್ರಕಾರ ನಮ್ಮ ಮಹಾರಾಜರ ಕರ್ಮವೆಂದು ತಿಳಿಯಬೇಕು.

(ತೆರೆ ಬೀಳುವದು)

ಏಳನೆಯ ದೃಶ್ಯ

(ಸತ್ಯಂಧರ ರಾಜನ ಅರಮನೆ, ರಾಜನು ರಾಜಸಿಂಹಾಸನದ ಮೇಲೆ ಮದನ ಮಸ್ತನಾಗಿ, ವಿಷಯಾಸಕ್ತನಾಗಿ, ವಿಶೇಷ ಮುದ್ರೆಯಿಂದ ಕುಳಿತುಕೊಂಡಿದ್ದಾನೆ.

ಅಷ್ಟರಲ್ಲಿ ರಾಜನ ವಿವೇಕಿ, ಧರ್ಮನಿಷ್ಠ, ಧರ್ಮದಕ್ಷ, ಪ್ರಧಾನಮಂತ್ರಿ, ರಾಜ ದೂತ ಬಹಾದ್ದೂರಸಿಂಹ, ಕೋಶಾಧ್ಯಕ್ಷರು ಪ್ರವೇಶ ಮಾಡುತ್ತಾರೆ, ಮೂವರು ಪ್ರವೇಶ ಮಾಡಿದ ಕೂಡಲೇ ಮಹಾರಾಜ ಸತ್ಯಂಧರನಿಗೆ ವೀರಾಸನದಿಂದ, ಭಕ್ತಿ ಭಾವದಿಂದ ನಮಸ್ಕಾರ ಮಾಡುತ್ತಾರೆ.)

ಸತ್ಯಂಧರ— (ಮೂವರು ರಾಜಶಾಸಕರು ಒಂದೇ ಸಮಯದಲ್ಲಿ ಕೂಡಿ ಬಂದದ್ದನ್ನು ಮನಸ್ಸಿನಲ್ಲಿ ತಿಳಿದುಕೊಂಡು) ಈ ಸಮಯದಲ್ಲಿ ಮಂತ್ರಿಗಣದ ಆಗಮನ ಹೇಗಾಯಿತು ?

ಮೂವರು— (ತಲೆ ತಗ್ಗಿಸಿ) ಮಹಾರಾಜರ ಸೇವೆಯಲ್ಲಿ [ತಲೆಯನ್ನು ಮೇಲಕ್ಕೆ ಎಬ್ಬಿಸುವರು.]

ಸತ್ಯಂಧರ— ಆದರೆ ಒಂದೇ ಸಮಯದಲ್ಲಿ ಮೂವರ ಆಗಮನವು.

ಪ್ರಧಾನಮಂತ್ರಿ— ದೊರೆಗಳೇ ನಮ್ಮ ಕಿವಿಯ ಮೇಲೆ ಬಂದಿದೆ........

ಸತ್ಯಂಧರ— ಏನು ?

ಪ್ರಧಾನಮಂತ್ರಿ— ರಾಜನ್ ನಾವು ಏನೋ ಸ್ವಲ್ಪ ಹೇಳಬಯಸುತ್ತೇವೆ. ಅದನ್ನು ತಾವು........

ಸತ್ಯಂಧರ— ಏನು ?

ಪ್ರಧಾನಮಂತ್ರಿ— ಅದನ್ನು ತಾವು ಒಳ್ಳೆಯ ರೀತಿಯಿಂದ ತಿಳಿದಿರುವಿರಿ. ಆದರೂ ತಾವು ಕೃಪೆ ಮಾಡಿ ನಮ್ಮ ಮಾತನ್ನು ಕೇಳಬಹುದೆಂದು ನಮಗೆ........

ಸತ್ಯಂಧರ— ಅದಾವ ಮಾತು ?

ಪ್ರಧಾನಮಂತ್ರಿ— ಪ್ರಭುಗಳೇ ಮಾತು ಕಾಷ್ಟಾಂಗಾರನ ಬಗ್ಗೆ.

ಸತ್ಯಂಧರ— ಮಾತು ! ಕಾಷ್ಟಾಂಗಾರನ ಬಗ್ಗೆ.

ಪ್ರಧಾನಮಂತ್ರಿ— ದೊರೆಗಳೇ ವಾಸ್ತವದಲ್ಲಿ ತಮ್ಮ ಸಮಾನವಿದ್ದಂತಹ ರಾಜರಿಗಾದರೂ ತಮ್ಮ ಹೃದಯದ ವಿಶ್ವಾಸವನ್ನು ಕೊಡಬಾರದು. ಅಂತಹದರಲ್ಲಿ ಇವನಂತಹ ಸರ್ವಸಾಮಾನ್ಯ ಮನುಷ್ಯನ ವಿಶ್ವಾಸ ಹೇಗೆ ಹೇಳಬೇಕು. ಯಾವ ಪ್ರಕಾರ ನಟನು ನಾಟಕದಲ್ಲಿ ಪ್ರೇಕ್ಷಕರನ್ನು ನೋಡಿ ತನ್ನ ಅಭಿನಯ

ಕಲಾ ಕೌಸಲ್ಯವನ್ನು ಪ್ರದರ್ಶಿಸುತ್ತಾನೆಯೋ ಅದರಂತೆ ರಾಜರಾದವರೂ ಕೂಡಾ ವರ್ತಿಸಬೇಕಾಗುತ್ತದೆ. ಅದು ಹೇಗೆಂದರೆ ಈ ನಟನು ನನ್ನನ್ನೇ ನೋಡಿ ಅಭಿನಯಿಸುತ್ತಾನೆಂದು ಪ್ರೇಕ್ಷಕರು ನಾಟಕದಲ್ಲಿ ಅನ್ನುವಂತೆ ರಾಜರಾದವರು ಪ್ರಜೆಗಳ ಆನಂದಕ್ಕಾಗಿ ಪ್ರಯತ್ನಿಸಬೇಕು. ತಾತ್ಪರ್ಯವೇನೆಂದರೆ— ತಾವಾದರೂ ರಾಜರಿದ್ದೀರಿ ಅದಕ್ಕೋಸ್ಕರ ಕಾಷ್ಠಾಂಗಾರನ ಮೇಲೆ ಇಷ್ಟು ವಿಶ್ವಾಸ ಕೊಡುವದು ಯೋಗ್ಯವಲ್ಲ.

ಸತ್ಯಂಧರ— ರಾಜ್ಯವನ್ನು ನಡಿಸುವಗೋಸ್ಕರ ಕೊಟ್ಟಿರುವದು ಮಂತ್ರಿವರ್ಯರೇ.

ಪ್ರಧಾನಮಂತ್ರಿ— ಸರಕಾರ ಕೇವಲ ಬಾಹ್ಯ ಶತ್ರುಗಳನ್ನು ಗೆಲ್ಲುವದು ರಾಜ್ಯಕಾರ್ಯವಲ್ಲ. ರಾಜರಾದವರೂ ಮೊದಲು ಕಾಮ, ಕ್ರೋಧ, ಮಾನ, ಮಾಯಾ, ಲೋಭ ಮತ್ತು ಆಲಸ್ಯಗಳೆಂಬ ಒಳಗಿನ ಶತ್ರುಗಳನ್ನು ಗೆಲ್ಲಬೇಕು. ಈ ಶತ್ರುಗಳನ್ನು ಗೆಲ್ಲದ ಹೊರತು ರಾಜರಾದವರೂ ರಾಜ್ಯಸಿಂಹಾಸನದ ಮೇಲೆ ಸ್ಥಿರವಾಗಿ ಕುಳಿತುಕೊಳ್ಳಲಾರರು. ಅದಕ್ಕಾಗಿ ತಾವಾದರೂ ಇನ್ನೊಬ್ಬರ ಮೇಲೆ ವಿಶ್ವಾಸವಿಡುವದು ಸರಿಯಲ್ಲ

ಸತ್ಯಂಧರ— ಬಾಹ್ಯ ಮತ್ತು ಅಂತರ ಶತ್ರುಗಳನ್ನು ಹೇಗೆ ಜಯಿಸಬೇಕೆಂಬುದನ್ನು ಚನ್ನಾಗಿ ಅರಿತಿದ್ದೇವೆ.

ಪ್ರಧಾನಮಂತ್ರಿ— ಹೌದು. ತಾವು ಒಳ್ಳೆಯ ರೀತಿಯಿಂದ ತಿಳಿದಿರುವಿರಿ ಅದಕ್ಕೋಸ್ಕರ ನಾವು ತಮಗೆ ನಿವೇದಿಸುತ್ತಿರುವದು.

ಸತ್ಯಂಧರ— ನಮಗೆ ಕೆಲವೊಂದು ಸಮಯದವರೆಗೆ ರಾಜದರಬಾರದಲ್ಲಿ ಬರಲು ಶಕ್ಯವಾಗುವದಿಲ್ಲ.

ಪ್ರಧಾನಮಂತ್ರಿ— ಏಕೆ ? ಬರಲಿಕ್ಕಾಗುವದಿಲ್ಲ ಅದನ್ನು ನಾವು ತಿಳಿದಿರುತ್ತೇವೆ. ಆದರೆ ರಾಜಸಿಂಹಾಸನದ ಮೇಲೆ ಕುಳಿತುಕೊಳ್ಳಲು ಸ್ವಲ್ಪ ಸಮಯವಾದರೂ ಬರುವದು ಅವಶ್ಯಕ. ಒಟ್ಟಿನಲ್ಲಿ ಬಿಡು

ವದು ಸಮಂಜಸವಲ್ಲ. ವಾಸ್ತವದಲ್ಲಿ ಗೃಹಸ್ಥ ಧರ್ಮದಲ್ಲಿ ಧರ್ಮ, ಅರ್ಥ, ಕಾಮ ಈ ಮೂರು ಪುರುಷಾರ್ಥಗಳನ್ನು ಯಥಾ ಸಮಯದಲ್ಲಿ ಭೋಗಿಸಬೇಕು. ಧರ್ಮ ಸಾಧನೆಯಿಂದ ಅರ್ಥ ಸಂಪಾದನೆ, ಅರ್ಥ ಸಂಪಾದನೆಯಿಂದ ಕಾಮ ಸಂಪಾದನೆಯಾಗುತ್ತದೆ. ಗೃಹಸ್ಥರಿಗೆ ಇದರೊಳಗಿಂದ ಒಂದನ್ನು ಬಿಟ್ಟರೂ ನಡೆಯುವದಿಲ್ಲ ಮತ್ತು ಅದಾದರೂ ಯಥಾ ಸಮಯದಲ್ಲಿ.

ಸತ್ಯಂಧರ— ಪ್ರಧಾನಮಂತ್ರಿ ನಿಮ್ಮ ಹೇಳಿಕೆಯು ಸರ್ವಥಾ ಸರಿ ಆದರೆ ನಮಗೆ ರಾಜದರಬಾರದಲ್ಲಿ ಬರಲು ಶಕ್ಯವಾಗುವದಿಲ್ಲ.

ಪ್ರಧಾನಮಂತ್ರಿ— (ಸ್ವಲ್ಪ ಆಶ್ಚರ್ಯ ಮತ್ತು ಸಾವಧಾನದಿಂದ) ಮಹಾರಾಜ! ನಿರ್ಬಲ ಮನುಷ್ಯರೇ ಇಂದ್ರಿಯ ದಾಸರಾಗುತ್ತಾರೆ. ಮತ್ತು ಆತ್ಮಹಿತವನ್ನು ನಾಶ ಮಾಡಿಕೊಳ್ಳುತ್ತಾರೆ. ಆದರೆ ಶೂರ, ವೀರ ಪುರುಷರು ಇಂದ್ರಿಯಗಳನ್ನು ತಮ್ಮ ದಾಸರನ್ನಾಗಿ ಮಾಡಿಕೊಳ್ಳುತ್ತಾರೆ.

ಸತ್ಯಂಧರ— ನಿಮ್ಮ ಹೇಳಿಕೆ ನನಗೆ ಅರ್ಥವಾಗಲಾರದು.

ಪ್ರಧಾನಮಂತ್ರಿ— ಹೇಳುವದಿಷ್ಟೇ ತಮ್ಮ ರಾಜ್ಯಭಾರವನ್ನು ಯಾರ ಮೇಲೆಯೂ ಒಪ್ಪಿಸಬೇಡಿರಿ.

ಸತ್ಯಂಧರ— ಅಂದರೆ! ನಾವು ಮಾಡುತ್ತಿರುವ ಕಾರ್ಯವು ನಿಮಗೆ ಸರಿ ಎಣಿಸಲಾರದೇ ?

ಮಂತ್ರಿಗಳು— (ಒಮ್ಮೆಲೆ) ಪ್ರಜಾ ಪಾಲಕರೇ ತಾವು ಹೇಳುವದು ಸರಿಯಲ್ಲಾವೆಂದಿಲ್ಲ, ಸರಿಯಾಗಿಯೇ ಇದೆ.

ಸತ್ಯಂಧರ— ಇನ್ನು ಸ್ಪಷ್ಟವಾಗಿ ಹೇಳಿರಿ. ನಿಮ್ಮ ಅಭಿಪ್ರಾಯವೇನು ?

ಪ್ರಧಾನ ಮಂತ್ರಿ— ಮಹಾರಾಜರೇ ತಾವು ರಾಜಸಿಂಹಾಸನದ ಮೇಲೆ ಸ್ವಲ್ಪ ಸಮಯವಾದರೂ ಅವಶ್ಯವಾಗಿ ಕುಳಿತು ಕೊಳ್ಳಬೇಕು.

ಸತ್ಯಂಧರ— ಮಂತ್ರಿಗಳೇ ನಮಗೆ ಸಮಯ ಸಿಗಲಾರದು.

ಪ್ರಧಾನ ಮಂತ್ರಿ— ಸರಕಾರ ಇದಕ್ಕಾಗಿ ನಾವು ಹೇಳುತ್ತಿರುವದು "ಕ್ಷಣಿಕ ಸುಖಕ್ಕಾಗಿ ಭವಿಷ್ಯಕ್ಕೆ ಗಂಡಾಂತರ ಒದಗುವದು" ಸರಕಾರ

ವನದ ರಾಜಾ ಸಿಂಹವು ಕೇವಲ ಒಂದೇ ಸಾರೆ ಸಿಂಹಿಣಿಯ ಜೊತೆಗೆ ಕಾಮ ಸೇವನೆ ಮಾಡುವದರಿಂದ ಸಿಂಹಿಣಿಯು ಗರ್ಭಧಾರಣೆ ಮಾಡುತ್ತದೆ. ಮರಿ ಜನಿಸುವ ವರೆಗೆ ಒಂದೇ ಜೊತೆಯಲ್ಲಿ ಮಲಗುವದು, ಏಳುವದು ಕುಳಿತು ಕೊಳ್ಳುವದು ನಡೆದರೂ ಕಾಮಾತುರವಾಗುವದಿಲ್ಲ. ಸಿಂಹವು ಪಶುಗಳ ರಾಜ ನೀವು ಮನುಷ್ಯರ ರಾಜರಿರುವಿರಿ. ಸಿಂಹದ ಒಂದೇ ಆರ್ಭ ಟಕ್ಕೆ ವನದ ಎಲ್ಲ ಪ್ರಾಣಿಗಳು (ಹುಲಿ, ಆನೆ, ಕರಡಿ, ಚಿರ್ಚಿ ಮುಂತಾದ ಸಮಸ್ತ ಪ್ರಾಣಿಗಳು) ಒಂದೇ ಸವನೆ ನಡಗುತ್ತಿರುವವು. ಅದರಂತೆ ರಾಜರ ಕೋಶ, ಸೈನ್ಯ, ರಾಜರ ಅಧಿಕಾರದಲ್ಲಿಯೇ ಇರಬೇಕು. ಸ್ವಪ್ನದಲ್ಲಿಯೂ ಕೂಡಾ ಇನ್ನೊಬ್ಬರ ಕೈಗೆ ಕೊಡ ಬಾರದು.

ಕೋಶಾಧ್ಯಕ್ಷ— ಸರಕಾರ ರಾಜ್ಯವು ಬೊಕ್ಕಸ ಮತ್ತು ಸೈನ್ಯದ ಮೇಲೆ ಅವಲಂಬಿಸಿರುವದು.

ರಾಜದೂತ— ಹುಜುರ ಬೊಕ್ಕಸ ಮತ್ತು ಸೈನ್ಯ ಇವೇ ರಾಜ್ಯದ ವೈಭವ ಗಳು.

ಸತ್ಯಂಧರ— (ಸ್ವಲ್ಪ ಗಂಭೀರ ಮುದ್ರೆಯನ್ನು ತಾಳಿ) ಮತ್ತೇನು ಹೇಳುವದಿದೆ ?

ಪ್ರಧಾನ ಮಂತ್ರಿ— ರಾಜರೇ ಬುದ್ಧಿವಂತರು ಬಾವಿಯಿಂದ ನೀರು ತೆಗೆ ಯುವಾಗ ಕೊಡಕ್ಕೆ ಹಗ್ಗವನ್ನು ಕಟ್ಟಿ ಹಗ್ಗವನ್ನು ಬಾವಿಯಲ್ಲಿ ಪೂರ್ಣವಾಗಿ ಬಿಟ್ಟರೂ ಆ ಹಗ್ಗದ ಇನ್ನೊಂದು ತುದಿ ಅವರ ಕೈಯಲ್ಲಿಯೇ ಇರುವದು. ಅದರಂತೆ ನೀವು ರಾಜ್ಯದ ಸೂತ್ರ ಧಾರಿಗಳು ಕಾಷ್ಠಾಂಗಾರರ ಮೇಲೆ ಪೂರ್ಣ ವಿಶ್ವಾಸವಿಡುವದು ಯೋಗ್ಯವಲ್ಲ.

ಸತ್ಯಂಧರ— ಮಂತ್ರಿ, ರಾಜ್ಯ ನಡೆಸುವದಕ್ಕಾಗಿ ಕೊಟ್ಟಿದೆ.

ಕೋಶಾಧ್ಯಕ್ಷ— ಅಹುದು. ಅದಕ್ಕೆ ತಮಗೆ ಸೂಚನೆಯನ್ನು ಮಾಡು ತ್ತಿರುವದು.

ಸತ್ಯಂಧರ— ರಾಜ್ಯವನ್ನು ನಡೆಸುವ ಸಲುವಾಗಿಯೇ ಕೊಟ್ಟಿದ್ದೇವೆ ತಿಳಿ ಯಿತೇ ?

ರಾಜದೂತ— ಅದಕ್ಕೆ ಬೇಗನೆ ವಿಚಾರ ಮಾಡಬೇಕೆಂದೆ ನಮ್ಮ ವಿನಯ ಪೂರ್ವಕ ವಿನಂತಿ.

ಪ್ರಧಾನ ಮಂತ್ರಿ— ಮಹಾರಾಜ ಪ್ರಜೆಗಳ ಕಡೆಗೆ ಲಕ್ಷ ಕೊಟ್ಟು ನೋಡಿರಿ. ಪ್ರಜೆಗಳ ಪಾಲನೆಯನ್ನು ಯಾರು ಮಾಡುವರೆಂದು ಅನ್ನುತ್ತಿದ್ದಾರೆ. ನೀವು ನಮ್ಮ ದಾತರು, ತ್ರಾತರು, ಮುಂದೇನಾಗಬಹುದು ? ಹೇಗಾಗಬಹುದು ? ಎಂಬ ಮಾತಿನ ಗೊಂದಲವು ಎಲ್ಲ ಕಡೆಗೆ ಪಸರಿಸಿದೆ. ಪ್ರಜೆಗಳು ಹೇಗೆ ನಡೆಯುಬೇಕೆಂದು ಚಿಂತಾಯುಕ್ತರಾಗಿದ್ದಾರೆ.

ಸತ್ಯಂಧರ— ಇಲ್ಲಿಯ ವರೆಗೆ ನಡೆದ ಹಾಗೆ ನಡೆಯಲಿ ! ಏನಾಗಬಹುದೆಂಬ ವಿಚಾರ ಈಗೇಕೆ ?

ಪ್ರಧಾನ ಮಂತ್ರಿ— ಹಾಗಲ್ಲಾ ದೊರೆಗಳೇ ರಾಜ ಪದವಿಯಲ್ಲಿಯೇ ನಿಲ್ಲಿರಿ. ರಾಜ್ಯಭಾರವನ್ನು ಯಾರಿಗೂ ಒಪ್ಪಿಸಬೇಡಿರಿ. ರಾಜ್ಯ ಭಾರವನ್ನು ಇನ್ನೊಬ್ಬರ ಮೇಲೆ ಒಪ್ಪಿಸಿದರೇ...........

ರಾಜದೂತ— ಪ್ರಜೆಗಳು ದುಃಖಕ್ಕೆರವಾಗುವರು. ಪ್ರಜೆಗಳಿಗೆ ಅನ್ಯಾಯವಾಗಬಹುದು. ಪ್ರಜೆಗಳಿಗೆ ನ್ಯಾಯ ನೀತಿ ಮತ್ತು ಶಾಂತಿ ಸಿಗಲಾರದು. ಕೇವಲ ಪ್ರಜೆಗಳಿಗಲ್ಲಾ ಆದರೆ.........

ಸತ್ಯಂಧರ— ಮಂತ್ರಿ, ಕೋಶಾಧ್ಯಕ್ಷ, ರಾಜದೂತರೇ ! ನಾವು ವಚನವನ್ನು ಕೊಟ್ಟಿದ್ದೇವೆ.

ಪ್ರಧಾನ ಮಂತ್ರಿ— ಸರಕಾರ ಪ್ರಜೆಗಳ ಅನ್ಯಾಯ, ಸರ್ವನಾಶವಾಗುತ್ತಿದ್ದರೆ ಅಲ್ಲಿ ವಚನವನ್ನು ಹಿಂದೆ ತೆಗೆದುಕೊಳ್ಳಬೇಕಾಗುವದು. ಈಗಲಾದರೂ ಏನು ಪ್ರಕಟವಾಗಿಲ್ಲ. ಒಂದು ವೇಳೆ ಪ್ರಕಟವಾಗಿದ್ದರೂ ತಮ್ಮ ಕೈಯಲ್ಲಿಯೇ ಇರುವದು.

ರಾಜದೂತ— ಹುಜುರ, ರಾಜ್ಯ ನಡಿಸುವದೇನು ! ಬಲಹೀನ, ಮತಿಹೀನ, ಮತ್ತು ಚಾರಿತ್ರ್ಯಹೀನ ಮನುಷ್ಯರ ಕೆಲಸವಲ್ಲಾ. ಯಾವ ಪ್ರಕಾರ ಹೊಲದಲ್ಲಿ ಹೆದರಿಕೆಗಾಗಿ ಬೆಚ್ಚ ನಿಲ್ಲಿಸುತ್ತಾರೆಯೋ ಆದರಂತೆ ಕಾಷ್ಠಾಂಗಾರನನ್ನು ತಿಳಿಯಬೇಕು. ಇಷ್ಟೇ ಅಲ್ಲಾ

ಅವನ ಕೈಯಲ್ಲಿ ರಾಜ್ಯಬಾರವನ್ನು ಕೊಟ್ಟರೆ "ಕಾಗೆಯ ಕೈಯಲ್ಲಿ ಕಾರಭಾರವನ್ನು ಕೊಟ್ಟಂತೆಯೇ ಸರಿ,"

ಸತ್ಯಂಧರ— (ಸ್ವಲ್ಪ ಉಗ್ರ ಸ್ವರೂಪ ತಾಳಿ) ರಾಜದೂತ ಆದಡ್ಡಾಗಲಿ.

ಪ್ರಧಾನ ಮಂತ್ರಿ— ಇನ್ನು ಏನೇನು ಆಗಿಲ್ಲ ಮಹಾರಾಜರೇ

ಸತ್ಯಂಧರ— ವಚನ ಹೋಗಿದೆ ಪ್ರಧಾನ ಮಂತ್ರಿಗಳೇ !

ಪ್ರಧಾನ ಮಂತ್ರಿ— ಮಹಾರಾಜ ವಚನ ಹೋದರೇನಾಯಿತು ? ಎಲ್ಲ ಧರ್ಮ ಪೋಷಕ, ರಾಜ್ಯ ಪೋಷಕ, ಮುತ್ಸದಿ, ಶೂರವೀರ, ವಿವೇಕ ಮತ್ತು ಸಮಾಜದ ಹಿತ ಮಾಡುವವನಿರುತ್ತಾನೆಯೋ ಅಲ್ಲಿ ವಚನವನ್ನು ಹಿಂದೆ ತೆಗೆದು ಕೊಳ್ಳಲಿಕ್ಕೆ ಬರುವದಿಲ್ಲ. ಆದರೆ ಯಾವ ವ್ಯಕ್ತಿಯಿಂದ ಧರ್ಮ, ರಾಜ್ಯ, ಸಮಾಜ ಮತ್ತು ಸರ್ವಸ್ವದ ನಾಶವಾಗುವ ಲಕ್ಷಣ ವಿರುವದೋ ಅಂತಹ ಅಜ್ಞಾನಿ ನಿರ್ದಯ ಮನುಷ್ಯನಿಗೆ ರಾಜ್ಯಭಾರವನ್ನು ಕೊಡುವದರಿಂದ ಪರಿಣಾಮವೇನಾಗಬಹುದು. ಸ್ವಂತ ಘಾತವನ್ನು ಮಾಡಿಕೊಂಡಂತೆ.

ಸತ್ಯಂಧರ— (ಅತಿ ಕ್ರೋಧದಿಂದ) ನಿಮ್ಮ ಮರ್ಯಾದೆಯನ್ನು ಮೀರಿರುವಿರಿ.

ಪ್ರಧಾನ ಮಂತ್ರಿ— ಹೌದು ಸರಕಾರ, ಯೋಗ್ಯ ಸಮಯದಲ್ಲಿ ಯೋಗ್ಯವನ್ನೇ ವಿಚಾರ ಮಾಡಬೇಕು. ಯಾವ ಮನುಷ್ಯನು ಧರ್ಮ, ಅರ್ಥ, ಕಾಮ ಪುರುಷಾರ್ಥಗಳಿಗೆ ಯಥಾ ಸಮಯದಲ್ಲಿ ಒಂದಕ್ಕೊಂದು ವಿರೋಧವಾಗದೆ ಸೇವನ ಮಾಡುತ್ತಾನೆಯೋ ಅವನು ನಿರಾಬಾಧ ಸುಖಕ್ಕೆ ಪ್ರಾಪ್ತನಾಗುತ್ತಾನೆ. ಮತ್ತು ಪರಂಪರೆಯಿಂದ ಮೋಕ್ಷಪ್ರಾಪ್ತಿಯನ್ನು ಮಾಡಿಕೊಳ್ಳುತ್ತಾನೆ. ಇಂತಹ ಸುಖವನ್ನು ಬಯಸುವ ರಾಜರ ಕರ್ತವ್ಯವೇನೆಂದರೆ ಕೇವಲ ಕಾಮಾಸಕ್ತನಾಗಿ ಧರ್ಮ, ಅರ್ಥ, ಪುರುಷಾರ್ಥಗಳನ್ನು ಸಾಧಿಸದಿದ್ದರೆ ನಡೆಯುವದಿಲ್ಲ. ತಾವಾದರೂ ರಾಜರಿದ್ದೀರಿ ತಮಗಾದರೂ ಕಾಮಾಸಕ್ತವಾಗಿ ಧರ್ಮಪಾಲನೆ ಮತ್ತು ರಾಜ್ಯಪಾಲನೆ ಮಾಡುವದನ್ನು ಬಿಟ್ಟರೆ ನಡೆಯಲಾ

ರದು. ಕರ್ತವ್ಯ ಮಾಡದಿದ್ದರೆ ಸುಖ ಶಾಂತಿಗಳ ಮೇಲೆ ನೀರು ಹರಿದಂತೆ.

ಸತ್ಯಂಧರ— (ಕ್ರೋಧದಿಂದ) ಮಾತು ಸಾಕು ಮಾಡಿರಿ. ಅದರ ವಿಚಾರ ನಮ್ಮದಾಗಿದೆ.

ಪ್ರಧಾನ ಮಂತ್ರಿ— ಕೇವಲ ವಿಚಾರ ಮಾಡಿದರೆ ಏನು ಪ್ರಯೋಜನ. ಸಂಸಾರದಲ್ಲಿ ಪ್ರಾಪ್ತವಾಗುವ ಪ್ರತಿಯೊಂದು ಯೋಗ್ಯವಸ್ತು ಪೂರ್ವ ಪರ್ಯಾಯದ ಅಪೇಕ್ಷೆಯಿಂದ ನಷ್ಟ ಮತ್ತು ಭವಿಷತ್ ಪರ್ಯಾಯದ ಅಪೇಕ್ಷೆಯಿಂದ ಉತ್ಪನ್ನವಾಗುತ್ತದೆ. ಆವಾಗ ಅದನ್ನು ಸೇವಿಸಿದರೆ ಏನು ಫಲ. ಇತ್ಯಾದಿ ವಿಚಾರ ಮಾಡಿ ಯಾವದೇ ವಸ್ತುವನ್ನು ಗ್ರಹಣ ಮಾಡಬೇಕು. ಮುಂದಾ ಲೋಚನೆಯಿಲ್ಲದೆ ಕಾರ್ಯ ಮಾಡಿದರೆ ಪಶ್ಚಾತಾಪ ಪಡಬೇಕಾಗುವದು. ಕಾರ್ಯಗಳೂ ನಿಷ್ಫಲವಾಗುತ್ತವೆ.

ಸತ್ಯಂಧರ— (ಅತಿ ಸಿಟ್ಟಿನಿಂದ) ಮಂತ್ರಿ, ಮಂತ್ರಿ, ಮುಂದೆ ಒಂದು ಶಬ್ದನ್ನು ಕೇಳುವ ಇಚ್ಛೆಯಿಲ್ಲಾ. ಮುಂದಿನ ವಿಚಾರ ನಮ್ಮದು. ಆದದ್ದಾಗಲಿ ರಾಜ್ಯವನ್ನು ಕೊಟ್ಟಿದೆ. ವಿಚಾರಗಳ ತರ್ಕವಿತರ್ಕಗಳನ್ನು ನಿಲ್ಲಿಸಿರಿ.

ಪ್ರಧಾನ ಮಂತ್ರಿ— (ಧೈರ್ಯದಿಂದ) ತಮಗೆ ಕೇಳುವ ಇಚ್ಛೆ ಇಲ್ಲದಿದ್ದರೂ ಕೂಡಾ ನಾವು ಹೇಳುತ್ತಿದ್ದೇವೆ ಮಹಾರಾಜ! ಹಾಗೆ ನೋಡಿದರೆ ಕಾಷ್ಠಾಂಗಾರನು ಹೇಳಿಕೇಳಿ ಚಾಂಡಾಲನಿರುವನು. ವಿವೇಕವಿಲ್ಲ, ಸದಾಚಾರವಿಲ್ಲ, ಬುದ್ಧಿಯಿಲ್ಲ, ನ್ಯಾಯ ನೀತಿ-ಲೇಶ ಮಾತ್ರವೂ ಇಲ್ಲಾ. ಕರುಣಾಭಾವ ಕಿಂಚಿತ್ತಾದರೂ ಇಲ್ಲಾ. ಇಂತಹ ಮನುಷ್ಯನಿಗೆ ರಾಜಕಾರಭಾರವನ್ನು ಒಪ್ಪಿಸುವದೆಂದರೆ ತನ್ನ ಕೈಯಿಂದ ತನ್ನ ಕಾಲಮೇಲೆ ಕೊಡಲಿ ಪೆಟ್ಟವನ್ನು ಹಾಕಿದಂತೆ ಅಲ್ಲವೆ? ತಾವು ಸಾಕಷ್ಟು ಭೋಗ ವಿಲಾಸದಲ್ಲಿದ್ದರೂ ಕೂಡಾ ರಾಜ್ಯಭಾರವನ್ನು ಯಾರ ಮೇಲೆಯೂ ಒಪ್ಪಿಸಬೇಡಿರಿ. ಇಷ್ಟೇ ನಮ್ಮ ಪ್ರಾರ್ಥನೆ.

ಸತ್ಯಂಧರ— ಕೇಳುವ ಮರ್ಯಾದೆಯು ಮುಗಿದಿದೆ.ಪ್ರಧಾನ ಮಂತ್ರಿ ಒಂದು

ಸಾರೆ ಹೇಳಿದರೇನು ? ಅನೇಕ ಸಾರೆ ಹೇಳಿದರೇನು ? ಎಲ್ಲವೂ ಒಂದೇ ಸುಖದ ವರ್ತಮಾನ ಕಾಲದಲ್ಲಿ ಕು-ಕರ್ಮಗಳ ಮಾಲಿಕೆಯ ವಿಚಾರಗಳನ್ನು ತರುವದು ಅಂದರೆ ತಿಳಿದು ತಿಳಿದು ಆಪತ್ತುಗಳಿಗೆ ಆಹ್ವಾನ ಕೊಟ್ಟಂತೆ.

ಪ್ರಧಾನ ಮಂತ್ರಿ— ಹೌದು. ಆಪತ್ತುಗಳಿಗೆ ಆಹ್ವಾನ ಕೊಡುವ ಮೊದಲು ಸಾವಧಾನವಿರುವದು ಅವಶ್ಯಕ. ಪಂಚ ಪಕ್ವಾನದ ಊಟ ಮಾಡಿದವನಿಗೆ ಮೇಲೆ ವಿಷದ ಹನಿಯನ್ನು ಕೊಟ್ಟರೆ ಪರಿಣಾಮವೇನಾಗುವದು ? ಅದರಂತೆ ತಮ್ಮ ಮಂಗಲಮಯ ಸುಖೋಪಭೋಗದ ರಾಜ್ಯ ವೈಭವದಲ್ಲಿ ಆ ಮ್ರಾದಿ ಯೋಗ್ಯ ಫಲಗಳ ವೃಕ್ಷಗಳನ್ನು ಬಿಟ್ಟು ಮುಳ್ಳದ ಜಾಲಿಯ ಬೀಜ ಕಿಂಪಾಕ ಫಲದ ಗಿಡಗಳನ್ನು ಹಚ್ಚಿದರೆ ಅವುಗಳಿಂದ ಮುಳ್ಳು, ಅಥವಾ ವಿಷಹಾರಿ ಫಲಗಳು ಸಿಗುವವು. ಈ ಪ್ರಕಾರ ತಾವಾದರೂ ಅವಿಚಾರಿಯಾದ ಕಾಷ್ಠಾಂಗಾರನಿಗೆ ರಾಜ್ಯಭಾರ ಒಪ್ಪಿಸುವದು ದರಿದ್ರ ಮಾರ್ಗವನ್ನೇ ಹಿಡಿದಂತೆ ಅಲ್ಲವೆ ?

ಸತ್ಯಂಧರ— (ಆವೇಶದಲ್ಲಿ) ಮಂತ್ರಿ ನಿನ್ನ ಭವಿಷ್ಯ ನುಡಿಯುವ ನಾಲಿಗೆಗೆ ಕಡಿವಾಣ ಹಾಕು.

ಪ್ರಧಾನಮಂತ್ರಿ— (ಧೈರ್ಯದಿಂದ) ನ್ಯಾಯ ಮತ್ತು ಸುಖದಿಂದ ಜೀವನವನ್ನು ಸಾಗಿಸಬೇಕಾದರೆ ಭವಿಷ್ಯತ್ಕಾಲದ ವಿಚಾರವನ್ನು ಅವಶ್ಯವಾಗಿ ಮಾಡಲೇಬೇಕು. ಮತ್ತು ಕು-ಕರ್ಮಗಳಿಗೆ ತಾತ್ಕಾಲದಲ್ಲಿ ತಡೆಯುಂಟು ಮಾಡಬೇಕು. ವಿನಾಶ ಕಾಲ ಬಂದಿತೆಂದರೆ ಮನುಷ್ಯನ ಬುದ್ಧಿ ವಿಪರೀತವಾಗುತ್ತದೆ. ಮಹಾರಾಜ.

ಸತ್ಯಂಧರ— (ಅತಿ ಸಿಟ್ಟಿನಿಂದ) ಮಂತ್ರಿ !

ಪ್ರಧಾನಮಂತ್ರಿ— (ಶಾಂತಿ ಮತ್ತು ವಿನಯದಿಂದ) ಹಾಗಲ್ಲ ಸರಕಾರ ಕು-ಕಾಲಕ್ಕೆ ನಾವೇ ಆಹ್ವಾನವನ್ನು ಕೊಟ್ಟಂತೆ.

ಸತ್ಯಂಧರ— ಹೊರಟು ಹೋಗಿರಿ ಇಲ್ಲಿಂದ !

ಮೂವರು— ರಾಜಾಜ್ಞೆ. (ಹೋಗುವರು.)

(ತೆರೆ ಬೀಳುವದು)

ಎಂಟನೆಯ ದೃಶ್ಯ

(ಧರ್ಮದತ್ತ, ಪ್ರಧಾನಮಂತ್ರಿ, ಕೋಶಾಧ್ಯಕ್ಷ, ರಾಜದೂತ ನಿರಾಶೆಯ ಮುದ್ರೆಯಿಂದ, ಗಂಭೀರತನದಿಂದ ಪ್ರವೇಶಿಸುವರು.)

ಪ್ರಧಾನಮಂತ್ರಿ— ಕೋಶಾಧ್ಯಕ್ಷರೇ ಯಾವ ಮನುಷ್ಯನು ವಿಷಯಾಸಕ್ತನಾಗುತ್ತಾನೆಯೋ ಅವನ ಎಲ್ಲ ಗುಣಗಳು ಬಹುಶಃ ನಾಶವಾಗುತ್ತವೆ. ಇಂತಹ ಮನುಷ್ಯನಲ್ಲಿ ವಿದ್ವತ್ತೆ, ಮನುಷ್ಯತೆ, ಕುಲಿನತೆ ಮತ್ತು ಸತ್ಯತೆಗಳೆಂಬ ಗುಣಗಳು ಒಂದೂ ನಿಲ್ಲುವದಿಲ್ಲ. ಅದೇ ಪ್ರಕಾರ ನಮ್ಮ ಸತ್ಯಂಧರ ಮಹಾರಾಜರಿಂದ ಎಲ್ಲ ಗುಣಗಳು ದೂರಾಗಿರುವವು.

ಕೋಶಾಧ್ಯಕ್ಷ— ಪ್ರಧಾನ ಮಂತ್ರಿವರ್ಯರೇ, ಸತ್ಯಂಧರ ಮಹಾರಾಜರಿಗೆ ಎಷ್ಟು ತಿಳಿಸಿ ಹೇಳಿದರೂ ತಮ್ಮ ಹಟವನ್ನು ಬಿಡಲಿಲ್ಲ. ಅಂದರೆ ಅವರಲ್ಲಿ ಯಾವ ಗುಣಗಳು ಸ್ಥಿರವಾಗಿರುವವು.

ಪ್ರಧಾನ ಮಂತ್ರಿ— ಇಷ್ಟೇ ಅಲ್ಲಾ ಕೋಶಾಧ್ಯಕ್ಷರೇ ಯಾವ ಮನುಷ್ಯನು ವಿಷಯ ಭೋಗದಲ್ಲಿ ಅತ್ಯಂತ ಆಸಕ್ತನಾಗುತ್ತಾನೆಯೋ ಅವನು ಅದರಿಂದ ದೀನತೆ, ನಿಂದೆ, ಸುಳ್ಳತನ ಮತ್ತು ಅಪಮಾನ ಇತ್ಯಾದಿ ಲಜ್ಜಾಸ್ಪದ ವಿಷಯಗಳ ಕಡೆಗೆ ಗಮನ ಕೊಡುವದಿಲ್ಲ. ಕಾಮುಕ ಸತ್ಯಂಧರ ರಾಜರಾದರೂ ಇವು ದುಷ್ಟ ವಿಚಾರಗಳೆಂಬುದರ ಪರಿವೆಯನ್ನೇ ಮಾಡಲಿಲ್ಲ. ದಿನದಿನಕ್ಕೂ ವಿಷಯಾಸಕ್ತರಾಗುತ್ತಲೇ ಹೋದರು. ಕಾಮಾಸಕ್ತರಾದವರು ಊಟ, ದಾನ, ವಿವೇಕ, ಧನ, ಸಂಪತ್ತು, ಕೀರ್ತಿ, ಘನತೆಗಳ ಬಗ್ಗೆ ಸ್ವಲ್ಪವೂ ಕೂಡಾ ವಿಚಾರ ಮಾಡುವದಿಲ್ಲ. ಭೋಗ ವಿಲಾಸಗಳ ಬೆನ್ನಟ್ಟಿ ತಮ್ಮ ಗುಣಗಳ ಮೇಲೆ ಮತ್ತು ಪ್ರಾಣದ ಮೇಲೆ ನೀರು ಹರಿಸಿ ಬಿಡುತ್ತಾರೆ. ಭೋಗಾ

ಸಕ್ತರಾದ ಸತ್ಯಂಧರ ರಾಜರಾದರೂ ಇದರ ಕಡೆಗೆ ಸ್ವಲ್ಪಾದರೂ ಗಮನ ಕೊಡಲಿಲ್ಲ. ವಿಷಯ ವಾಸನೆಗಳಿಗೆ ಮೋಹಿತರಾಗಿ ಕರ್ತವ್ಯ ಅಕರ್ತವ್ಯಗಳ ವಿಚಾರ ಮಾಡದೇ ಸ್ವಕರ್ತವ್ಯಕ್ಕೆ ಒಳ್ಳೆಯದೆಂದು ತಿಳಿದು ಚಾಂಡಾಲ ಕಾಷ್ಠಾಂಗಾರನಿಗೆ ರಾಜ್ಯವನ್ನು ನಡೆಸಲು ಕೊಟ್ಟಿದ್ದಾರೆ.

ರಾಜದೂತ— ಇಂತಹ ಅನ್ಯಾಯಕ್ಕೆ ಮಾಡುವದೇನು? ಸತ್ಯಂಧರ ಮಹಾರಾಜರಿಗೆ ಎಲ್ಲಿಂದ ಇಂತಹ ಬುದ್ಧಿ ಉಂಟಾಯಿತೋ ಏನೋ! ಕ್ಷಮೆ, ಶೀಲ, ಪಾವಿತ್ರ್ಯ ಉಳ್ಳಂಥ ತಾಯಿಯ ಹೊಟ್ಟೆಯಿಂದ ಯಾವನೊಬ್ಬ ಹುಡುಗನು ದುಷ್ಟ, ದುರಾಚಾರಿ ಹುಟ್ಟಿದರೇ ಜನನವನ್ನು ಕೊಟ್ಟಂಥ ಸತ್ಯಶೀಲ ತಾಯಿಯ ಮನಸ್ಸಿಗೆ ಅನಂತ ವೇದನೆಗಳಾಗುತ್ತವೆ. ಮತ್ತು ಆ ನಿರ್ಮಲ ಚಾರಿತ್ರ್ಯವತಿಯಾದ ತಾಯಿಗೆ ತಾನು ನಿಪುತ್ರಕಳಾಗಿದ್ದರೆ ಒಳ್ಳೆಯದಾಗುತ್ತಿತ್ತು ಎಂದು ಅನಿಸುತ್ತದೆ. ಈ ಪುತ್ರನು ಏಕೆ? ಹೇಗೆ? ಎಲ್ಲಿಂದ ಜನಿಸಿದನೋ ಎಂಬ ವಿಚಾರಗಳಿಂದ ಅವಳ ಹೃದಯವು ಕಂಪಿಸುತ್ತದೆ. ಆ ತಾಯಿಗೆ ಯಾವ ಪ್ರಕಾರದ ಅಪೇಕ್ಷೆ ಇರುವದಿಲ್ಲ. (ಗಂಭೀರ ಮುದ್ರೆ ಧಾರಣ ಮಾಡಿ) ಒಬ್ಬನೇ ಪುತ್ರನಾಗಲಿ ಧರ್ಮ ಮತ್ತು ವಂಶದ ಪರಂಪರೆಯು ನಡೆಯಲಿ, ಪುತ್ರನ ಕೀರ್ತಿಯಾಗಲಿ, ಅವನು ಸುಖಿಯಾಗಲಿ ಅವನ ಜೀವನ ಸುಖವಾದದ್ದನ್ನು ಕಂಡು ನನ್ನ ಕಣ್ಣುಗಳು ಸಫಲವಾಗಲಿ ಹೀಗೆ ತನ್ನ ಮನೋಮಂದಿರದಲ್ಲಿ ಅನೇಕ ಸುಂದರವಾದ ವಿಚಾರಗಳನ್ನು ತಂದುಕೊಂಡು ಸಂಕಲ್ಪ ಮಾಡುತ್ತಾಳೆ. ಒಂಬತ್ತು ತಿಂಗಳು ತನಕ ಹೊಟ್ಟೆ ಹೊತ್ತುಕೊಂಡು ಪುತ್ರನಿಗೆ ಯಾವ ಬಾಧೆಯಾಗಬಾರದೆಂದು ಯೋಗ್ಯ ಆಹಾರವನ್ನೇ ಸೇವಿಸುತ್ತಾಳೆ. ಪುತ್ರನಿಗೆ ಜನ್ಮಕೊಡುವ ಕಾಲಕ್ಕೆ ಅನಂತ ವೇದನೆಗಳಾಗುತ್ತಿದ್ದರೂ ಪುತ್ರನಾಗಿದ್ದಾನೆಂಬ ಆಸೆಯ ಮೇಲೆ ಆ ಅನಂತ

ವೇದನೆಗಳನ್ನು ಆನಂದದಿಂದ ಸಹನ ಮಾಡುತ್ತಾಳೆ. ಮಲ ಮೂತ್ರಗಳ ಜಿಗುಪ್ಸೆ ಮಾಡುವದಿಲ್ಲ. ಸಮಯ ಸಮಯಕ್ಕೆ ಮಗುವಿಗೆ ಯೋಗ್ಯ ತಿನಿಸು ಉಣಿಸುವಳು. ಸ್ನಾನವನ್ನು ಮಾಡಿಸಿ ಪಾಲನೆ ಪೋಷಣೆಯನ್ನು ಮಾಡುತ್ತಾಳೆ. ಅಪೇಕ್ಷೆಯ ಹೊರತು ಅವನ ಹಟವನ್ನು ಪೂರೈಸುವಳು. ಶಿಕ್ಷಣ, ಹೊಲ, ನೌಕರಿ, ವ್ಯಾಪಾರ ಅವನ ಇಚ್ಛೆಯ ಮೇರೆಗೆ ಕೊಡುವಳು. ಅವನ ವಿವಾಹವನ್ನು ಮಾಡುವಳು. ಏನು ಮಾಡುತ್ತಾಳೆಯೋ ಅದೆಲ್ಲಾ ಹುಡುಗನಿಗಾಗಿ. ಪುತ್ರನ ಮಂಗಲಮಯ ಜೀವನವನ್ನೋಡುವ ಆಶೆಯ ಮೇಲೆ ಇರು ಇರುತ್ತಾಳೆ. ಪುತ್ರನ ಸುಖಮಯ ಜೀವನವೇ ತನ್ನ ಜೀವನವೆಂದು ತಿಳಿದು ಜೀವನನವನ್ನು ಸಾಗಿಸುತ್ತಾಳೆ. (ದೊಡ್ಡ ಧ್ವನಿಯಿಂದ) ಇದರ ಬದಲಾಗಿ ತಾಯಿ, ತಂದೆ, ಧರ್ಮ, ಕುಲ, ಜಾತಿ-ಸಮಾಜಗಳ ಪರಿವೆಯಿಲ್ಲದೆ ದುರಾಚಾರ ವೃತ್ತಿಯಿಂದ ನಡೆಯುವವನು ಮತ್ತು ಸರ್ವಸ್ವದ ಭಸ್ಮ ಮಾಡಿ ಕಲಂಕವನ್ನು ಹಚ್ಚುವ ಪುತ್ರನ ಕೀರ್ತಿಯನ್ನು ನೋಡಿ ತಾಯಿಯ ಅಂತಃಕರಣ ವೇದನೆಗಳನ್ನು ತಾಯಿಯೇ ಬಲ್ಲಳು. ಇದು ಭೂಮಾತೆಗಾದರೂ ಅಸಹ್ಯವಾಗಿದೆ. ಈ ಈ ಅನ್ಯಾಯವನ್ನು ನೋಡಿ ಎಲ್ಲ ಕಡೆಗೆ ಅಶಾಂತಿಯು ಪಸರಿಸುತ್ತದೆ. ಪೃಥ್ವಿಯು ಅದಲುಬದಲಾಗುತ್ತದೆ. ನಿಸರ್ಗವಾದರೂ ತನ್ನ ನಿಯಮಿತತನವನ್ನು ಬಿಟ್ಟಿದೆ. ವರ್ಷಾ ಋತುವಿನಲ್ಲಿ ಮಳೆಯಾಗಲಾರದಾಗಿದೆ. ಇದೇ ಕಾರಣ ಈ ದರಿದ್ರರೂಪಿ ಪಿಶಾಚಿಣಿಯು ಎಲ್ಲರಿಗೂ ಆಪತ್ತುಗಳನ್ನುಂಟು ಮಾಡುತಾಳೆ. ಸೂರ್ಯ ಕಿರಣಗಳು ಸರೋವರದಲ್ಲಿರುವ ಕಮಲಗಳಿಗೆ ಪ್ರಕಾಶವನ್ನು ಕೊಡುತ್ತವೆ. ಆದರೆ ಅದೇ ಪ್ರಕಾಶವು ಗೂಗೆಗಳಿಗೆ, ಕಳ್ಳರಿಗೆ, ದರೋಡೆಕೋರರಿಗೆ ವ್ಯಭಿಚಾರಿಗಳಿಗೆ ತಿರಸ್ಕಾರವನ್ನುಂಟು ಮಾಡುತ್ತದೆ. ಅಂಧಕಾರಮಯವಾದ ಇರುಳಿನ ದಾರಿಯನ್ನು ಕಾಯುತ್ತಾರೆ. ಅದರಂತೆ

ಈ ಹೊತ್ತು ಸೂರ್ಯಗ್ರಹಣ ಹತ್ತಿರುವ ಹಾಗೆ ಎಲ್ಲಾ ಕಡೆಗೆ ಅಂಧಕಾರವು ಪಸರಿಸಿದೆ.

ಪ್ರಧಾನ ಮಂತ್ರಿ— ರಾಜದೂತರೇ, ಯಾವ ಮನುಷ್ಯನು ವಿಷಯ ಭೋಗಗಳಿಂದ ವಿರಕ್ತನಾಗುತ್ತಾನೆಯೋ ಅವನು ಯಾವತ್ತು ವಿಷಯ ಭೋಗಗಳ ಪರಿತ್ಯಾಗ ಮಾಡುವ ಉಪಾಯುಗಳ ಶೋಧಗಳನ್ನು ಮಾಡುತ್ತಿರುತ್ತಾನೆ. ಮತ್ತು ತನ್ನ ಬಹು ಮೂಲ್ಯ ವೇಳೆಯನ್ನು ತ್ಯಾಗದಲ್ಲಿ ಕಳೆಯುತ್ತಾನೆ. ಆದರೆ ಪ್ರಜೆಗಳ ಪಾಲನೆಯನ್ನು ಮಾಡುವ ನಮ್ಮ ರಾಜರು ಕ್ಷಣಿಕ ವಿಷಯುಗಳ ಸುಖಕ್ಕಾಗಿ ತನ್ನ ವಿವೇಕ ಮತ್ತು ಬಹು ಮೂಲ್ಯ ವೇಳೆಯನ್ನು ನಾಶಮಾಡಿರುತ್ತಾರೆ. ಪ್ರತಿಯೊಂದು ಶುಭಾ ಶುಭ ಕಾರ್ಯಗಳನ್ನು ಮಾಡುವ ಮೊದಲು ಮನುಷ್ಯನಿಗೆ ವಿಚಾರವನ್ನು ಮಾಡುವದು ಅಗತ್ಯವಾಗಿದೆ.

ರಾಜದೂತ— ನಾವು ಹೇಳುತ್ತಿರುವದು ಯಾರ ಸಲುವಾಗಿ ? ಸ್ವರಕ್ಷಣೆ ಯಾಗಬೇಕೆಂದು ರಾಜ್ಯ ರಕ್ಷಣೆಯಾಗಬೇಕೆಂದು ನ್ಯಾಯ ನೀತಿ ಪ್ರಜೆಗಳ ಪಾಲನೆಗೊಸ್ಕರವಲ್ಲವೇ ? ಎಲ್ಲ ಕಡೆಗೆ ಮಂಗಲ ಮಯ, ಸುಖಶಾಂತಿ ನೆಲಸಬೇಕೆಂದು ಇಚ್ಛೆ.

ಪ್ರಧಾನ ಮಂತ್ರಿ— ನೋಡಿರಿ. ಮನುಷ್ಯನು ಯಾವದೊಂದು ಕಷ್ಟವನ್ನು ಅನುಭವಿಸಿದಾಗ ಸಂಸಾರವು ಅಸಾರವೆಂದು ವಿಚಾರ ಮಾಡಲು ತೊಡಗುತ್ತಾನೆ ಮತ್ತು ವಿರಕ್ತನಾಗುತ್ತಾನೆ.

ರಾಜದೂತ— ಪ್ರಧಾನಿಯವರೇ, .ಸಂಸಾರದ ಯಾವದೊಂದು ವಿಷಯು ದಲ್ಲಿ ಹೆಚ್ಚಿಗೆ ಆಸಕ್ತಿಯನ್ನು ತೋರಿಸುವದು ಅತಿ ಭಯಂಕರ ವಾದುದು.

ಪ್ರಧಾನ ಮಂತ್ರಿ— ಸ್ತ್ರೀಸುಖ ಭೋಗಿಸುವದರಲ್ಲಿ ಯಾವ ಸುಖವು ಭಾಸ ವಾಗುತ್ತದೆಯೋ ಅದರ ವಿಷಯದಲ್ಲಿ ಎಷ್ಟರ ವರೆಗೆ ಇದೇ ನಿದೆ ? ಹೇಗಿದೆ ? ಎಷ್ಟಿದೇ ? ಎಲ್ಲಿದೆ ? ಹೀಗೆ ಎಲ್ಲಿಯು ವರೆಗೆ ವಿಚಾರವನ್ನು ಮಾಡುವದಿಲ್ಲವೋ ಅಲ್ಲಿಯು ವರೆಗೆ ಅದು ಸುಂದರ ಮನೋ ಕಲ್ಪಿತವೆಂದು ಪ್ರತೀತವಾಗುತ್ತದೆ. ಆ

ಮಾತಿನ ಬಗ್ಗೆ ವಿಚಾರಿಸಿದರೆ ಸ್ವಲ್ಪವೂ ಸಾರವಿಲ್ಲವೆಂದು ತಿಳಿಯುತ್ತದೆ.

ಕೋಶಾಧ್ಯಕ್ಷ— ಪ್ರಧಾನಿಯವರೇ, ಈ ಜೀವಕ್ಕೆ ಸುಳ್ಳು ಕಾರ್ಯಗಳನ್ನು ಮಾಡುವದರಲ್ಲಿ ಬೇಗನೆ ಮತ್ತು ತನ್ನಿಂದ ತಾನೆ ಪ್ರವೃತ್ತಿಯಾಗುತ್ತದೆ. ಆದರೆ ಒಳ್ಳೆಯ ಮತ್ತು ಉತ್ತಮ ಕಾರ್ಯಗಳಲ್ಲಿ ಪ್ರಯತ್ನ ಮಾಡಿದರೂ ಪ್ರವೃತ್ತಿಯಾಗುವದಿಲ್ಲ. ಇದರ ಕಾರಣವೇನು ?

ಪ್ರಧಾನ ಮಂತ್ರಿ— ಕೋಶಾಧ್ಯಕ್ಷರೇ, ಈ ಜೀವಾತ್ಮನು ಶುಭಾಶುಭ, ರಾಗ ದ್ವೇಷ ವಿಭಾವ ಪರಿಣಾಮ ಮಾಡಿಕೊಂಡು ಹೊಸ ದ್ರವ್ಯ ಕರ್ಮಗಳ ಬಂಧದ ಕಾರಣವಾಗುತ್ತಾನೆ. ಹೀಗೆ ತಿಳಿದರೂ ಅವುಗಳಿಗೆ ಅಡ್ಡಿಯನ್ನುಂಟು ಮಾಡಲು ಪ್ರಯತ್ನ ಶೀಲನಾಗುವದಿಲ್ಲ. ಇದೇ ಕಾರಣದಿಂದ ಆ ಜೀವದ ಪೂರ್ವ ಸಂಚಿತ ಪಾಪ ಕರ್ಮಗಳ ಉದಯಕ್ಕೆ ಬಂದಿರುವವೆಂದು ತಿಳಿಯಬೇಕು. ಸ್ವಾಭಾವಿಕವಾಗಿ ನಾನು ಯಾರು ? ಎಲ್ಲಿಂದ ಬಂದಿರುವೆ ? ಏನು ಮಾಡುತ್ತಿರುವೆ ? ನನ್ನ ಕರ್ತವ್ಯವೇನು ? ಮುಂದೆಲ್ಲಿಗೆ ಸಾಗಬೇಕು ? ಎಂಬ ಹಲವಾರು ವಿಚಾರಗಳನ್ನು ಮನುಷ್ಯನು ಪ್ರತಿದಿವಸ ಮಾಡುವದು ಅವಶ್ಯಕ ಇಲ್ಲವಾದರೆ ಮನುಷ್ಯನು ಕರ್ತವ್ಯ ಭ್ರಷ್ಟನಾಗಿ ಕು-ಕರ್ಮಗಳಲ್ಲಿ ಪ್ರವೃತ್ತನಾಗುವನು.

ರಾಜದೂತ— ಈ ಜೀವವು ಅವಿಚಾರಗಳ, ಕು-ಕರ್ಮಗಳ ದುಃಖದ ಫಲವನ್ನು ಅನುಭವಿಸಬೇಕಾಗುತ್ತದೆಂದು ತಿಳಿಯಿತು. ಸುಖವನ್ನು ಇಚ್ಛಿಸಿದರೆ ಸುಖವು ಪ್ರಾಪ್ತವಾಗುವದಿಲ್ಲ.

ಪ್ರಧಾನ ಮಂತ್ರಿ— ಕು-ಕರ್ಮಗಳ ಕಡೆಗೆ ಈ ಜೀವದ ಪ್ರವೃತ್ತಿಯಾದಾಗ ಈ ಜೀವಕ್ಕೆ 'ಎಲೋ ಜೀವನೇ ನೀನು ಯಾವ ಕಾರ್ಯ ಆರಂಭಮಾಡಿದ್ದಿ ಮತ್ತು ಈಗೇನು ಮಾಡುತ್ತಿರುವೆ ನೀನು. ಆತ್ಮ ಹಿತವೆಂದರೆ ಮಾನವನ ಕರ್ತವ್ಯವನ್ನು ಮಾಡುವದನ್ನು ಬಿಟ್ಟು ಆ ಕಾರ್ಯವನ್ನೇಕೆ ಮಾಡುತ್ತಲಿರುವಿ ?' ಎಂದು

ವಿಚಾರಬೇಕು. ಸಂಸಾರದ ಯಾವದೊಂದು ವಸ್ತು ಒಳ್ಳೆಯದು ಅಥವಾ ಕೆಟ್ಟದಿಲ್ಲಾ. ಆದರೆ ನಮ್ಮ ಅತಿ ಚಂಚಲವಾದ ಮನುಷ್ಯ ಇಷ್ಟ ಅಥವಾ ಅನಿಷ್ಟ ವಸ್ತುವೆಂದು ತಿಳಿದು ಅದರಲ್ಲಿ ಭಾವವನ್ನುಂಟು ಮಾಡಿ ಜೀವನು ಮೋಹಿತನಾಗುತ್ತಾನೆ. ಮತ್ತು ಪಶುಪಕ್ಷಿ ನರಕ ಗತಿ ಎಂಬ ನಾಲ್ಕು ಗತಿಗಳಲ್ಲಿ ಭ್ರಮಿಸುತ್ತಾನೆ.

ಕೋಶಾಧ್ಯಕ್ಷ— ಪ್ರಧಾನ ಮಂತ್ರಿಯವರೇ, ಜಗತ್ತಿನ ಎಲ್ಲಾ ವಸ್ತುಗಳು ಪ್ರತ್ಯೇಕ ಜೀವದ ಅಪೇಕ್ಷೆಯಿಂದ ಒಳ್ಳೆಯದಿರುತ್ತವೆ. ಅಂದ ಮೇಲೆ ವಸ್ತು ಅನಿಷ್ಟ ಹೇಗಾಗುವದು. ಜಗತ್ತಿನ ವಸ್ತುಗಳೆಲ್ಲವೂ ಅನಿಷ್ಟವೆಂದರೆ ಇಷ್ಟ ವಸ್ತುಗಳಾವವು ?

ಪ್ರಧಾನ ಮಂತ್ರಿ— ಕೋಶಾಧ್ಯಕ್ಷರೇ ಈ ಜಗತ್ತಿನಲ್ಲಿ ಕ್ಷುದ್ರ, ಮಣಿ, ಮತ್ತು ಕಾಜು ಅನಾಯಾಸವಾಗಿ ದೊರೆಯುತ್ತವೆ. ಆದರೆ ಬಹು ಮೂಲ್ಯ ಮುತ್ತು, ರತ್ನ ಸಿಗುವದು ಅತಿ ದುರ್ಲಭ. ಇದರಂತೆ ಕು-ಮಾರ್ಗದಲ್ಲಿ ಪ್ರವೃತ್ತರಾಗುವ ದುರ್ಜನರು ಹೆಜ್ಜೆ ಹೆಜ್ಜೆಗೆ ಸಿಕ್ಕುತ್ತಾರೆ. ಆದರೆ ಪರೋಪಕಾರ ಮತ್ತು ಸನ್ಮಾರ್ಗದರ್ಶಕ, ಸಜ್ಜನರ ಸಮಾಗಮ ಸಿಕ್ಕುವದು ಅತಿಶಯ ದುರ್ಲಭ. ಆದಕ್ಕಾಗಿ ಸ್ವ-ಆತ್ಮಹಿತ ಚಿಂತಕ ಸಜ್ಜನರ ಕರ್ತವ್ಯವೇನೆಂದರೆ ದುರ್ಜನರ ಸಂಘದಲ್ಲಿ ಸಿಕ್ಕಿ ಬೀಳುವ ಮುನ್ನ ಸಾವಧಾನವಾಗಿ ಸಜ್ಜನತ್ವ ಗ್ರಹಣ ಮಾಡುವದು ಸರ್ವೋತ್ತಮ.

ರಾಜದೂತ— ಪ್ರತಿಯೊಬ್ಬ ಸಂಸಾರಜೀವಿಯು ಒಳ್ಳೆಯದನ್ನು ಕೆಟ್ಟದ್ದನ್ನು ತಿಳಿದಿರುತ್ತಾನೆ. ಕೆಟ್ಟ ಕೆಲಸವನ್ನು ಮಾಡುವದು ಒಳ್ಳೆಯದಲ್ಲ ಎಂದು ಅನ್ನುತ್ತಾನೆಯಾದರೂ ಮತ್ತೆ ಅದರಲ್ಲಿಯೇ ಪ್ರವೃತ್ತನಾಗುತ್ತಾನೆ. ಇದರ ಕಾರಣವೇನು ? ಈ ಕು-ಆಚಾರ ವಿಚಾರಗಳನ್ನು ತಡೆಯುವ ಉಪಾಯ ಅದಾವದು ?

ಪ್ರಧಾನ ಮಂತ್ರಿ— ಈ ಸಂಸಾರದಲ್ಲಿ ಅನುಚಿತ ಸ್ಥಾನ, ಸಮಯ ಬೇಕಾದಷ್ಟಿದೆ. ನಿರುಪಯುಕ್ತ ಮನುಷ್ಯರು ಬಹಳೇ ಸಿಕ್ಕು

ತ್ತಾರೆ. ಆದರೆ ಮನುಷ್ಯನು ತನ್ನ ಬುದ್ಧಿಯನ್ನು ಚಂಚಲಗೊಳಿಸಬಾರದು. ಇದೊಂದೇ ಉಪಾಯವು. ಇಷ್ಟಾದರೆ ಆ ಮನುಷ್ಯನಿಗೆ ಯಾರೂ, ಏನೂ ಅನಿಷ್ಟ ಮಾಡುವ ಶಕವಿಲ್ಲ.

ರಾಜದೂತ— ಹೌದು. ಆದರೆ ನಮ್ಮ ಸತ್ಯಂಧರ ಮಹಾರಾಜರಿಗೆ ಏನೂ ಅನುಚಿತವಿಲ್ಲವಾದರೂ........

ಪ್ರಧಾನ ಮಂತ್ರಿ— ಏನು ! ಇಲ್ಲವೆಂದು ಹೇಗೆ ಹೇಳುವಿರಿ ? ಸ್ತ್ರೀಯರ ಅತಿ ಲಂಪಟತನವೇ ಅನುಚಿತವು. ಸಂಸಾರ ಪ್ರತ್ಯೇಕ ಭೋಗೋಪಭೋಗದ ವಸ್ತುಗಳಿಗೇನಾದರೂ ಪ್ರಮಾಣವಿದೆ. ವಿವೇಕ ಬುದ್ಧಿಯಿಂದ ಸಂಸಾರರದ ಭೋಗವನ್ನು ಭೋಗಿಸುವವನಿಗೆ ನಿಜವಾದ ಸುಖವು ಪ್ರಾಪ್ತವಾಗುತ್ತದೆ. ಅವನೇ ಈ ಲೋಕದ ಮತ್ತು ಪರಲೋಕದ ನಿಜಸುಖಗಳನ್ನು ಪ್ರಾಪ್ತ ಮಾಡಿಕೊಳ್ಳುತ್ತಾನೆ. (ಸ್ವಗತ) ಜನರೇ ಸಂಸಾರದಲ್ಲಿ ಆಗುವ ಘಟನೆಗಳನ್ನು ಪ್ರತ್ಯಕ್ಷರೂಪದಲ್ಲಿ ಅನುಭವಿಸಿರಿ. ಮತ್ತು ಸತ್ಯದ ಶೋಧವನ್ನು ಮಾಡಿರಿ. (ಪ್ರಕಟ) ರಾಜದೂತರೇ, ಕೋಶಾಧ್ಯಕ್ಷರೇ ಈ ರಾಜನೀತಿಯ ಸಲುವಾಗಿ ಮುಂದೆ ತಿಳಿದು ನೋಡಿ ನಮ್ಮ ಹೆಜ್ಜೆಯನ್ನು ಹಾಕುವದು ಅವಶ್ಯಕ ನಡೆಯಿರಿ.

ಕೋಶಾಧ್ಯಕ್ಷ— ನಡೆಯಿರಿ.

ರಾಜದೂತ— ನಡೆಯಿರಿ. (ಇಬ್ಬರೂ ಹೋಗಲು ಪ್ರಾರಂಭಿಸುವರು.)

(ತೆರೆ ಬೀಳುವದು)

—❋—

ಎರಡನೆಯ ಅಂಕ

ಮೊದಲನೆಯ ದೃಶ್ಯ

(ರಾಜ ರಾಣಿಯರ ಮಹಲ. ಪ್ರಾತಃಸಮಯ. ಪಲಂಗದ ಮೇಲೆ ಇಬ್ಬರೂ ಮಲಗಿದ್ದಾರೆ. ತರೆ ಏಳುವದು. ಆದೇ ವೇಳೆಗೆ ರಾಜರಾಣಿಯರು ಹಾಸಿಗೆಯಿಂದ ಎದ್ದು, ತಮ್ಮ ಕಾಲುಗಳನ್ನು ಕೆಳಗೆ ಬಿಟ್ಟು ಕುಳಿತುಕೊಳ್ಳುವರು. ತಮ್ಮ ಮುಖಗಳ ಮೇಲೆ ಕೈಯಾಡಿಸುವರು. ಆ ಮೇಲೆ ರಾಜನು ಎದ್ದು ಒಳಗೆ ಹೋಗುವನು. ರಾಣಿಯು ೧-೨ ನಿಮಿಷ ಕುಳಿತುಕೊಂಡು, ಮನಸ್ಸಿನಲ್ಲಿಯೇ ವಿಚಾರಿಸಿ, ಒಳಗೆ ಹೋಗುವಳು. ಅಷ್ಟರಲ್ಲಿ ಸೇವಕನು ಬಂದು ಹಾಸಿಗೆಯನ್ನು ಜಾಡಿಸಿ ಕೋಣೆಯನ್ನು ಸ್ವಚ್ಛ ಮಾಡುವನು.)

ಹಾಡು

ರಾಜ ರಾಣಿಯರ ದರಬಾರ
ನಾನು ಇರುವೆನು ಅವರ ಸರದಾರ
ನಾನು ಇರುವೆನು ಅವರ ಸರದಾರ ॥ ಪಲ್ಲ ॥

ರಾಜಾ ಸತ್ಯಂಧರ ನಮ್ಮಯ ಅರಸ ।
ಜನದೊಳಗೆ ತುಂಬಿದೆ ಅವರ ಯಶ ॥
ಸತ್ಯ ಸದಾಚಾರ ಗಾಂಭೀರ್ಯ ಸಾಹಸ ।
ಜನತೆಗೆ ನೀಡಿದೆ ಶಾಂತಿ ರಸ ॥ ಓ ॥ ೧ ॥

ವಿಜಯಾ ಮಹಾರಾಣಿ ರಾಜರ ರಮಣಿ ।
ಶೀಲ ಸದ್ಗುಣ ಕಣಿ ನಾರೀ ಮಣಿ ॥
ಪಾತೀವ್ರತ್ಯದ ಗುಣಿ ಪ್ರಜೆಗಳ ಜನನಿ ।
ಇಷ್ಟ ಸಿದ್ಧಿಯ ದಾನ ಚಿಂತಾಮಣಿ ॥ ಓ ॥ ೨ ॥

ಅರಸ ಅರಸಿಯುರ ಜೀವನ ಸರಸ ।
ನಮಗೆಲ್ಲ ನೀಡಿದೆ ಅತಿ ಹರುಷ ॥
ಪ್ರೇಮದ ನೌಕೆಯು ಪಯಣವು ಸೊಗಸಾ ।
ಆನಂದನ ಬಾಳು ಚಿರ ಸಂತಸ ॥ ಓ ॥ ೩ ॥

ರಾಜ ರಾಣಿಯರ ಅರಮನೆ ಮಾಟಾ ।
ಕಸಗೂಡಿಸಿ ಮಾಡುವೆನು ಚೊಕ್ಕಟ ॥
ಸಾಮಾನುಗಳನ್ನಿಟ್ಟು ಗೈಯ್ಯುವೆ ಥಾಟಾ ।
ತೀರಿಸುವೆನು ಕಾರ್ಯ ಝಟಾ ಪಟಾ ॥ ಓ ॥ ೪ ॥

ರಾಜ ರಾಣಿಯರ ಈ ಮಹಾ ವೈಭವ ।
ಇದರೊಳು ನೆಲೆಸಿದ ಆನಂದವಾ ॥
ಸವಿಯುತ ಚೆನ್ನಾಗಿ ಗೈಯುತ ಸೇವಾ ।
ಅವರಿಂದ ಪಡೆಯುವೆ ಬಹುಮಾನವಾ ॥ ಓ ॥ ೫ ॥

(ಶಯ್ಯಾಗೃಹದಲ್ಲಿದ್ದ ಸಾಮಾನುಗಳನ್ನು ಸುವ್ಯವಸ್ಥಿತ ರೀತಿಯಿಂದ ಇಡುವನು. ಹಾಡು ಮುಗಿಯುವ ವೇಳೆಗೆ ವಿಜಯಾರಾಣಿ ಬರುವಳು. ಅವಳನ್ನು ನೋಡಿದ ಕೂಡಲೇ ಬೇಗನೆ ಓರೆಯಾಗಿ ಸಾಷ್ಟಾಂಗ ನಮಸ್ಕಾರ ಮಾಡುವದರೊಳಗಾಗಿ ರಾಜಾ ಸತ್ಯಂಧರನು ಪ್ರವೇಶಿಸುವನು. ರಾಜನಿಗಾದರೂ ಸಾಷ್ಟಾಂಗ ನಮಸ್ಕಾರ ಮಾಡುವನು. ರಾಜ ರಾಣಿಯರು ಗಾದಿಯ ಮೇಲೆ ಕುಳಿತುಕೊಳ್ಳುವರು.)

ವಿಜಯಾರಾಣಿ— ಪ್ರಾಣನಾಥಾ ! ಇನ್ನೂ ವರೆಗೆ ಸ್ವಪ್ನವೆಂದರೇನು—ಎಂದು ವಿಚಾರ ಮಾಡುತ್ತಿದ್ದೆ. ಸ್ವಪ್ನವು ಎಂಥದೆಂದು ಗೊತ್ತಿರಲಿಲ್ಲ. ಆದರೆ ಈಹೊತ್ತು ಬೆಳಗಿನ ಜಾವದಲ್ಲಿ ನಿದ್ರಾವಸ್ಥೆಯಲ್ಲಿರುವಾಗ ಮೂರು ಪ್ರಕಾರದ ದೃಶ್ಯಗಳನ್ನು ಕಂಡೆ. ಅದಕ್ಕೇನನ್ನುವಿರಿ ?

ಸತ್ಯಂಧರ— ಅದಕ್ಕೆ ಸ್ವಪ್ನವೆನ್ನುತ್ತಾರೆ ಮಹಾರಾಣಿ ! ಆದದ್ದಾಗಬಹುದು. ಅಂಥ ಪ್ರತ್ಯೇಕ ಶುಭಾಶುಭ ಕೃತ-ಕರ್ಮಗಳ ಚಿತ್ರಗಳು ಸ್ವಪ್ನಾವಸ್ಥೆಯಲ್ಲಿಯೇ ಕಂಡು ಬರುತ್ತವೆ. ಅದರಿಂದ ಮಾನವರ ಶುಭಾಶುಭ ಕಾರ್ಯಗಳ ಫಲಗಳು ಸೂಚಿತವಾಗುತ್ತವೆ.

ವಿಜಯಾರಾಣಿ— (ಉತ್ಸಾಹದಿಂದ) ಅಂದರೆ ನಾನಾದರೂ ಶುಭಾಶುಭ ಸೂಚಕ ಸ್ವಪ್ನಗಳನ್ನೇ ಕಂಡಿರುವೆನೇ ? ಪತಿದೇವರೇ ನನ್ನ ಮೂರು ಸ್ವಪ್ನಗಳ ಫಲವೇನೆಂಬುದನ್ನು ಕೃಪೆಮಾಡಿ ತಿಳಿಸುವಿರಾ ?

ಸತ್ಯಂಧರ— ನಿನ್ನ ಸ್ವಪ್ನಗಳಾವವು ? ಹೇಳು ದೇವಿ.

ವಿಜಯಾರಾಣಿ— ಮಹಾರಾಜರೇ, ಮೊದಲನೆಯ ಸ್ವಪ್ನವೆಂದರೆ ಮುಕುಟಬದ್ಧ ಚಿಕ್ಕ ಅಶೋಕ ವೃಕ್ಷವನ್ನು ಕಂಡೆ. (ರಾಜನ ಮುಖ ಪ್ರಸನ್ನವಾಗುತ್ತದೆ) ಎರಡನೆಯ ಸ್ವಪ್ನದಲ್ಲಿ ದೊಡ್ಡ ಅಶೋಕ ವೃಕ್ಷ ಕಂಡು ತಾತ್ಕಾಲ ನಷ್ಟವಾಯಿತು. (ಈ ಸ್ವಪ್ನ ಕೇಳಿದ ಕೂಡಲೇ ರಾಜನ ಮುಖ ಮೃತ್ಯು ಭಯ ಉತ್ಪನ್ನವಾದ ಲಕ್ಷಣ ಕಂಡು ಬರುತ್ತದೆ. ಮುಖಕಾಂತಿ ಹೀನವಾಗುತ್ತದೆ. ರಾಣಿಯು ರಾಜನ ಮುಖದ ಕಡೆಗೆ ನೋಡುತ್ತಾಳೆ. ಆವಾಗ ರಾಜನು ಏನೂ ಬದಲಾವಣೆ ಇಲ್ಲವಂತೆ ತೋರಿಸುತ್ತಾನೆ.)

ಸತ್ಯಂಧರ— ಹೇಳು, ಹೇಳು ಮಹಾರಾಣಿ ನಿಲ್ಲಿಸಿದೇಕೆ ? ನಿನ್ನ ಮೂರನೆಯ ಸ್ವಪ್ನವಾವುದು ?

ವಿಜಯಾರಾಣಿ— ನಿಮ್ಮ ಮುಖದ ಮೇಲೆ ಏನೋ ಬದಲಾವಣೆಯಾದಂತೆ ಕಂಡದ್ದರಿಂದ ನಿಲ್ಲಿಸಿದ್ದೇನೆ.

ಸತ್ಯಂಧರ— ಏನಿಲ್ಲಾ ದೇವಿ. ಮೂರನೆಯ ಸ್ವಪ್ನವಾವುದು ?

ವಿಜಯಾರಾಣಿ— ಮೂರನೆಯ ಸ್ವಪ್ನದಲ್ಲಿ ಸುಂದರವಾದ ಎಂಟು ಮಾಲೆಗಳನ್ನು ಕಂಡೆ. ಈ ಮೂರು ಸ್ವಪ್ನಗಳ ಭವಿಷ್ಯದ ಫಲಗಳೇನೆಂಬುದನ್ನು ತಿಳಿಸಿರಿ. ಕೇಳಲು ಉತ್ಕಂಠಿತಳಾಗಿದ್ದೇನೆ.

ಸತ್ಯಂಧರ— ಕೇಳು. ಮೊದಲನೆಯ ಸ್ವಪ್ನದ ಫಲವೇನೆಂದರೆ (ರಾಣಿಯು ರಾಜನ ಮುಖದ ಕಡೆಗೆ ಅತ್ಯಂತ ಆತುರತೆಯಿಂದ ನೋಡುತ್ತಾಳೆ.) ನಿನ್ನ ಉದರಿಂದ ಅತ್ಯಂತ ಭಾಗ್ಯಶಾಲಿಯೂ, ತೇಜಸ್ವಿಯಾದ ಪುತ್ರನಾಗುವವನಿದ್ದಾನೆ. (ರಾಣಿಯು ಸ್ವಲ್ಪ ಲಜ್ಜಿತಳಾಗುತ್ತಾಳೆ. ಆದರೆ ಅತೀವ ಆನಂದಿತಳಾಗುತ್ತಾಳೆ-) ಮೂರನೆಯ ಸ್ವಪ್ನದ ಫಲವೇನೆಂದರೆ ಜನಿಸುವ ಪುತ್ರನಿಗೆ ಎಂಟು ಮಂದಿ ರಾಣಿಯು

ರಾಗುವರು. (ಮುಂದೆ ಉದಾಸೀನನಾಗಿ ಹೇಳುವದನ್ನು ನಿಲ್ಲಿಸುತ್ತಾನೆ. ಆದರೆ ಅಂತರಿಕ ಭಾವವನ್ನು ತೋರಗೊಡದೆ ಸ್ತಬ್ಧನಾಗುತ್ತಾನೆ.)

ವಿಜಯಾರಾಣಿ— ನೀವು ಮೊದಲನೆಯ ಮತ್ತು ಮೂರನೆಯ ಸ್ವಪ್ನಗಳ ಫಲವನ್ನು ತಿಳಿಸಿ ಕೊಟ್ಟಿರಿ. ಆದರೆ ಎರಡನೆಯ ಸ್ವಪ್ನದ ಫಲವನ್ನು ಮಾತ್ರ ಹೇಳಲಿಲ್ಲ. ಅದನ್ನು ದಯವಿಟ್ಟು ತಿಳಿಸಿರಿ. ಪತಿರಾಜರೇ !

ಸತ್ಯಂಧರ— (ಮುಖದ ಮೇಲೆ ಮೃತ್ಯು ಭಯ ಕಂಡು ಬಂದು ಉದಾಸೀನತೆ ಹರಡುತ್ತದೆ. ಆದರೂ ರಾಣಿಗೆ ಏನೂ ಕಂಡು ಬರದಂತೆ ಸಹಜ ಮತ್ತು ವಿನೋದ ರೂಪದಲ್ಲಿ ಹೇಳಲು ಪ್ರಯತ್ನಿಸುತ್ತಾನೆ) ಎರಡನೆಯ ಸ್ವಪ್ನದ ಫಲವೇನೆಂದರೆ ನನ್ನ ಮರಣವು ಸೂಚಿತವಾಗುತ್ತದೆ. (ವಿಜಯಾ ರಾಣಿ ಪತಿರಾಜರ ಮುಖ ಕಮಲದ ಉದಾಸೀನತೆ ಮತ್ತು ಮರಣ ಸೂಚಕ ಶಬ್ದವನ್ನು ಕೇಳಿ ಮೂರ್ಛಿತಳಾಗಿ ನೆಲದ ಮೇಲೆ ಬೀಳುತ್ತಾಳೆ. ರಾಜನಿಗೆ ಬಹಳ ದುಃಖವಾಗುತ್ತದೆ. ಆದರೆ ರಾಣಿಯ ಮೂರ್ಛಿತಾವಸ್ಥೆಯನ್ನು ನೋಡಿ ಧೈರ್ಯದಿಂದ ಜಾಗ್ರತಗೊಳಿಸಿ, ತಿಳಿಸಿ ಹೇಳುವ ಪ್ರಯತ್ನ ಮಾಡುತ್ತಾನೆ.) ರಾಣಿ ವಿಜಯಾ ಏಳು, ಸಾವಧಾನಳಾಗು, ಧೈರ್ಯ ಧಾರಣ ಮಾಡು. ಅಸಂತೋಷದಿಂದ ಬರುವ ಸಂಕಟಗಳು ಯಾವಾಗಲೂ ದೂರವಾಗಲಾರವು. ಅದಕ್ಕೆ ಧೈರ್ಯದಿಂದ ಎದುರಿಸಿ ಹಿಂದೆ ಸರಿಸುವ ಪ್ರಯತ್ನ ಮಾಡಬೇಕು. ವಿಜಯಾರಾಣಿ ಏಳು! ನಿನ್ನ ಮಂದ ಹಾಸ್ಯವದನದಿಂದ ನನ್ನೆಡೆಗೆ ಅವಲೋಕಿಸು. ಆ ಮರಣಸೂಚಕ ಸ್ವಪ್ನದ ಫಲಕ್ಕಿಂತಲೂ ಈ ನಿನ್ನ ಮೂರ್ಛಿತಾವಸ್ಥೆಯನ್ನು ನೋಡಿ ನಾ ಬಹಳೇ ಅಶಾಂತನಾಗಿದ್ದೇನೆ. ವಿಜಯಾ ಯಾವ ವ್ಯಕ್ತಿಯು ಫಲ ಪುಷ್ಪಗಳಿಂದ ಭರಿತವಾದ ವೃಕ್ಷದ ರಕ್ಷಣೆ ಮಾಡುತ್ತಾನೆ ಅದಕ್ಕೆ ಗೊಬ್ಬರ, ನೀರು ಕೊಟ್ಟು ಅದರ ಪೋಷಣೆಯನ್ನೇ ಮಾಡುತ್ತಾನೆ. ಅದೇ ಪ್ರಕಾರ ನೀನಾದರೂ ನಮ್ಮ ಹಿತವಾಗಬೇಕೆಂಬ ಅಭಿಲಾಷೆ ಇದ್ದರೆ ಕೇವಲ ಸ್ವಪ್ನ ಕಂಡದ್ದಕ್ಕೆ ನಮ್ಮ ಅಶುಭ ಕರ್ಮಗಳ ಆ ಶಂಕೆಯನ್ನು ಮಾಡುವದು ಉಚಿತವಲ್ಲ. ಹೃದಯೇಶ್ವರಿ !

ಏಳು ಸಾವಧಳಾಗು ! (ವಿಜಯಾರಾಣಿ ಸ್ವಲ್ಪ ಸಚೇತನಳಾಗುತ್ತಾಳೆ. ಪತಿರಾಜರ ಮಾತುಗಳಿಂದ ಸಾವಧಳಾಗುತ್ತಾಳೆ) ವಿಜಯಾ ಏಳು ! ನಮ್ಮಂಥ ಕ್ಷತ್ರಿಯರಿಗೆ ಮತ್ತು ಸೂಜ್ಞರಿಗೆ ಮೂರ್ಛಾವಸ್ಥೆಯು ಒಪ್ಪುವದಿಲ್ಲ. ಕ್ಷತ್ರಿಯರ ಒಂದು ಕೈಯಲ್ಲಿ ಯಶ, ಇನ್ನೊಂದರಲ್ಲಿ ಮರಣ. ಇದು ನಿನಗೆ ಗೊತ್ತಿಲ್ಲವೇ ? ಏಳು ವಿಜಯಾ ? (ವಿಜಯಾ ಎದ್ದು ಕುಳಿತು ಒಮ್ಮಿಂದೊಮ್ಮೆಲೆ ಪತಿರಾಜರನ್ನು ಆಲಿಂಗಿಸುತ್ತಾಳೆ).

ವಿಜಯಾರಾಣಿ— ರಾಜನ್ ! (ಅಪ್ಪಿಕೊಳ್ಳುವಳು)

ಸತ್ಯಂಧರ— (ಆಲಿಂಗನ ಬಿಡಿಸುತ್ತಾ) ವಿಜಯಾ ಉಷ್ಣತೆಯಿಂದ ಸಂತಪ್ತನಾದ ಮನುಷ್ಯನು ಶಾಂತವಾಗಲು ಅಗ್ನಿ ಪ್ರವೇಶ ಮಾಡದೆ ಬೀಸಣಿಕೆಯ ಸಹಾಯ ತೆಗೆದು ಕೊಳ್ಳುತ್ತಾನೆ. ಅದರಂತೆ ಬಂದಿರುವ ವಿಪತ್ತನ್ನು ದೂರ ಮಾಡುವದಾದರೆ ಶೋಕಿಸುವದು ಉಚಿತವಲ್ಲ. ಶೋಕದಿಂದ ವಿಪತ್ತಿಯ ನಾಶವಾಗದೆ ವೃದ್ಧಿಯಾಗುವದು. ಇಂಥ ಸಮಯದಲ್ಲಿ ವಿಪತ್ತಿನಾಶಕ ಉಪಾಯ ಶೋಧ ಮಾಡಬೇಕಾಗುತ್ತದೆ.

ವಿಜಯಾರಾಣಿ— ದೇವರೇ ತಮ್ಮ ಪ್ರಫುಲ್ಲಿತವಾದ ಮುಖ ಕಮಲವು ಬಾಡಿದ್ದನ್ನು ನಾನೆಂದಿಗೂ ನೋಡಿದ್ದಿಲ್ಲ. ಅದು ಇಂದು ಕಂಡಬಂತು. ಅದರ ಜೊತೆಯಲ್ಲಿ ತಮ್ಮ ಬಾಯಿಯಿಂದ ಅದೇ ಉಚ್ಚಾರವೂ ಆಯಿತು. ಅದರಿಂದ ನನ್ನ ಮನೋರಥಗಳ ಸವಾರಿಯು ಕ್ಷಣಾರ್ಧದಲ್ಲಿಯೇ ಮಣ್ಣು ಪಾಲಾಯಿತು.

ಸತ್ಯಂಧರ— ಮಹಾರಾಣಿ ಎಲ್ಲಿ ದೀಪದ ಪ್ರಕಾಶವಿರುತ್ತದೆಯೋ ಅಲ್ಲಿ ಕತ್ತಲೆ ತನ್ನ ಹೆಜ್ಜೆಯನ್ನಿಡುವದಿಲ್ಲ. ಧರ್ಮಪಾಲನೆ ಮಾಡಿದವನಿಗೆ ಎಂದೆಂದಿಗೂ ವಿಪತ್ತು ಬರಲಾರದು. ಅದಕ್ಕಾಗಿ ಈ ಸಮಯದಲ್ಲಿ ದುಃಖವನ್ನು ಮರೆತು ಧರ್ಮಪಾಲನೆ ಮಾಡುವದು ಅತ್ಯಂತ ಆವಶ್ಯಕ. ಧರ್ಮದಿಂದಲೇ ಬಂದ ಆಪತ್ತುಗಳು ದೂರಾಗುವವು. (ವಿಜಯಾರಾಣಿ ಮೊದಲಿನಂತೆ ಜಾಗ್ರತಳಾಗುತ್ತಾಳೆ.)

ವಿಜಯಾರಾಣಿ— ಧರ್ಮ ಪಾಲನೆ ಮಾಡಿದರೆ ದುಃಖನಿವಾರಣೆಯಾಗುತ್ತದೆ. ಆದರೆ ದುಃಖ ಬಾರದಂತೆ ಮೊದಲೇ ಧರ್ಮಪಾಲನೆ ಮಾಡುತ್ತ ಹೋದರೇನಾಗಬಹುದು? ಮತ್ತು ನಾವು ಅದಕ್ಕೋಸ್ಕರ ಇದು ವರೆಗೆ ಏನೇನೂ ಮಾಡಿದ್ದಿಲ್ಲ.

ಸತ್ಯಂಧರ— ಹೌದು; ಮಾಡಿದ್ದಕ್ಕಾಗಿ ವಿಪತ್ತವು ತನ್ನ ಹೆಜ್ಜೆಯನ್ನಿಡುತ್ತಿದೆ.

ವಿಜಯಾರಾಣಿ— ಪತಿದೇವರೇ! ತಾವು ರಾಜರಿರುವಿರಿ, ಸರ್ವಾಧಿಕಾರಿ ಆಗಿರುವಿರಿ! ಹೀಗಿದ್ದರೂ ನಿಮ್ಮ ಮೇಲೆ ಚಿಂತೆಯು ಆಪತ್ತು ಬರುವದು ಬಿಡಲಿಲ್ಲ. ಅಂದ ಮೇಲೆ ಸಾಮಾನ್ಯ ಪ್ರಾಣಿಗಳ ಮಾತೇನು? ತಾವು ನನಗೆ ಧೈರ್ಯ ಕೊಟ್ಟು ಶಾಂತ ಮಾಡಿದಿರಿ. ಆದರೆ ಪ್ರಾಣಿಗಳಿಗೆ ಧೈರ್ಯವನ್ನು ಕೊಡುವವರಾರು? ಸಂಕಟ ದೂರ ಮಾಡುವವರಾರು?

ಸತ್ಯಂಧರ— ಯಾರಿಗೆ ಯಾರಿಲ್ಲ. ಶುಭಾಶುಭ ಕರ್ಮಗಳ ಮೇಲೆ ಪುಣ್ಯ ಪಾಪಗಳು ಅವಲಂಬಿಸಿವೆ. ಯಾವ ಜೀವನು ಯಾವ ಭವದಲ್ಲಿ ಪರೋಪಕಾರಿ, ದಯಾನಿಧಿ, ದಾನಿ, ಸಮತಾವಾದಿ ಇದ್ದು ಪೂಜಾದಿ ಧರ್ಮ ಕಾರ್ಯಗಳನ್ನು ಮಾಡುತ್ತಾನೆಯೋ ಅವನಿಗೆ ಈ ಭವದಲ್ಲಿ ಮತ್ತು ಮುಂದಿನ ಭವದಲ್ಲಿ ಪ್ರತಿ ಉಪಕಾರವಾಗುತ್ತದೆ. ಅವನಿಗೆ ಎಲ್ಲ ಸುಖೋಪಬೋಗ ವಸ್ತುಗಳ ಪ್ರಾಪ್ತಿಯಾಗುತ್ತದೆ. ಅದರಂತೆ ಇಲ್ಲದವನು ದುಃಖವನ್ನು ಅನುಭವಿಸಬೇಕಾಗುತ್ತದೆ.

ವಿಜಯಾರಾಣಿ— ತಮ್ಮ ಪೂರ್ವ ಕೃತ ಪುಣ್ಯ ಬಲದಿಂದಲೇ ಈ ಐಶ್ವರ್ಯವು ಪ್ರಾಪ್ತವಾಗಿ ಕೀರ್ತಿ ಧ್ವಜವು ಎಲ್ಲ ಕಡೆಗೆ ಹಬ್ಬುವದೆಂದು ತಿಳಿಯಬೇಕು.

ಸತ್ಯಂಧರ— ಕೇವಲ ನನ್ನಿಂದಲ್ಲಾ ಈ ರಾಣಿಯ ಪುಣ್ಯದಿಂದಲೇ!

ವಿಜಯಾರಾಣಿ— ಇಲ್ಲ! ಇಲ್ಲ! ತಮ್ಮಿಂದಲೇ ಪ್ರಾಪ್ತವಾಗಿರುವದು.

ಸತ್ಯಂಧರ— (ನಗುತ್ತಾ) ಇಲ್ಲ; ನಿನ್ನಿಂದಲೇ.

ವಿಜಯಾರಾಣಿ— ಪತಿದೇವರೇ! ನನ್ನಿಂದೇನಾಗಬಹುದು?

ಸತ್ಯಂಧರ— ಮಹಾರಾಣಿ ಈ ಜಗತ್ತಿನ ರಂಗ ಮಂಟಪದ ಮೇಲೆ ಪ್ರಾಪ್ತ

ವಾಗುವ ಬಹುಮಾನ, ಕೀರ್ತಿ, ಅಲಭ್ಯ ಲಾಭಗಳು ಸ್ತ್ರೀಯರ ಮೇಲೆಯೇ ಅವಲಂಬಿಸಿವೆ. ಪುರುಷರ ಕೀರ್ತಿ ಧ್ವಜವನ್ನು ಉನ್ನತ ಸ್ಥಾನಕ್ಕೇರಿಸುವವಳು ಸ್ತ್ರೀಯೇ ಇರುವಳು. ಸ್ತ್ರೀಯು ಗೃಹಲಕ್ಷ್ಮಿ, ದೇವಿ, ಸರಸ್ವತಿ ಎಂದು ತಿಳಿಯುವರು. ಸ್ತ್ರೀಯು ಅರ್ಧಾಂಗಿನಿಯಾಗಿರುವಳು ಮಹಾರಾಣೀ ಜನ್ಮ ಸಮಯ ಜನಿನೀ। ಭೋಗ ಸಮಯ ಬಾಲಾ। ಪೂಜಾ ಸಮಯ ದೇವಿ। ಅಂತ ಸಮಯ ಕಾಲಿಕಾ।

ವಿಜಯಾರಾಣಿ— ಮಹಾರಾಜರೇ ಏನಾದರೂ ಪುರುಷರ ಸೌಭಾಗ್ಯದಿಂದಲೇ ಸ್ತ್ರೀಯರ ಜೀವನ.

ಸತ್ಯಂಧರ— ವಿಜಯಾರಾಣಿ.

(ತೆರೆ ಬೀಳುವದು)

ಎರಡನೆಯ ದೃಶ್ಯ

(ಕಾಷ್ಠಾಂಗಾರನ ರಾಜದರಬಾರ. ಪ್ರತಿರಾಜ ಸಿಂಹಾಸನದ ಮೇಲೆ ಕುಳಿತುಕೊಂಡಿದ್ದಾನೆ. ಕೃತಘ್ನ ಕಾಷ್ಠಾಂಗಾರನ ವಿಚಾರವೆಂದರೆ— ರಾಜಾ ಸತ್ಯಂಧರನ ನಾಶ ಮತ್ತು ಸ್ವಯಂಪೂರ್ಣ ರಾಜ್ಯಾಧಿಕಾರಿಯಾಗಬೇಕೆಂಬುದು. ಸಿಂಹಾಸನದ ಮೇಲಿಂದ ಎದ್ದು ಅತ್ತಿತ್ತ ತಿರುಗಾಡಿ ಮತ್ತೆ ಕುಳಿತುಕೊಳ್ಳುತ್ತಾನೆ.)

ಕಾಷ್ಠಾಂಗಾರ— ಅದೆಷ್ಟು ದಿನ ಪರಾಧೀನನಾಗಿ ನಿಲ್ಲುವದು? ಪರಾಧೀನಕ್ಕಿಂತ ಮರಣವೇ ಲೇಸು. ರಾಜಾ ಸತ್ಯಂಧರನು ರಾಜ್ಯ ನಡೆಸಲು ಕೊಟ್ಟಿದ್ದಾನೆ. ಇದುವರೆಗೆ ನಡೆಸಿದೆ. ಆದರೆ ಇನ್ನು ಮುಂದೆ ಸಾಧ್ಯವಿಲ್ಲ. ಯಾರ ಆಧೀನದಲ್ಲಿಯೂ ನಿಂತು, ರಾಜ್ಯ ಮಾಡುವ ಅಪೇಕ್ಷೆ ನನ್ನದಿಲ್ಲ. ನಾನು ಸ್ವತಂತ್ರ ರಾಜನಾಗದ ಹೊರತು ಮನಸ್ಸಿಗೆ ಎಳ್ಳಷ್ಟು ಸರಿ ಎಣಿಸಲಾರದು. ಇನ್ನು ಮುಂದೆ ರಾಜನ ಆಧೀನದಲ್ಲಿ ನಿಲ್ಲುವದು ವಿಹಿತವಲ್ಲ. ವನದಲ್ಲಿ ಸಂಚರಿಸುವ ಸಿಂಹವು ತನ್ನ ಬಲ ಮತ್ತು ಪರಾಕ್ರಮದಿಂದ ಎಲ್ಲ ಪ್ರಾಣಿಗಳ ರಾಜನಾಗುವಂತೆ ನಾನಾದರೂ ನನ್ನ ಪುರುಷಾರ್ಥವನ್ನು ತೋರಿಸಿ ಪ್ರಜೆಗಳ



ಕಾಷ್ಠಾಂಗಾರನು ಸತ್ಯಂಧರನ ಕೊಲೆ ಮಾಡಿ,
ತಾನು ಸ್ವತಃ ರಾಜನಾಗುವ ಕುಟಿಲ ವಿಚಾರ ಮಾಡುತ್ತಲಿದ್ದಾನೆ.

ಸ್ವತಂತ್ರ ರಾಜನಾಗಬೇಕಾಗಿದೆ.(ಸ್ವಲ್ಪ ವಿಚಾರಿಸಿ) ಆದರೆ ಉಪಾಯವಾವುದು ? (ವಿಚಾರ ಹೊಳೆದಂತೆ) ಹೌದು. ರಾಜಾ ಸತ್ಯಂಧರನನ್ನು ಕೊಲ್ಲುವದೇ ಯೋಗ್ಯವಾದ ಉಪಾಯವು. ಇದೊಂದೇ ಪುರುಷಾರ್ಥವು. ಆದರೆ (ಸ್ವಲ್ಪ ಮನಸ್ಸಿನಲ್ಲಿ ವಿಚಾರಿಸಿ) ಈ ಪುರುಷಾರ್ಥ ಸಾಧನೆಯು ಸಾಮಾನ್ಯವಾದದ್ದಲ್ಲ. ರಾಜಾ ಸತ್ಯಂಧರನು ಪರಾಕ್ರಮಿಯಾಗಿರುವನು. ಒಂದು ವೇಳೆ ಈ ಮಾತು ಆತನಿಗೆ ಗೊತ್ತಾದರೆ ಬೆಕ್ಕು ಇಲಿಯನ್ನು ಆಟವಾಡಿಸಿ ಹೊಡೆಯುವಂತೆ ನನ್ನನ್ನು ಆಟವಾಡಿಸಿ ನನ್ನ ಆಹುತಿ ತೆಗೆದುಕೊಳ್ಳಬಹುದು. ಈಗ ಪ್ರಜೆಗಳು ನನ್ನ ಅಧಿಕಾರದಲ್ಲಿದ್ದರೂ ಅವರ ಪೂರ್ಣ ಪ್ರೀತಿಯು ರಾಜನಮೇಲೆಯೇ ಇರುವದು. ಈ ಮಾತು ಪ್ರಜೆಗಳಿಗೆ ಮತ್ತು ಸೈನ್ಯಕ್ಕೆ ತಿಳಿಯಬಾರದು. ಸ್ವಲ್ಪಾದರೂ ತಿಳಿದರೆ ಜೇನ ಹುಳಗಳಂತೆ ಎದ್ದು ನನ್ನನ್ನು ಕಚ್ಚಿ ತಿನ್ನಬಹುದು. (ಏಳುತ್ತಾನೆ) ಇದರ ಬಗೆಗೆ ಏನು ಮಾಡಬೇಕು? ರಾಜನಿರುವವರೆಗೆ ನನ್ನ ಬೇಳೆಯು ಬೇಯುಲಾರದು. ನನ್ನ ಭಾಗ್ಯ ಬೆಳೆಯುಲಾರದು. (ಸ್ವಲ್ಪ ಎತ್ತರದ ಧ್ವನಿಯಲ್ಲಿ) ಸತ್ಯಂಧರ ರಾಜನನ್ನು ಕೊಂದ ಮೇಲೆಯೇ ನನಗೆ ಸಮಾಧಾನ. ಆದರೆ ಇದಕ್ಕೆ ಯೋಗ್ಯ ವಿಚಾರ ಮಾಡಬೇಕಾಗಿದೆ. (ವಿಚಾರ ಮಾಡುತ್ತ ಅತ್ತಿಂದಿತ್ತ ತಿರುಗುತ್ತ ವಿಚಾರ ಬಂದು ಬಿಡುತ್ತದೆ.) ಹಾಂ! ಉಪಾಯವಿದೆ. (ತಿರುಗಿ ಬಂದು ಸಿಂಹಾಸನದಮೇಲೆ ಕುಳಿತುಕೊಳ್ಳುತ್ತಾನೆ. ಅಷ್ಟರಲ್ಲಿ ಧರ್ಮದತ್ತ, ಪ್ರಧಾನ ಮಂತ್ರಿ, ೨-೩ ಸರದಾರರು ಪ್ರವೇಶಿಸಿ ನಮಸ್ಕಾರ ಮಾಡಿ ಕುಳಿತುಕೊಳ್ಳುತ್ತಾರೆ.) ಪ್ರಧಾನ ಮಂತ್ರಿವರ್ಯರೇ! ಇನ್ನೇನು ಮಾಡಬೇಕೆಂದು ತಿಳಿಯದಾಗಿದೆ. ನಮ್ಮ ವಿಚಾರಕ್ಕೆ ಹೊರತಾಗಿದೆ. ಮನುಷ್ಯನಿಗೆ ಮುಷ್ಟಿ ಪ್ರಹಾರದಿಂದ ಶರೀರದೊಳಗೆ ವೇದನೆಯಾಗುವದು ಅದರಂತೆ ಆಗುತ್ತಲಿದೆ. ಬಾಯಿ ತೆರೆಯಬೇಕೋ ಅಥವಾ ಮುಚ್ಚಬೇಕೋ ತಿಳಿಯದಾಗಿದೆ.

ಪ್ರಧಾನ ಮಂತ್ರಿ— (ವಿವೇಕದಿಂದ) ಇಂಥದೇನು ?. ಅದಾವ ಮಾತು ?

ಕಾಷ್ಠಾಂಗಾರ— ಮಂತ್ರಿಯವರೇ ತಮಗೆ ಹೇಳುವದು ನನಗೆ ಸರಿ ಎಣಿಸಲಾರದಾಗಿದೆ. ಹೇಳದಿರುವದೇ ಉತ್ತಮ.

ಪ್ರಧಾನ ಮಂತ್ರಿ— ಆದರೂ........

ಕಾಷ್ಠಾಂಗಾರ— ಆದರೂ ಮನುಷ್ಯನ ಮನದಲ್ಲಿ ಯಾವದೊಂದು ವಿಚಾರ ಬಂದಿತೆಂದರೆ ಆ ಮನುಷ್ಯನ ವಿಚಾರಗಳ ಮೇಲೆ ಅಥವಾ ಕಾರ್ಯದ ಮೇಲೆ ಹೆಚ್ಚು ಭಾರ ಬಿದ್ದರೆ ಅಥವಾ ಸಹಿಸುವ ಶಕ್ತಿ ಆಗದಿದ್ದಲ್ಲಿ ಅದು ಕಡಿಮೆಯಾಗುವದರ ಸಲುವಾಗಿ ಎರಡನೆಯವರ ಕಿವಿಯ ಮೇಲೆ ಹಾಕಬೇಕಾಗುತ್ತದೆ. ಅದರಿಂದ ಭಾರ ಕಡಿಮೆಯಾದಂತಾಗುವದು. ಇದಕ್ಕಾಗಿ ಹೇಳಬಯಸುವೆನು. ಮಂತ್ರಿವರ್ಯರೇ "ಎಷ್ಟೋ ದಿನಗಳಿಂದ ಓರ್ವ ರಾಜದ್ರೋಹಿ ದೇವತೆಯು ನನ್ನ ಕನಸಿನಲ್ಲಿ ಬಂದು ಪ್ರತಿನಿತ್ಯ ಹೇಳುತ್ತಿದ್ದಾಳೆ. ಅದೇನೆಂದರೆ (ಎದೆಗೆ ಕೈ ಹಚ್ಚಿ) ರಾಜಾ ಸತ್ಯಂಧರನ ಕೂಡಾ ಯುದ್ಧ ಮಾಡಿ ಅವನನ್ನು ಯುದ್ಧದಲ್ಲಿ ಕೊಂದು ಸ್ವತಂತ್ರ ರಾಜನಾಗಬೇಕು. ಆದರೆ ಇದು ನನಗೆ ಒಪ್ಪಿಗೆಯಾಗದು ಮತ್ತು ಸರಿ ಎಣಿಸಲಾರದು. ಮಾಡುವದೇನು ? (ಮಂತ್ರಿಗಳು ಒಬ್ಬರನೊಬ್ಬರು ನೋಡಿ ಕಾಷ್ಠಾಂಗಾರನ ಕಪಟ ವಚನ ರಚನೆಯನ್ನು ತಿಳಿದುಕೊಳ್ಳುತ್ತಾರೆ.)

ಮಂತ್ರಿಗಣ ಸರದಾರರು }— (ಆಶ್ಚರ್ಯದಿಂದ ಒಂದೇ ಧ್ವನಿಯಲ್ಲಿ) ಏನು !

ಕಾಷ್ಠಾಂಗಾರ— (ಸಹಜತೆಯಿಂದ) ನನ್ನ ಕನಸಿನಲ್ಲಿ ಆದದ್ದನ್ನು ತಮ್ಮ ಕಿವಿಯ ಮೇಲೆ ಹಾಕಿದ್ದೇನೆ. ಇಷ್ಟೇ.

ಮಂತ್ರಿಗಣ— ಬಹಳೇ ಒಳ್ಳೆಯದಾಯಿತು. (ಸ್ವಗತ) (ಒಬ್ಬರೊಬ್ಬರು ತಮ್ಮ ತಮ್ಮೊಳಗೆ ಅವನ ದುಷ್ಟ ವಿಚಾರ ಏನೆಂಬುದನ್ನು ತಿಳಿದುಕೊಳ್ಳಲು) ಹೇಳಿರಿ ! ಹೇಳಿರಿ !

ಕಾಷ್ಠಾಂಗಾರ— (ಕಪಟತನದಿಂದ) ಹಾಂ ! ಏನರಿ ! (ಸಭ್ಯತನದ ನಟನೆ ಮಾಡುತ್ತ) ಹೌದು ನಿಜ. ಆದರೆ ಇದು ನನಗೆ ಸರಿ ಎಣಿಸಲಾರದಾಗಿದೆ. ಮತ್ತು ತಿಳಿಯಲಾರದಾಗಿದೆ. ಏಕೆಂದರೆ ಈ

ದೇವಿಯು ಸತ್ಯಂಧರ ರಾಜನ ಜೊತೆಗೆ ದ್ರೋಹ ಮಾಡಲು ಪ್ರೇರಣೆಯನ್ನು ಕೊಡುತ್ತಿದ್ದಾಳೆ. ಇದರ ಕಾರಣವೇನಿರಬಹುದು ? ಇಂಥ ದ್ರೋಹ ಮಾಡುವದಕ್ಕೆ ದೇವಿಯು ಹೇಳಬಾರದಾಗಿತ್ತು. ಒಂದು ವೇಳೆ ದೇವತೆಯು ಸ್ವಪ್ನದಲ್ಲಿ ಬಂದು ಹೇಳಿದ್ದನ್ನು ಅಲ್ಲಗಳೆದರೆ ಪರಿಣಾಮವು ಇಷ್ಟೋ? ಅನಿಷ್ಟೋ? ಎಂಬುದನ್ನು ವಿಚಾರಿಸಿರಿ. 'ದೇವಿಯು ದಿನಾಲು ಒಂದು ಹೇಳುತ್ತಿದ್ದರೂ ನಾನು ಲಕ್ಷ ಕೊಟ್ಟಿಲ್ಲ.

ಪ್ರಧಾನ ಮಂತ್ರಿ— (ಕಾಷ್ಠಾಂಗಾರನ ಕಪಟಾಚರಣೆಯನ್ನು ತಿಳಿದು) (ಸ್ವಗತ) ಓಹೋ ಇದು ಕಾಷ್ಠಾಂಗಾರನ ಕಪಟ ಕಾರಸ್ಥಾನವೇ ಕಾಣಿಸುತ್ತದೆ. ಕಪಟಿಯು ಮನದಲ್ಲಿ ಒಂದು, ವಚನದಲ್ಲಿ ಇನ್ನೊಂದು ಕೃತಿಯಲ್ಲಿ ಬೇರೊಂದು ಮಾಡುತ್ತಾನೆ. ಅದರಂತೆ ಈ ಮಾಯಾವಿ ಕಾಷ್ಠಾಂಗಾರನು ಮನದಲ್ಲಿ ಸ್ವಯಂ ರಾಜನ ಕೊಲೆ ಮಾಡಬಯುಸಿದ್ದಾನೆ. ಆದರೆ ಕುಟಿಲ ಜಾಲ ರಚಿಸಿ ಮಂತ್ರಿಗಳಿಗೆ ಸಲಹೆ ಕೇಳುವ ಡಂಭಾಚಾರ ಮಾಡುತ್ತಿದ್ದಾನೆ. ಆಗಲಿ ! (ಪ್ರಕಟ) ಮುಂದೆ ದೇವಿಯ ವಾಣಿ ಏನಿದೆ ?

ಕಾಷ್ಠಾಂಗಾರ— ಸತ್ಯಂಧರ ರಾಜನ ಕೂಡ ಯುದ್ಧ ಮಾಡಿರೆಂದು ತಮ್ಮ ಮುಂದೆ ಹೇಳುವದು ಲಜ್ಜಾಸ್ಪದವಿದೆ. ಏಕೆಂದರೆ ಯಾರು ಏನೆನ್ನಬಹುದು ? ಆದರೆ ದೇವಿ ಭಯದಿಂದ ಅನಿವಾರ್ಯವಾಗಿ ನಿಮ್ಮ ಮುಂದೆ ಹೇಳಬೇಕಾಗಿದೆ. ಇಲ್ಲವಾದರೆ ದೇವಿಯು ಯಾವ ಸಂಕಟ ತಂದೊಡ್ಡುವಳು ತಿಳಿಯಲಾರದು.

ಪ್ರಧಾನ ಮಂತ್ರಿ— (ಒಬ್ಬರನ್ನೊಬ್ಬರು ನೋಡಿ ವಿಚಾರಿಸುತ್ತಾರೆ) (ಸ್ವಗತ) ಒಂದು ವೇಳೆ ನಾನು ಸತ್ಯಂಧರ ರಾಜನ ಪಕ್ಷ ಹಿಡಿದು ಮಾತನಾಡಿದರೆ, ಇವನ ಪ್ರತಿಕಾರ ಮಾಡಿದರೆ ಇವನು ನಮ್ಮ ಪ್ರಾಣಾಪಹರಣ ಮಾಡಲು ಹಿಂಜರಿಯಲಾರನು. ಈಗ ರಾಜ್ಯಸತ್ತೆಯು ಇವನ ಕೈಯಲ್ಲಿಯೇ ಇರುವದು. ಅದರಿಂದ ಸರ್ವನಾಶ ಮಾಡಬಹುದು. ಆದರೂ ಪ್ರಜಾವತ್ಸಲನೂ, ಧರ್ಮನಿಷ್ಠನೂ ಆದ ರಾಜಾ ಸತ್ಯಂಧರನು ನಮ್ಮ ಪ್ರಾಣ ಸ್ವರೂಪನಾಗಿದ್ದಾನೆ.

ನಮ್ಮ ಪ್ರಾಣಕ್ಕಿಂತಲೂ ನಮ್ಮ ರಾಜನ ಪ್ರಾಣವು ಹೆಚ್ಚಿಗೆ ಪ್ರಿಯವಾಗಿದೆ. ಅಂದ ಮೇಲೆ ನಮ್ಮ ಪ್ರಾಣ ಪ್ರಿಯ ರಾಜನ ಸಲುವಾಗಿ ನಾವಾದರೂ ಜೀವದ ಪರಿವೆ ಏಕೆ ಮಾಡಬೇಕು? (ಪ್ರಕಟ ಹಾಗೂ ಸೌಮ್ಯದಿಂದ) ಮಹಾರಾಜರ ಸಂಗಡ ಯುದ್ಧ ಮಾಡುವ ವಿಚಾರವು ಧರ್ಮಕ್ಕೆ ಮತ್ತು ಸಭ್ಯತೆಗೆ ಯೋಗ್ಯವಲ್ಲ. ಅದಲ್ಲದೆ ದೊಡ್ಡ ಆಪತ್ತು ನಿರ್ಮಾಣವಾಗುವ ಸಂಭವವಿರುವದು.

ಕಾಷ್ಠಾಂಗಾರ— ಪ್ರಧಾನರೇ! ಅದಾವದು?

ಪ್ರಧಾನ ಮಂತ್ರಿ— ಮಹಾರಾಜ "ಅನಾಯಕಾ ವಿನ ಶಂತಿ" ಈ ನೀತಿಗೆ ಅನುಸರಿಸಿ ರಾಜ ಶೂನ್ಯ ಪ್ರಜೆಗಳಿಗೆ ಸೌಖ್ಯವಾಗುವದಿಲ್ಲ. ಏಕೆಂದರೆ ವೈರಿಗಳನ್ನು ನಿರ್ಬಲರನ್ನಾಗಿ ಮಾಡಬೇಕಾದರೆ ಸಬಲ ಅರ್ಥಾತ್ ಬಲವಾನರ ಸಮುದಾಯದ ಐಕ್ಯತೆ ಬೇಕು. ಅದಕ್ಕೋಸ್ಕರ ಪ್ರಾಣ ರಕ್ಷಣೆ ಮಾಡುವ ಕಾರಣರೂಪನಾದಂಥ, ಪ್ರಜೆಗಳ ಪ್ರಾಣ ಸ್ವರೂಪನಾದ ರಾಜನ ವಿಷಯದಲ್ಲಿ ಯಾವದೋ ಇಷ್ಟ ಅಥವಾ ಅನಿಷ್ಟ ವ್ಯವಹಾರ ಆಗುತ್ತದೆಯೋ ಅದು ಕೇವಲ ರಾಜನ ಮೇಲೆಯೇ ಅಲ್ಲ ಸಮಸ್ತ ಪ್ರಜೆಗಳ ಮೇಲೆಯೇ ಆಗುವದೆಂದು ತಿಳಿಯಬೇಕು. ಅದಕ್ಕಾಗಿ ನೀವಾದರೂ ರಾಜನ ವಿಷಯದಲ್ಲಿ ಮಾಡುವ ಅನಿಷ್ಟ ವಿಚಾರದಿಂದ ಕೇವಲ ರಾಜನ ಹಾನಿಯಷ್ಟೇ ಅಲ್ಲ. ಸಮಸ್ತ ಪ್ರಜೆಗಳ ನಾಶ ಮಾಡುತ್ತಿರುವಿರೆಂದು ತಿಳಿಯಬೇಕು.

ಕಾಷ್ಠಾಂಗಾರ— ಮಂತ್ರಿಗಳೇ ನಾವು ಪ್ರಜೆಗಳಿಗೆ ಯಾವ ಅನಿಷ್ಟವನ್ನು ತರುವದಿಲ್ಲ. ದೇವಿಯ ಭಯದಿಂದಲೇ ಕೇವಲ ರಾಜನ ಸಂಬಂಧವಾಗಿ ವಿಚಾರ ಮಾಡುತ್ತಿದ್ದೇವೆ.

ಪ್ರಧಾನ ಮಂತ್ರಿ— (ಸ್ವಲ್ಪ ಉಗ್ರನಾಗಿ) ಇದರ ಅರ್ಥವೇನು? ಯಾವ ಮನುಷ್ಯನು ಪ್ರಜೆಗಳಿಗೆ ಪ್ರಾಣ ಪ್ರಿಯನಿದ್ದಾನೆಯೋ, ಆ ರಾಜನ ಜೊತೆಗೆ ದ್ರೋಹ! ಪ್ರಾಣ ಘಾತಕ ವಿಚಾರ ಮಾಡುವದಕ್ಕೆ ಅಂಜುವದಿಲ್ಲವೋ ಅವನು ಅನ್ಯ ಮನುಷ್ಯರ ಸಂಗಡ

ಪ್ರಾಣ ಘಾತ ಮಾಡುವದಕ್ಕೆ ಸಂಕೋಚ ಪಡುವನೇ? ಯಾವ ಮನುಷ್ಯನು ಇಂಥ ಕು-ವಿಚಾರ ಮಾಡುತ್ತಾನೆಯೋ ಅವನು ಪಂಚ ಪಾಪಗಳಿಗೆ ಅಧಿಕಾರಿಯಾಗುತ್ತಾನೆಂದು ತಿಳಿಯಬೇಕು. ಇದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಅದಕ್ಕಾಗಿ ನೀವಾದರೂ ರಾಜನ ಸಂಗಡ ದ್ರೋಹ ಮಾಡಿದರೆ ಪಂಚ ಪಾತಕಗಳ ಪೋಷಕರಾಗಿರುವಿರೆಂದು ತಿಳಿಯಬೇಕು.

ಕಾಷ್ಠಾಂಗಾರ— (ಸ್ವಲ್ಪ ವಕ್ರತೆಯಿಂದ) ಮಂತ್ರಿವರ್ಯರೇ ದೇವಿಯು ಬಂದು ಹೇಳುವದು ಅಸತ್ಯ ಮತ್ತು ನಾವು ಹೇಳುತ್ತಿರುವುದೂ ಅಸತ್ಯವೆಂದು ಅರ್ಥವಾಯಿತಲ್ಲ ಇನ್ನು ನಿಮ್ಮ ಮಾತುಗಳನ್ನು ನಿಲ್ಲಿಸಿರಿ.

ಪ್ರಧಾನ ಮಂತ್ರಿ— (ಧೈರ್ಯದಿಂದ) ಮಾತು ನಿಲ್ಲಿಸುವದೇತಕ್ಕೆ ಕೇಳಿರಿ. ಈ ಜಗತ್ತಿನಲ್ಲಿ ಮೂರ್ತಿ ಸ್ವರೂಪರಾದ ದೇವಿ ದೇವತೆಗಳು ತಮ್ಮ ಜೀವ ರಕ್ಷಣೆ ಮಾಡಿಕೊಳ್ಳಲು ಶಕ್ಯವಿಲ್ಲದಾಗ ಅಜ್ಞಾನಿ ಪಶುಗಳ ಕಡೆಯಿಂದ ಪ್ರತ್ಯಕ್ಷದಲ್ಲಿ ತಿರಸ್ಕೃತರಾದದ್ದು ಕಂಡು ಬರುತ್ತದೆ. ರಾಜರು ತಮ್ಮ ಹಾಗೂ ಪ್ರಜೆಗಳ ಮತ್ತು ದೇವಿ ದೇವತೆಗಳ ರಕ್ಷಣೆಯನ್ನು ಮಾಡುತ್ತಾರೆ. ಆ ಕಾರಣ ದೇವಿ-ದೇವತೆಗಳಿಂತಲೂ ರಾಜನೇ ಶ್ರೇಷ್ಠನೆಂದು ತಿಳಿಯುವದು. ಅಂದ ಮೇಲೆ ಇಂತಹ ರಾಜನ ಸಂಗಡ ನಿಮ್ಮ ಈ ಕೃತಘ್ನತನವು ದೊಡ್ಡ ಅನ್ಯಾಯವಾಗಿದೆ.

ಕಾಷ್ಠಾಂಗಾರ— ಮಂತ್ರಿವರ್ಯರೇ! ನ್ಯಾಯ ಅನ್ಯಾಯಗಳ ಪ್ರಶ್ನೆಯಿಲ್ಲ. ದೇವಿಯ ಪ್ರಶ್ನೆಯಿದೆ. ಹೇಗೆ ದೈವ ವಿರಬಹುದೋ ಹಾಗೆ ಆಗಬಹುದು. ದೇವ ದೇವತೆಗಳಿಗಿಂತಲೂ ನಿಮ್ಮ ರಾಜನು ಹೇಗೆ ಶ್ರೇಷ್ಠನಾಗುತ್ತಾನೆ ?

ಪ್ರಧಾನ ಮಂತ್ರಿ— ನೋಡಿರಿ. ಈ ಲೋಕದಲ್ಲಿ ಯಾವ ಮನುಷ್ಯನು ದೇವಿಯ ಅಪಮಾನ ಮಾಡುತ್ತಾನೆಯೋ ಆ ಮನುಷ್ಯನಿಗೆ ದೇವಿಯು ಬಂದು ತೊಂದರೆ ಕೊಡುತ್ತಾಳೆ. ಅದರಂತೆ ಯಾವ ಮನುಷ್ಯನು ರಾಜನನ್ನು ತಿರಸ್ಕರಿಸುವನೋ ಅವನನ್ನು, ಅವನ

ವಂಶವನ್ನು, ಅವನ ಸಂಪತ್ತಿಯನ್ನು ರಾಜನು ಅದೇ ಕ್ಷಣದಲ್ಲಿ ನಷ್ಟಮಾಡಿ ಬಿಡುತ್ತಾನೆ. ಆದಕ್ಕಾಗಿ ಕಾಷ್ಠಾಂಗಾರರೇ, ನೀವಾದರೂ ರಾಜನ ದ್ರೋಹ ಮಾಡುವನನ್ನು ಬಿಟ್ಟು ಬಿಡಿರಿ ಇಲ್ಲವಾದರೆ ನಿಮ್ಮದೂ, ನಿಮ್ಮ ಕುಟುಂಬದ್ದೂ, ನಿಮ್ಮ ಸಂಪತ್ತಿಯದೂ ಕ್ಷಣದಲ್ಲಿಯೇ ನಾಶ ಮಾಡಬಹುದು.

ಕಾಷ್ಠಾಂಗಾರ— (ಕ್ರೋಧದಿಂದ) ಮಂತ್ರಿ ! ಏನು ಮಾತನಾಡುತ್ತಿರುವಿ ?

ಪ್ರಧಾನ ಮಂತ್ರಿ— (ಕ್ರೋಧದಿಂದ) ಯೋಗ್ಯವಾದದ್ದನ್ನೇ ನುಡಿಯುತ್ತಿದ್ದೇನೆ. ಇಲ್ಲಿಯ ವರೆಗೆ ಯಾರ ಎಂಜಲ ಮುಸುರೆಯನ್ನು ತಿಂದು ಜೀವಿಸಿದೆಯೋ ಅವರ ಮನೆಯ ಗಳ ಎಣಿಸುತ್ತಿರುವೆಯಾ? ಸ್ವಲ್ಪಾದರೂ ನಿನ್ನ ದರಿದ್ರತನದ ನೆನಪು ಮಾಡಿಕೋ! ಲಜ್ಜಿತನಾಗು. ಯಾವ ಮಾತೆಯು ಉದರದಲ್ಲಿ ಒಂಬತ್ತು ತಿಂಗಳ ವರೆಗೆ ಹೊತ್ತುಕೊಂಡು ರಕ್ಷಿಸಿದಳೋ ಆ ಮಹದುಪಕಾರಿ ಮಾತೆಯ ಹೊಟ್ಟೆ ಹರಿದು ಹೃದಯ ಭಕ್ಷಿಸುವವನು ಪಶುವೋ ! ರಾಕ್ಷಸವೋ ! ಅದೇ ಪ್ರಕಾರ ನೀನಾದರೂ ಯಾವ ರಾಜನ ಅನ್ನ ತಿಂದು ಕ್ರಿಮಿ ಕೀಟಕಗಳಂತೆ ಬದುಕಿರುವೆಯೋ ಅದೇ ರಾಜನ ಪ್ರಾಣ ಭಕ್ಷಣ ಮಾಡುವ ಪ್ರಯತ್ನದಲ್ಲಿದ್ದವನಿಗೆ ಮನುಷ್ಯನೆಂದು ಯಾರು ಕರೆಯಬೇಕು ? ರಾಕ್ಷಸ ವೃತ್ತಿಯ ಮನುಷ್ಯನಿಗೆ................

ಕಾಷ್ಠಾಂಗಾರ— (ಅತ್ಯಂತ ಕ್ರೋಧದಿಂದ) ಮಂತ್ರಿ! ಬಾಯಿ ಮುಚ್ಚು! ನಿನ್ನ ಈ ನಿಷ್ಫಲ ಶಬ್ದದ ಗರ್ಜನೆಗೆ ನಾನು ಹೆದರಲಾರೆ.

ಮೊದಲನೆಯ ಸರದಾರ— (ಆವೇಶದಿಂದ) ಕಾಷ್ಠಾಂಗಾರ! ಈ ಮಂತ್ರಿಯ ಪಾದ ಧೂಳಿಯಷ್ಟಾದರೂ ಬೆಲೆ ನಿನಗಿಲ್ಲ. ಆದರೂ ನೀನು ಎಲವೋ ತಲವೋ ಎಂದು ಮಾತನಾಡುತ್ತೀ ?

ಎರಡನೆಯ ಸರದಾರ— ಒಂದು ವೇಳೆ ಹೆಚ್ಚು ಕಡಿಮೆ ಏನಾದರೂ ಮಾತನಾಡುವ ಪ್ರಯತ್ನ ಮಾಡಿದರೆ ಇಲ್ಲಿಯೇ ನಿನ್ನ ಸೋಕ್ಷ ಮೋಕ್ಷವಾಗುವದೆಂದು ತಿಳಿ.

ಕಾಷ್ಠಾಂಗಾರ— ಸೋಕ್ಷ ಮೋಕ್ಷ ಯಾರದಾಗುವದೊ ಅದು ಕಂಡು ಬರು

ವದು. ಇದು ವರೆಗೆ ರಾಜನ ಆಧೀನನಾಗಿ ನಿಂತು ಬದುಕಿದ್ದೆ. ಇನ್ನು ಮುಂದೆ ಆಡಿನಂತೆ ನಿರ್ಬಲನಾಗಿ ರಾಜನ ಆಧೀನನಾಗಿ ನಿಂತು ಜೀವನ ಕಳೆಯುವದರಲ್ಲಿ ಅರ್ಥವಿಲ್ಲ. ಆಡಾಗಿ ನೂರು ದಿನ ಬದುಕುವದಕ್ಕಿಂತಲೂ ಹುಲಿಯಾಗಿ ಒಂದೇ ದಿನ ಬಾಳುವುದು ಉತ್ತಮ.

ಪ್ರಧಾನ ಮಂತ್ರಿ— ಎಲವೋ ಹುಲಿಯೇ ಹುಲಿಯ ಚರ್ಮವನ್ನು ಧರಿಸಿಕೊಂಡ ಮಾತ್ರಕ್ಕೆ ಹುಲಿಯಾಗಲಾರೆ. ಅದಕ್ಕೆ ಕ್ಷತ್ರಿಯ ರಕ್ತ ಬೇಕು. ಅಷ್ಟೇ ಅಲ್ಲ ಕಾಷ್ಠಾಂಗಾರನೇ ಕೇಳು ! ರಾಜರು ಇಚ್ಛೆ ಮಾಡುವವರಿಗೆ ಅವರ ಪ್ರಾರ್ಥನೆಯನ್ನು ಕೇಳಿ ಅವರ ಅಭೀಷ್ಟವನ್ನು ಪೂರ್ಣಮಾಡುತ್ತಾರೆ. ಆದರೆ ಅವರ ಅಪಮಾನಾದಿಗಳನ್ನು ಮಾಡುವವರಿಗೆ ಮಾತ್ರ ಧ್ವಂಸಮಾಡಿ ಬಿಡುತ್ತಾರೆ. ಯಾವ ಪ್ರಕಾರ ಮನುಷ್ಯನು ಅಗ್ನಿಯಿಂದ ಸುಟ್ಟು ಹೋಗಬಾರದೆಂದು ಸಾವಧಾನತೆಯಿಂದ ಅಗ್ನಿಯ ಉಪಯೋಗ ಮಾಡುತ್ತಾನೆ. ಅದೇ ಪ್ರಕಾರ ರಾಜನ ಭಯದಿಂದ ಸಾವಧಾನವಾಗಿದ್ದುಕೊಂಡು ನಡೆಯುವದರಲ್ಲಿಯೇ ಮನುಷ್ಯನ ಕಲ್ಯಾಣವಾಗುವದು. ಅದಕ್ಕೋಸ್ಕರ ನೀನು ನಿನ್ನ ಕುಶಲತೆಯನ್ನು ಬಯಸುವದಾದರೆ ರಾಜನ ವಿರೋಧ ಸಾಗುವದು ಸರಿಯಲ್ಲ. (ಕಾಷ್ಠಾಂಗಾರನ ಮೇಲೆ ಮಂತ್ರಿಗಳ ಮಾತಿನ ಪರಿಣಾಮ ತಿಲ ಮಾತ್ರವೂ ಆಗಲಿಲ್ಲ.)

ಕಾಷ್ಠಾಂಗಾರ— ನಿಷ್ಫಲ ಮಾತುಗಳನ್ನಾಡಿ ಏಕೆ ಬಾಯಿ ನೋಯಿಸಿಕೊಳ್ಳುವಿರಿ. ಹೇಗಿದ್ದರೂ ನನ್ನ ವಿಚಾರವು ನಿರ್ಧಾರವಾಗಿದೆ. ಇದರಲ್ಲಿ ಸ್ವಲ್ಪಾದರೂ ಬದಲಾವಣೆಯಾಗಲಾರದು. ಎಲ್ಲಿಯು ವರೆಗೆ ರಾಜಾ ಸತ್ಯಂಧರನು ಈ ಲೋಕವನ್ನು ಬಿಟ್ಟು ಹೋಗುವದಿಲ್ಲವೋ ಅಲ್ಲಿಯು ವರೆಗೆ...............ಅಲ್ಲಿಯು ವರೆಗೆ.

ಮೊದಲನೆಯ ಸರದಾರ— ಧರ್ಮಾತ್ಮರು ನೀಚರಿಗೆ ಧನಸಂಪತ್ತು ಕೊಟ್ಟು ಉತ್ತಮ ಪದಾರ್ಥಗಳನ್ನು ತಿನಿಸಿದ ಮೇಲೆ ಅವ

ರಿಗೆ ಸಂತೋಷವಾಗಬಹುದು. ಆದರೆ ಆದಕ್ಕೆ ಪ್ರತಿಯಾಗಿ ವಿಷವನ್ನೇ ಕಾರುವರು.

ಕಾಷ್ಠಾಂಗಾರ— (ಅತ್ಯಂತ ಕ್ರೋಧದಿಂದ) ಹಾಂ! ಎಲ್ಲಿಯವರೆಗೆ ರಾಜಾ ಸತ್ಯಂಧರನು ಈ ಲೋಕದಿಂದ ನಾಶ ಹೊಂದುವದಿಲ್ಲವೋ ಆಲ್ಲಿಯವರೆಗೆ........ಸಿಪಾಯಿ, ಸೇನಾಪತಿ.

ಪ್ರಧಾನ ಮಂತ್ರಿ— (ಅತ್ಯಂತ ಕ್ರೋಧದಿಂದ) ಅಲ್ಲಿಯವರೆಗೆ ನಿನ್ನದೇ ಪ್ರಾಣದ ಆಹುತಿಯಾಗುವದು. ರಾಜಾ ಸತ್ಯಂಧರ ಈ ಲೋಕದಿಂದ ಹೊರಟು ಹೋಗುವ ಮೊದಲೇ ನಿನ್ನದೇ ಪ್ರಾಣದ ಸ್ವಾಗತವಾಗುವದು, ಇದನ್ನೇ ತಿಳಿ. (ಧರ್ಮದತ್ತ, ಪ್ರಧಾನ ಮಂತ್ರಿ, ಸರದಾರರು ಆವೇಶದಿಂದ ಹೊರಟು ಹೋಗುವರು. ಎರಡನೆಯ ಕಡೆಯಿಂದ ಕಾಷ್ಠಾಂಗಾರನ ಕೈಗೊಂಬೆಗಳಾದ ನೀಚ, ಕೃತಘ್ನ ಮಂತ್ರಿಗಳು ಬರುತ್ತಾನೆ. ಕಾಷ್ಠಾಂಗಾರ ಅವರಿಗೆ ಆಜ್ಞೆಯನ್ನು ಕೊಡುತ್ತಾನೆ.)

ಕಾಷ್ಠಾಂಗಾರ— ಸೇನಾಪತಿಗಳೇ, ಸರದಾರರೇ, ಸೈನ್ಯವನ್ನು ಪೂರ್ಣ ಸಜ್ಜುಗೊಳಿಸಿರಿ. ಸೂರ್ಯೋದಯವಾಗುವದರೊಳಗಾಗಿ ರಣರಂಗದ ಮೇಲೆ ಯುದ್ಧದ ಕಹಳೆಯನ್ನು ಮೊಳಗಿಸಬೇಕು.

(ತೆರೆ ಬೀಳುವದು)

ಮೂರನೆಯ ದೃಶ್ಯ

(ಪುರೋಹಿತ ಸಜ್ಜನರಾಯ ಪ್ರವೇಶಿಸುವರು.)

ಸಜ್ಜನರಾಯ— ಆಶ್ಚರ್ಯ! ಮಹದಾಶ್ಚರ್ಯ! ಎಲ್ಲವೂ ಆಶ್ಚರ್ಯ! ಸೂರ್ಯನು ದಿನಾಲು ಇದ್ದಕ್ಕಿದ್ದಂತೆ ಉದಯ ಮತ್ತು ಅಸ್ತನಾಗುತ್ತಾನೆ. ಆ ಹಗಲು ರಾತ್ರಿಯ ಒಂದೊಂದು ಗಳಿಗೆಯಲ್ಲಿ ಮಾನವನ ಭಾವನೆ ಹಾಗೂ ಪ್ರಕೃತಿಯಲ್ಲಿ ಭೂಮಿ ಆಕಾಶದಷ್ಟು ಬದಲಾವಣೆಯಾಗುತ್ತದೆ. ಇಂದು ಈ ಕ್ಷಣಾರ್ಧದಲ್ಲಿ ಇಡೀ ಜಗತ್ತಿನ ತುಂಬಾ ಅಕಸ್ಮಾತ್ ವಿಚಿತ್ರ ಪರಿಸ್ಥಿತಿಯು ನಿರ್ಮಾಣವಾಗಿದೆ. ಒಂದು ಕ್ಷಣಾರ್ಧದ ಪೂರ್ವ

ದಲ್ಲಿ ಇಡೀ ಜಗತ್ತು ಉಲ್ಹಾಸದೊಂದಿಗೆ ನಗುತ್ತಲಿತ್ತು. ಆನಂದದಿಂದ ಉಯ್ಯಾಲೆಯಾಡುತ್ತಿತ್ತು. ಮತ್ತು ನಿಶ್ಚಿಂತೆಯಿಂದ ಕುಣಿದಾಡುತ್ತಿತ್ತು. ಅದೇ ಜಗತ್ತು ಈಗ ಹಾಹಾಕಾರ ರೂಪದಿಂದ ಆಕ್ರೋಶ ಮಾಡುತ್ತಲಿದೆ.

ಪುರೋಹಿತ— ಸಜ್ಜನರಾಯರೇ ಶುಷ್ಕವನದಲ್ಲಿ ಬಿದ್ದಂತಹ ಅಣು ಸ್ವರೂಪವಾದ ಅಗ್ನಿಕಣವು ಹಬ್ಬುತ್ತ ಹೋಗಿ ಸಂಪೂರ್ಣ ವನವನ್ನೇ ಸುಟ್ಟು ಬಿಡುವಂತೆ ಈ ಪೃಥ್ವಿಯ ಶಾಂತಿರೂಪ ಸಾಮ್ರಾಜ್ಯದಲ್ಲಿ ಬಿದ್ದಂತಹ ಸ್ವಾರ್ಥದ ನೀಚರೂಪದ ಅಗ್ನಿ ಕಣವು ಹಬ್ಬುತ್ತ ಹೋಗಿ ಇಡೀ ಸಾಮ್ರಾಜ್ಯವನ್ನೇ ದಹಿಸಿ ಬಿಡುತ್ತಲಿದೆ.

ಸಜ್ಜನರಾಯ— ಪುರೋಹಿತರೇ ತಾವೇ ನೋಡಿರಿ! ಜಗತ್ತಿನ ಆನಂದವನ್ನು ನೋಡಿ ನಾವು ಅದೆಷ್ಟು ಹರ್ಷ ಪುಲಕಿತರಾಗಿದ್ದೆವು. ಆದರೆ ಈ ಹೊತ್ತು............

ಪುರೋಹಿತ— ಈ ಹೊತ್ತು ನಾವು ನಿರಾಶರಾಗಿದ್ದೇವೆ.

ಸಜ್ಜನರಾಯ— ಪುರೋಹಿತರೇ ಈ ಲೋಕದ ಪರಿವರ್ತನವು ವಿಚಿತ್ರಮಯವಾಗಿದೆ. ಪಿತ್ತ ಜ್ವರವೇರಿದ ಮನುಷ್ಯನಿಗೆ ಅಮೃತ ಸಮಾನವಾದ ಸ್ವಾದಿಷ್ಟಯುಕ್ತ ಹಾಲು ಕೂಡಾ ಕಹಿ ಎನಿಸುತ್ತದೆ. ಅದೇ ಪ್ರಕಾರ ಆ ಮಹಾಪಾಪಿ ಕಾಷ್ಠಾಂಗಾರನಿಗೆ ಧರ್ಮದತ್ತ ಪ್ರಧಾನ ಮಂತ್ರಿಯು ಹೇಳಿದ ಹಿತಕರ ರಸಯುಕ್ತ ವಾಣಿಯು ವಿಷ ಸಮಾನ ಪ್ರತೀತವಾಯಿತು.

ಪುರೋಹಿತ— ಆಮ್ರ ಫಲವನ್ನು ತಿನ್ನುವ ಸುಜ್ಞಾನಿಯು ಆಮ್ರ ವೃಕ್ಷದ ರಕ್ಷಣೆಯನ್ನು ಮಾಡುತ್ತಾನೆ. ಆದರೆ ಅದರ ರುಚಿಯನ್ನೇ ಅರಿಯದ ಅಜ್ಞಾನಿಯು ಸಮೂಲ ವೃಕ್ಷವನ್ನೇ ಕಡಿದು ಹಾಕಿ ಒಂದೇ ಸಮಯದಲ್ಲಿ ತಿನ್ನಲು ಅಪೇಕ್ಷಿಸುತ್ತಾನೆ.

ಸಜ್ಜನರಾಯ— ಹಾಂ! ಈ ಕಾಷ್ಠಾಂಗಾರನು ಅಂಥವನೇ ಸತ್ಯಂಧರನು ಭೋಗಿಸಲು ಕೊಟ್ಟ ರಾಜ್ಯವನ್ನು ಸುಖದಿಂದ ಭೋಗಿಸದೆ

ರಾಜ್ಯಸುಖವನ್ನರ್ಪಿಸಿದ ರಾಜನನ್ನು ಕೊಲ್ಲುವ ದುಷ್ಟವಿಚಾರವನ್ನು ಮಾಡುತ್ತಲಿದ್ದಾನೆ.

ಪುರೋಹಿತ— ಅಹುದು ಸಜ್ಜನರಾಯರೇ, ಸ್ವಾರ್ಥ ಸಾಧನೆಯಲ್ಲಿ ತನ್ಮಯನಾದ ಮನುಷ್ಯನು ಯಾವಾಗಲೂ ತನ್ನ ದೋಷಗಳ ಕಡೆಗೆ ಗಮನ ಕೊಡುವದಿಲ್ಲ. ಅದೇ ಪ್ರಕಾರ ಕಾಷ್ಠಾಂಗಾರನ ಮನಸ್ಸಿನಲ್ಲಿ ಸತ್ಯಂಧರ ರಾಜನನ್ನು ಕೊಂದು ಸ್ವತಂತ್ರ ರಾಜನಾಗಬೇಕೆಂಬ ಇಚ್ಛಾರೂಪಿ ಪಿಶಾಚಿಯು ಸೇರಿದೆ.

ಸಜ್ಜನರಾಯ— ಇಷ್ಟೇ ಅಲ್ಲ; ಪುರೋಹಿತರೇ, ಆ ಕಾಷ್ಠಾಂಗಾರನಿಗೆ ಸ್ವಲ್ಪಾದರೂ ಲಜ್ಜೆ ಇಲ್ಲ. ಏಕೆಂದರೆ ದೊಡ್ಡ ದೊಡ್ಡ ಪ್ರತಿಷ್ಠಿತ ಪ್ರಜೆಗಳು ಹಾಗೂ ರಾಜ ಹಿತೈಷಿಗಳು ನನಗೆ ಕೃತಘ್ನ, ದ್ರೋಹಕಾರಿ ಅನ್ನಬಹುದು. ನನ್ನ ಅಪಕೀರ್ತಿಯಾಗಬಹುದೆಂಬ ಅರಿವು ಸ್ವಲ್ಪಾದರೂ ಇಲ್ಲ. ಆ ವಿಚಾರದ ಪರಿವೆಯಿಲ್ಲ.

ಪುರೋಹಿತ— ಅಹುದು; ಸಜ್ಜನರಾಯರೇ, ಪ್ರಾಣಿ ವಧೆಮಾಡುವ ದುಷ್ಟ ಕಾರ್ಯದಲ್ಲಿ ಆಸಕ್ತನಾದ ಮನುಷ್ಯನ ಕೈಯಲ್ಲಿ ಶಸ್ತ್ರವು ದೊರೆತರೆ ಆ ಕಾರ್ಯವನ್ನು ಮಾಡಿಯೇ ತೀರುವನು. ಅದರಂತೆ ಆ ಕಾಷ್ಠಾಂಗಾರನಿಗೆ ಸಹಜವಾಗಿ ಪ್ರಾಪ್ತವಾದ ರಾಜಸತ್ತೆ ಮತ್ತು ದುಷ್ಟ ಬೀಗನಾದ ಮಥನನ ಸಲಹೆ ದೊರೆತದ್ದರಿಂದ ಈ ಅನರ್ಥ ನಿಂದನೀಯ ಕಾರ್ಯವನ್ನು ಮಾಡಲು ಪ್ರವರ್ತನಾಗಿದ್ದಾನೆ.

ಸಜ್ಜನರಾಯ— ಇದು ಮಾನವ ವೃತ್ತಿಯಲ್ಲ. ಏಕೆಂದರೆ ಘಂಡರಿದಾಸನೆಂದು ಬೆಕ್ಕಿನ ಕೊರಳಲ್ಲಿ ಮಾಲೆ ಹಾಕಿ ಇಲಿಗಳಿಗೆ ವಿಶ್ವಾಸ ಕೊಟ್ಟರೂ ಕೂಡಾ ಬೆಕ್ಕು ತನ್ನ ಸ್ವಭಾವಕ್ಕನುಗುಣವಾಗಿ ವಿಶ್ವಾಸಘಾತ, ಹಿಂಸೆಯನ್ನೇ ಮಾಡುವದು. ಹಾವು ಮುಂಗಲಿಗಳು ಗೆಳೆಯರಾಗಿರಲು ಸಾಧ್ಯವಿಲ್ಲ. ಅಗ್ನಿಯು ಶೀತವಾಗಿರಲು ಹೇಗೆ ಅಸಾಧ್ಯವೋ ಹಾಗೆ ಆ ಕಾಷ್ಠಾಂಗಾರನ ಕ್ರೂರ

ಹೃದಯವು ಶಾಂತವೆಂದೂ ಆಗಲಾರದು. ಅವಿಚಾರಿ, ಕುಲಹೀನನಾದಂಥ ಕಾಷ್ಠಾಂಗಾರನಿಗೆ ರಾಜ್ಯ ಕೊಡುವದು ವಿಷಕಾರುವ ಹಾವಿಗೆ ಹಾಲು ಕುಡಿಸಿದಂತೆಯೇ ಸರಿ. ಅದು ಅಮೃತವೆಂದಿಗೂ ಆಗಲಾರದು.

ಪುರೋಹಿತ— ನೀವೆನ್ನುವದು ನಿಜ. ಸದ್ಯದ ಪರಿಸ್ಥಿತಿಯು ಅತಿ ಗಂಭೀರವಾಗಿದೆ. ಅದೇನೆಂದರೆ ಬಾಯಿಯಲ್ಲಿ ತೆಗೆದುಕೊಂಡ ಹಾಲು ಇಲ್ಲವೆ ನೀರನ್ನು ನುಂಗಬೇಕು ಅಥವಾ ಉಗುಳಬೇಕು. ಇವೆರಡರ ಹೊರತು ಬೇರೆ ಮಾರ್ಗವಿಲ್ಲ. ಅದರಂತೆ ಕಾಷ್ಠಾಂಗಾರನಿಗೆ ಕೊಟ್ಟ ರಾಜ್ಯವನ್ನು ಯುದ್ಧ ಮಾಡಿ ಕೈವಶ ಮಾಡಿಕೊಳ್ಳಬೇಕು. ಇಲ್ಲವೆ ಅವನಿಗೆ ಬಿಟ್ಟು ಬಿಡಬೇಕು ಇವೆರಡರ ಹೊರತು ಬೇರೆ ಮಾರ್ಗವಿಲ್ಲ.

ಸಜ್ಜನರಾಯ— ಈ ಕಾಷ್ಠಾಂಗಾರನು ತನ್ನ ಹೃದಯದಲ್ಲಿದ್ದ ಸ್ವಾರ್ಥರೂಪಿ ವಿಚಾರವನ್ನು ನುಂಗಬೇಕು ಇಲ್ಲವೆ ವಮನ ಮಾಡಬೇಕು. ಅಂದರೆ ಕೆಟ್ಟ ವಿಚಾರವನ್ನು ಬಿಟ್ಟು ಬಿಡಬೇಕು ಇಲ್ಲವೆ ಸತ್ಯಂಧರ ರಾಜನೊಡನೆ ಯುದ್ಧ ಮಾಡಿ ಕೊಂದು ಸ್ವತಃ ರಾಜನಾಗಬೇಕು. ಈಗಲಾದರೂ ಕಾಷ್ಠಾಂಗಾರನು ಆ ಕು-ವಿಚಾರವನ್ನು ಬಿಟ್ಟು ಸತ್ಯಂಧರ ರಾಜನಿಗೆ ಶರಣು ಹೋಗುವದರಲ್ಲಿಯೇ ಅವನ ಕುಶಲ ಮತ್ತು ರಕ್ಷಣೆಯಿದೆ.

ಪುರೋಹಿತ— ಸಜ್ಜನರಾಯರೇ, ಕಾಗೆಗೆ ಹಿತಕರವಾದ ಬೇವಿನ ಫಲವು ಇತರ ಪಕ್ಷಿಗಳಿಗೆ ಅಹಿತವಾಗಿರುತ್ತದೆ. ಶಾಕಾಹಾರಿ ಗಿಳಿಗಳು ರುಚಿಕಟ್ಟಾದ ಆಮ್ರ ಫಲಗಳನ್ನು ಭಕ್ಷಿಸುತ್ತವೆ. ಆದರೆ ಅವು ಕಾಗೆಗೆ ಸ್ವಾದಿಷ್ಠವಲ್ಲ. ಕಾಗೆಯು ಬೇವಿನಕಾಯಿ, ಮಾಂಸ, ಕೊಳೆತ ಹೊಲಸು ಪದಾರ್ಥಗಳನ್ನು ಭಕ್ಷಣ ಮಾಡುವಂತೆ ಕಾಷ್ಠಾಂಗಾರನು ಸತ್ಯಂಧರ ರಾಜರ ಬಗೆಗೆ ಹೀನ ವಿಚಾರವನ್ನೇ ಇಟ್ಟು ಕೊಂಡಿದ್ದಾನೆ.

ಸಜ್ಜನರಾಯ— ಪುರೋಹಿತರೇ ಸಮಸ್ಯೆಯು ಮಹಾ ಕಠಿಣವಾಗಿದೆ. ಪರಿಸ್ಥಿತಿಯು ಕ್ಷಣ ಕ್ಷಣಕ್ಕೆ ಬದಲಾಗುತ್ತಿದೆ. ಏನಾಗುವದೋ ಯಾರು ಬಲ್ಲರು ?

ಪುರೋಹಿತ— ಎಂಥ ಸಮಯವು ಬರುವದೋ ಎಂಬುದನ್ನು ಚಿಂತಿಸುವದಕ್ಕಿಂತ ಮೊದಲೇ ನಾವು ತನು ಮನ ಧನಗಳಿಂದ ಶಕ್ಯವಿದ್ದ ಮಟ್ಟಿಗೆ ರಾಜನ ಸ್ಥಾನ ಮಾನಗಳನ್ನು ಕಾಯಲು ಸಹಾಯ ಮಾಡೋಣ. (ಹೋಗುವರು)

(ತೆರೆ ಬೀಳುವದು)

ಮೂರನೆಯ ಅಂಕ

ಮೊದಲನೆಯ ದೃಶ್ಯ

(ರಾಜಾ ಸತ್ಯಂಧರನು ತನ್ನ ರಾಜಮಹಲಿನಲ್ಲಿ ವಿಜಯಾರಾಣಿಯು ಆಗಮನ ವನ್ನು ಪ್ರತೀಕ್ಷೆ ಮಾಡುತ್ತ ಕುಳಿತುಕೊಂಡಿದ್ದಾನೆ.)

ಸತ್ಯಂಧರ— ಭಾರತದ ಪವಿತ್ರ ಭೂಮಿಯ ಮೇಲೆ ಅನೇಕ ಮಹಾ ಪುರುಷರು, ಸಾಧು ಸಂತರು, ವೃಷಭನಾಥ ತೀರ್ಥಂಕರರಿಂದ ಮಹಾವೀರ ತೀರ್ಥಂಕರ ವರೆಗೆ ೨೪ ಮಂದಿ ತೀರ್ಥಂಕರರು, ಚಕ್ರವರ್ತಿಗಳು, ಕಾಮದೇವರು, ಭರತ ಬಾಹುಬಲಿ, ರಾಮ ಚಂದ್ರಾದಿ ಸತ್ಪುರುಷರು ಅವತರಿಸಿ ಬಾಳಿ ಬೆಳಗಿದರು. ಈ ತೀರ್ಥಂಕರ ಪೂರ್ವದಲ್ಲಿಯೂ ಇದೇ ಪರಂಪರೆಯು ನಡೆ ಯುತ್ತ ಬಂದಿದೆ. ಈಗಲಾದರೂ ಅದೇ ಪರಂಪರೆಯ ಮೇರೆಗೆ ನಿಸ್ಪ್ರಹಿಗಳಾದ ಮುನೀಶ್ವರರು ಗಿರಿ ಕಂದರ ವನದಲ್ಲಿ ವಾಸ ಮಾಡುತ್ತ ಮುಕ್ತಿಸಾಧನೆ ಗೈಯುತ್ತಲಿದ್ದಾರೆ. ಮತ್ತು ಸತ್ಯ ಶೀಲ, ಸದಾಚಾರ ಸಂಪನ್ನರಾದ ಸಜ್ಜನರಾದರೂ ಇರು ವರು. ಮುಂದಾದರೂ ಹೀಗೆ ನಡೆಯುವದು ಇಂಥ ಮೋಕ್ಷ, ಪುರುಷಾರ್ಥಿ ಜನರಿಗೆ ನಿಜವಾದ ಸುಖ ಪ್ರಾಪ್ತಿಯಾಗು ವದು ಮತ್ತು ನಾನು ಅವರ ಪವಿತ್ರವಾದ ಭೂಮಿಯ ಮೇಲೆ ಜನ್ಮ ತಾಳಿ ಯಾವ ಸುಖವನ್ನು ಬಯಸುತ್ತಿದ್ದೇನೆ? ಏನು ಅವರ ಉದಾರತೆ, ಸತ್ಯಸಂಧತೆ, ರೀತಿ-ನೀತಿ, ನೈರ್ಮಲ್ಯ ತೆಯ ಭಾವ ಎಲ್ಲವೂ ಪರಿಪೂರ್ಣವಾಗಿದ್ದವು. ಅವರು ಸಂಸಾರದಲ್ಲಿದ್ದರೂ ನಿರಿಚ್ಛರಾಗಿದ್ದರು. ಕಮಲವು ಕೆಸರಿನಲ್ಲಿ ಹುಟ್ಟಿದರೂ ಕೂಡಾ ಕೆಸರಿನ ಸ್ಪರ್ಶ ಮಾಡುವದಿಲ್ಲ. ಅದು

ಸೂರ್ಯನ ಕಿರಣಗಳಿಗೆ ಪ್ರಿಯಕರವಾಗಿರುವದು. ಆ ನಿರ್ಮಲ, ನಿಷ್ಕಲಂಕ ಕಮಲವು ಸೂರ್ಯನ ತೇಜಃಪುಂಜವಾದ ಕಿರಣಗಳನ್ನು ನೋಡುವದರ ಸಲುವಾಗಿ ಉಲ್ಹಾಸಯುಕ್ತವಾಗಿ ಕೆಸರನ್ನೂ, ನೀರನ್ನೂ ಬಿಟ್ಟು ಮೇಲೆ ಬಂದು ಕೌತುಕದಿಂದ ನೋಡುತ್ತದೆ. ಅಂಥ ಕಮಲಗಳಿಂದಲೇ ಸರೋವರವು ಶೋಭಾಯಮಾನವಾಗಿ ಕಾಣುತ್ತದೆ. ಹಂಸ ಪಕ್ಷಿಗಳು ಆ ಸ್ವಚ್ಛಂದ ನಿರ್ಮಲ ಕಮಲಗಳಿಗಾಗಿ ಹಾತೊರೆಯುವವು. ಅದರಂತೆ ತೀರ್ಥಂಕರಾದಿ ಮಹಾಪುರುಷರು ಸಂಸಾರದಲ್ಲಿ ಜನಿಸಿದರೂ ಕೂಡಾ ಅದರಿಂದ ಅಲಿಪ್ತರಾಗಿರುವದರಿಂದ ಅವರು ಮೂರು ಲೋಕದೊಳಗೆ ಪೂಜ್ಯರಾದರು.

(ಅಷ್ಟರಲ್ಲಿ ವಿಜಯಾರಾಣಿಯು ಕೊನೆಯ ವಾಕ್ಯವನ್ನು ಕೇಳುತ್ತ ಪ್ರವೇಶಿಸುವಳು.)

ವಿಜಯಾರಾಣಿ— ಮೂರು ಲೋಕದಲ್ಲಿ ಯಾರು ಪೂಜ್ಯರಾಗಿದ್ದಾರೆ?

ಸತ್ಯಂಧರ— ಮಹಾಪುರುಷರು ಮಹಾರಾಣೀ!

ವಿಜಯಾರಾಣಿ— ಮಹಾಪುರುಷರು?

ಸತ್ಯಂಧರ— ಹೌದು ಮಹಾಪುರುಷರು! ಅವರ ಆತ್ಮ ಶುದ್ಧರೂಪದಿಂದ ಸಿದ್ಧಸ್ಥಾನದ ಮೇಲಿದ್ದರೂ ಕೂಡಾ ಈ ಪೃಥ್ವಿಯ ಮೇಲೆ ಸೂರ್ಯ ಚಂದ್ರರಂತೆ ಸದೈವ ಪ್ರಕಾಶಿಸುತ್ತಿದ್ದಾರೆ ಮತ್ತು ನಾವು............

ವಿಜಯಾರಾಣಿ— ನಾವು!........ಏನು? ಮಧ್ಯದಲ್ಲಿಯೇ ಮಾತನ್ನು ನಿಲ್ಲಿಸಿದಿರೇಕೆ? ಹೇಳಿರಿ.

ಸತ್ಯಂಧರ— ಮಹಾರಾಣೀ, ನರಭವ ಧಾರಣ ಮಾಡಿದ ಮೇಲೆ ನರನಾಗಿ ಜೀವಿಸಬೇಕು. ಮಾನವ ಜನ್ಮ ಸಾರ್ಥಕ ಮಾಡಿಕೊಳ್ಳಬೇಕು. ಆದರೆ ನಮ್ಮ ಕೈಯಿಂದ ಇದು ವರೆಗೆ ಯಾವ ಪುಣ್ಯಕಾರ್ಯವೂ ಆಗಿರುವದಿಲ್ಲ.

ವಿಜಯಾರಾಣಿ— ಪ್ರಾಣನಾಥರೇ! ತಮ್ಮ ಕೈಯಿಂದೇನಾಗಬೇಕಾಗಿದೆ?

ಹೇಳಿರಿ. ಅದನ್ನು ನನಗೆ ಹೇಳದ ಹೊರತು ಮತ್ತಾರಿಗೆ ಹೇಳುವಿರಿ ?

ಸತ್ಯಂಧರ— ಪ್ರಾಣಪ್ರಿಯೆ ನಿನಗೆ ಹೇಳಲಾರದ ಯಾವ ಮಾತನ್ನು ಮುಚ್ಚಿಟ್ಟಿದ್ದೇನೆ. ನಿನಗೆ ಎಲ್ಲವನ್ನೂ ಅರ್ಪಿಸಿದ್ದೇನೆ. ನೋಡು ನಾವು ಪೂರ್ವ ಜನ್ಮದ ಪುಣ್ಯದ ಬಲದಿಂದ ಈ ಹೊತ್ತು ರಾಜ ಸುಖದ ವೈಭವವನ್ನು ಭೋಗಿಸುತ್ತಿದ್ದೇವೆ. ಭೋಗ ವಿಲಾಸದಲ್ಲಿ ಮಗ್ನರಾಗಿದ್ದೇವೆ. ಸರ್ವಾಧಿಕಾರಗಳು ನಮಗೆ ಪ್ರಾಪ್ತವಾಗಿವೆ. ಆದರೆ ವಿಚಾರ ಮಾಡಿ ನೋಡಿದರೆ ಈ ಸಂಸಾರದಲ್ಲಿ ೮೪ ಲಕ್ಷ ಯೋನಿಗಳೊಳಗೆ ಮಾನವ ಯೋನಿಯೇ ಶ್ರೇಷ್ಠವೆಂದು ಹೇಳಿರುತ್ತಾರೆ. ಮಾನವ ಜನ್ಮವು ಸ್ವಾತ್ಮ ಕಲ್ಯಾಣದ ತವರುಮನೆಯಾಗಿದೆ. ಮಾನವ ಮತ್ತು ಪಶು ಪಕ್ಷಿ ಯೋನಿಗಳಲ್ಲಿ ಆಹಾರ, ನಿದ್ರೆ, ಭಯ, ಮೈಥುನ ಇವುಗಳು ಸಾಮಾನ್ಯ ರೀತಿಯಿಂದ ಸಮಾನವಾಗಿವೆ. ಆದರೆ ಮಾನವರಲ್ಲಿ ಒಂದು ಧರ್ಮವೇ ವಿಶಿಷ್ಟವಾಗಿದೆ. ಧರ್ಮ, ವಿವೇಕ, ಯೋಗ್ಯಾಯೋಗ್ಯಗಳ ಜ್ಞಾನ, ಶಕ್ತಿ ವಿಶೇಷವಾಗಿ ಮಾನವರಲ್ಲಿಯೇ ಇರುವವು.

ವಿಜಯಾರಾಣಿ— ಇಲ್ಲವೆಂದು ಹೇಳಿದವರಾರು ?

ಸತ್ಯಂಧರ— ಇಲ್ಲ; ಯಾರೂ ಹೇಳಿಲ್ಲ. ಆದರೆ ನಾವು ಇಲ್ಲಿವರೆಗೆ ಆ ಮಾರ್ಗದ ಅವಲಂಬನೆ ಮಾಡಿಲ್ಲ. ಅದಲ್ಲದೆ ರಾಜನೀತಿ, ನ್ಯಾಯನೀತಿ, ಪ್ರಜೆಗಳ ಸುಖದುಃಖ, ಪರೋಪಕಾರ ಧರ್ಮಾಚರಣೆ ಮುಂತಾದ ಕರ್ತವ್ಯ ಸ್ವಲ್ಪವೂ ಸಹ ಮಾಡಿಲ್ಲ. ಅವುಗಳನ್ನು ಬೇಗನೆ ಈಡೇರಿಸಬೇಕೆಂಬ ಸದಿಚ್ಛೆ ಮನದಲ್ಲಿ ಉದ್ಭವಿಸಿದೆ.

ವಿಜಯಾರಾಣಿ— ಪ್ರಾಣನಾಥರೇ! ತಾವು ಪ್ರಜಾಪಾಲಕರಿದ್ದೀರಿ. ಕಾರ್ಯ ಮತ್ತು ಅಧಿಕಾರದ ಸತ್ತಾಧೀಶರು ತಾವೇ ಇರುವಿರಿ. ತಮ್ಮ ದಯಾಮಯ ಧರ್ಮದ ಪಾಲನೆಯಿಂದ ಕೇವಲ ಮಾನವರೇಕೆ ಸಂಪೂರ್ಣ ಪ್ರಾಣಿ ಮಾತ್ರರು ಸಂತುಷ್ಟಿಯೊಂದಿಗೆ ಜೀವನ

ವ್ಯತೀತ ಮಾಡುತ್ತಲಿದ್ದಾರೆ. ಸಂಪೂರ್ಣ ಪ್ರಾಣಿ ಮಾತ್ರರ ಮೇಲೆ ದಯಾ ಭಾವನೆಯನ್ನಿಡುವುದೇ ನಿಜವಾದ ಧರ್ಮವು. ಅದೇ ರಾಜರ ಧರ್ಮವು.

ಸತ್ಯಂಧರ— ಮಹಾರಾಣಿಯ ವಚನವು ಸತ್ಯವಿದೆ. ಆದರೆ ಪ್ರಸಂಗವಶಾತ್ ನಮಗೆ ರಾಜಕಾರಣಾರ್ಥವಾಗಿ ನಾಲ್ಕೆರಡು ದಿವಸ ಹೊರಗೆ ಹೋಗಿ ನಿಲ್ಲಬೇಕಾದರೆ ಅಂಥ ಸಮಯದಲ್ಲಿ ನಮ್ಮ ಪ್ರಿಯ ರಾಣಿಗೆ ಹೇಗೆ ಅನಿಸಬಹುದು ?

ವಿಜಯಾರಾಣಿ— (ನಿಶ್ವಾಸ ಬಿಟ್ಟು) ಹೇಗಾಗಬಹುದು? ಪತಿದೇವ ಹೇಳಲೀ?

ಸತ್ಯಂಧರ— ಹೇಳು ವಿಜಯಾ.

ವಿಜಯಾರಾಣಿ— ಚಾತಕವು ಸ್ವಾತಿಯ ಬಿಂದುವನ್ನು, ಚಕೋರಿಯು ಚಂದ್ರನನ್ನು ಇಚ್ಛಿಸುವಂತೆ ನಾನು ನಿಮನ್ನೇ ಇಚ್ಛಿಸುವೆನು.

ಸತ್ಯಂಧರ— (ರಾಣಿಯ ಗದ್ದ ಹಿಡಿದು ತನ್ನ ಕಡೆಗೆ ಬೆರಳು ಮಾಡಿ) ಈ ಚಕೋರವು (ರಾಣಿಯ ಕಡೆಗೆ ಬೆರಳು ಮಾಡಿ) ಈ ಚಕೋರಿಯನ್ನು ಬಿಟ್ಟು ಎಲ್ಲಿಗೂ ಹೋಗಲಾರದು. ಹಂಸ ಪಕ್ಷಿಯು ಸರೋವರವನ್ನು ಬಿಟ್ಟು ಅನ್ಯತ್ರ ಹೇಗೆ ಹೋಗುವದಿಲ್ಲವೋ ಅದರಂತೆ.

ವಿಜಯಾರಾಣಿ— ಸರೋವರ! ಇಲ್ಲೆಲ್ಲಿದೆ ಸರೋವರ? ಹಂಸ ಪಕ್ಷಿಯೆಲ್ಲಿದೆ?

ಸತ್ಯಂಧರ— ನೋಡು(ರಾಣಿಯ ಸರ್ವಾಂಗದ ಕಡೆಗೆ ಬೆರಳು ಮಾಡಿ ತೋರಿಸುತ್ತಾ) ಮನಮೋಹನ ರೂಪಿ ವಿಶಾಲ ಶರೀರವೇ ಸರೋವರವು. ಈ ಪ್ರೇಮ ಸರೋವರದಲ್ಲಿ ಸುಂದರ ಗುಣರೂಪಿ ಬಣ್ಣದ ಕಮಲಗಳ ಮಧ್ಯ ಭಾಗದಲ್ಲಿ ಸಮರಸವಾಗಿ ಸಂಚಾರ ಮಾಡುವ ಹಂಸವೇ ನಾನು.

ವಿಜಯಾರಾಣಿ— ರಾಜ ಹಂಸ ! ಹಂಸ ರಾಜನನ್ನು ಬಿಟ್ಟು ಹಂಸಿನಿಯು ದೂರ ನಿಲ್ಲಲು ಸಾಧ್ಯವೇ ?

ಸತ್ಯಂಧರ— (ರಾಣಿಯ ಎರಡೂ ಕೈಗಳನ್ನು ಹಿಡಿದು) ಇದರಂತೆಯೇ ಜೀವನಾಂತ್ಯದ ವರೆಗೆ ಸುಖ ವಿಲಾಸದಲ್ಲಿಯೇ ಜೀವನವನ್ನು ಕಳೆಯಬೇಕೆಂಬ ನಮ್ಮ ಮನದಿಚ್ಛೆ.

ವಿಜಯಾರಾಣಿ— ಜೀವನದ ಅಂತ್ಯವೇ ಆಗಬಾರದೆಂಬುದು ನನ್ನ ಮನದಿಚ್ಛೆ.

ಸತ್ಯಂಧರ— ಅದಕ್ಕಿಂತಲೂ ವಿಶೇಷವೇನೆಂದರೆ ಶೀಘ್ರಾತಿ ಶೀಘ್ರವಾಗಿ ಜನ್ಮ ತೆಗೆದುಕೊಳ್ಳುವ ಕುಲೋದ್ಧಾರಕ ಸುಪುತ್ರನನ್ನು ಪಡೆಯುವ ಆತುರತೆಯಲ್ಲಿರಬಹುದೆಂದು ತೋರುತ್ತದೆ.

ವಿಜಯಾರಾಣಿ— (ಲಜ್ಜಾಯುಕ್ತಳಾಗಿ ಆನಂದದಿಂದ) ಅಹುದು.

ಸತ್ಯಂಧರ— ಓಹೋ! ಅಂದ ಮೇಲೇನು? ಯುವರಾಜನ ಜನ್ಮವಾದ ನಂತರ ನಮ್ಮ ಜೊತೆಗೆ ಮಾತನಾಡಲೂ ಕೂಡಾ ಸಮಯ ಸಿಗುವದೋ ಇಲ್ಲವೋ ಏನೋ? ಬಾಲ ಯುವರಾಜನ ಭವಿಷ್ಯದ ಸುಂದರ ಸ್ವಪ್ನಗಳು ನಿಮಗೆ ಈಗಿಂದಲೇ ಕಾಣುತ್ತಿರುವವಲ್ಲವೇ!

ವಿಜಯಾರಾಣಿ— (ಲಜ್ಜಾಯುಕ್ತ ಹಾಗು ಪ್ರೇಮಭರಿತಳಾಗಿ) ಆ ಯುವರಾಜನ ಆತುರತೆಯು ನನಗಿಂತಲೂ ತಮಗೇ ಅಧಿಕವಾಗಿರುವದೆಂದು ತೋರುತ್ತದೆ.

ಸತ್ಯಂಧರ— ಅದು ಹೇಗೆ?

ವಿಜಯಾರಾಣಿ— ಅದು ಹೇಗೆಂದರೆ— ಯುವರಾಜನು ನಗುವದು, ಸರಿದಾಡುವದು, ಕುಳಿತುಕೊಳ್ಳುವದು, ನಡೆದಾಡುವದು, ಓಡುವದು, ಮಾತನಾಡುವದು, ತಿನ್ನುವದು, ಕುಡಿಯುವದು, ಆಡುವದು ಈ ಪ್ರಕಾರ ಯುವರಾಜನ ಬಾಲಲೀಲೆಯನ್ನು ನೋಡಿ ಕಲಾಕೌಶಲ್ಯಗಳ ಕೌತುಕಮಾಡುವದು. ಇದರ ಕಡೆಯೇ ತಮ್ಮ ಲಕ್ಷವು ಪೂರ್ಣವಾಗಿ ಕೇಂದ್ರೀಕೃತವಾಗಿದೆ. ಆದರೆ ತಮ್ಮ ಯುವರಾಜನ ರುಚಿಕರವಾದ ತೊದಲ್ನುಡಿ, ಅವನ ಲೀಲೆಯೊಳಗೆ ನನ್ನನ್ನು ಮರೆಯಬೇಡಿರಿ.

ಸತ್ಯಂಧರ— ವಿಜಯಾರಾಣಿ ನೀನು ನನ್ನ ಸಂಗಡ ಜನ್ಮ ಜನ್ಮಾಂತರದ ಸಂಬಂಧವನ್ನು ಜೋಡಿಸಿರುವಿ. ಅದಕ್ಕೆ ಅಂತ್ಯಸಲ್ಲಾ. ಪ್ರೇಮದಿಂದ ಜೋಡಿಸಿದ ಆತ್ಮೀಯತೆಯು ಕಡಿದರೂ ಕಡಿಯಲಾರದು. ಅದು ನಮ್ಮ ಸಂಗಡವೇ ಬರುವದು. ನಮ್ಮ ಪ್ರೇಮ

ವಾದರೂ.......... (ಅಷ್ಟರಲ್ಲಿ ನಗರದ ದ್ವಾರಪಾಲಕನು ಅತ್ಯಂತ ಭಯಭೀತನಾಗಿ ತಲೆಯಲ್ಲಿ ಅನೇಕ ವಿಚಾರಗಳ ತುಮುಲವಿದ್ದದರಿಂದ ಗಂಭೀರ ಮುದ್ರೆಯನ್ನು ಮಾಡಿಕೊಂಡು ಓಡುತ್ತಾ ಬಂದು ರಾಜನಿಗೆ ನಮಸ್ಕರಿಸಿ ಸಮಾಚಾರವನ್ನು ತಿಳಿಸುತ್ತಾನೆ)

ದ್ವಾರಪಾಲಕ— ಮಹಾರಾಜರೇ ! ಮಹಾರಾಜರೇ ! ಅನಾಹುತ ! ಅನಾಹುತವಾಯಿತು. ಕಾಷ್ಠಾಂಗಾರನು ತಮ್ಮ ವಿರುದ್ಧ ಬಂಡನ್ನು ಎಬ್ಬಿಸಿದ್ದಾನೆ. ಅಲ್ಲದೆ ಯುದ್ಧ ಭೂಮಿಯ ಮೇಲೆ ಸೈನ್ಯವು ಸಮಾವೇಶವಾಗುತ್ತಲಿದೆ. (ರಾಣಿಯು ಭಯಭೀತಳಾಗುತ್ತಾಳೆ.)

ಸತ್ಯಂಧರ— (ಕ್ರೋಧಾವೇಶದಿಂದ ಒಮ್ಮೇಲೆ ಎದ್ದು ನಿಂತು) ಏನು ? (ಒರೆಯಿಂದ ಖಡ್ಗ ಹಿರಿದು) ಕಾಷ್ಠಾಂಗಾರನ ಬುದ್ಧಿ ಇಲ್ಲಿಯ ವರೆಗೆ ಹೋಯಿತೇ ?

ದ್ವಾರಪಾಲಕ— ಕಾಷ್ಠಾಂಗಾರನಿಗೆ ತಮ್ಮನ್ನು ಸಂಹರಿಸಿ ತಾನೇ ರಾಜನಾಗಬೇಕೆಂಬ ಆಶೆಯಾಗಿದೆ. (ಈ ಮಾತನ್ನು ಕೇಳಿದೊಡನೆ ವಿಜಯಾರಾಣಿಯು ಮೂರ್ಛೆ ಹೋಗುವಳು)

ಸತ್ಯಂಧರ— (ಕ್ರೋಧ ಗ್ರಸ್ಥನಾಗಿ ಅರ್ಭಟಿಸಿ) ಅಪಮಾನ ! ಕಾಷ್ಠಾಂಗಾರನ ನೀಚತನ, ಕ್ಷಣಾರ್ಧದಲ್ಲಿಯೇ ಅವನನ್ನು ತುಂಡು ತುಂಡು ಮಾಡಿ ಬಿಡುತ್ತೇನೆ (ಆವೇಶದಲ್ಲಿ ಹಲ್ಲು ಕಡಿದು) ಕಾಷ್ಠಾಂಗಾರ ! ನಿನ್ನ ನೀಚತನದ ಸೇಡನ್ನು ಈಗಲೇ ತೀರಿಸಿಕೊಳ್ಳುವೆ. (ಯುದ್ಧ ಭೂಮಿಯ ಕಡೆಗೆ ಹೋಗಲು ತಿರುಗುತ್ತಿರುವಾಗ ಧರ್ಮದತ್ತ, ಪ್ರಧಾನ ಮಂತ್ರಿ, ಸೇನಾಪತಿ, ಸರದಾರರು ಪ್ರವೇಶಿಸುವರು)

ಪ್ರಧಾನ ಮಂತ್ರಿ— (ಗಂಭೀರ ಮುದ್ರೆಯಿಂದ) ಮಹಾರಾಜರೇ ಕಾಷ್ಠಾಂಗಾರನು ಸೈನ್ಯ ಸಮೇತನಾಗಿ ರಣಭೂಮಿಯನ್ನು ತಲುಪಿದ್ದಾನೆ. ಸೂರ್ಯೋದಯದ ಸಮಯಕ್ಕೆ ಯುದ್ಧದ ಭೇರಿಯನ್ನು ಹೊಡೆಸುವವನಿದ್ದಾನೆ.

ಸತ್ಯಂಧರ— ಮಂತ್ರೀ, ಸೇನಾಪತಿಗಳೇ ಯುದ್ಧ ಭೂಮಿಯ ಕಡೆಗೆಯೇ ನಾವು ಪ್ರಸ್ಥಾನ ಮಾಡುತ್ತಿದ್ದೇವೆ. ಇದ್ದ ಸೇನೆಯೊಂದಿಗೆ

ತಾವು ಯುದ್ಧರಂಗಕ್ಕೆ ಸಾಗಿರಿ. ತೋಳವು ಸಿಂಹವನ್ನು ಎದುರಿಸುವದೇ ?

ಪ್ರಧಾನ ಮಂತ್ರಿ— (ನಮಸ್ಕರಿಸಿ) ಅಪ್ಪಣೆ, ಮಹಾರಾಜರೇ! (ಹೋಗುವರು)

ಸತ್ಯಂಧರ— ಕಾಷ್ಠಾಂಗಾರ ! ಕಾಷ್ಠಾಂಗಾರನೇ ನಿನ್ನ ಸರ್ವನಾಶವಾಯಿತೆಂದು ತಿಳಿ (ರಾಜಾ ಸತ್ಯಂಧರನು ರಣಭೂಮಿಯ ಕಡೆಗೆ ಹೋಗಲು ದ್ಯುಕ್ತನಾಗಿ ನಾಲ್ಕು ಹೆಜ್ಜೆಗಳನ್ನು ಮುಂದಿಡುವಷ್ಟರಲ್ಲಿ ಆಕಾಶವಾಣಿಯಾಗುವದು) ರಾಜಾ ಸತ್ಯಂಧರರೇ ನಿನ್ನ ರಾಣಿಯು ಮೂರ್ಛಿತಳಾಗಿ ಬಿದ್ದಿರುವಳು. ಅದನ್ನು ಕೇಳಿದೊಡನೆ ರಾಜಾ ಸತ್ಯಂಧರನ ಮನದಲ್ಲಿ ವಿಚಾರಗಳ ತುಮುಲ ಯುದ್ಧ ಪ್ರಾರಂಭವಾಗುವದು. ರಣಭೂಮಿಯ ಕಡೆಗೆ ವಾಯು ವೇಗದಿಂದ ಹಾರಿಹೋಗುವದು ಅಥವಾ ಪ್ರಾಣ ಪ್ರಿಯಳಾದ ರಾಣಿಯನ್ನು ಚೇತರಿಸಿ ಸಂತೈಸುವದು ಅದಕ್ಕಾಗಿ ಹಿಂದೆ ಮುಂದೆ ಹೊಯ್ದಾಡುವನು (ಸ್ವಗತ) ಯುದ್ಧವೋ ಅಥವಾ ರಾಣಿಯ ಆರೈಕೆಯೋ (ಸ್ವಲ್ಪ ಸಮಯ ಸ್ತಬ್ಧನಾಗುವನು) (ಸಿಂಹವು ಜಾಗೃತಾವಸ್ಥೆಯಲ್ಲಿರುವಾಗ ಇಲಿಗಳು ಸುತ್ತಲೂ ಆಡುತ್ತಿರುತ್ತವೆ. ಒಂದು ವೇಳೆ ಇಲಿಗಳ ಸ್ವಲ್ಪ ಸ್ಪರ್ಶವಾದೊಡನೆ ಸಿಂಹವು ಅರ್ಭಟಿಸುತ್ತದೆ. ಆ ಅರ್ಭಟಕ್ಕೆ ಅರಣ್ಯದ ಸಮಸ್ತ ಪ್ರಾಣಿಗಳೆಲ್ಲವೂ ಅತ್ತಿಂದಿತ್ತ ಇತ್ತಿಂದತ್ತ ಓಡಲಾರಂಭಿಸುತ್ತವೆ.) (ಧೈರ್ಯ ಧಾರಣಮಾಡಿ) ಈ ಸಮಯದಲ್ಲಿ ರಾಣಿಯನ್ನು ಚೇತರಿಸಿಯೇ ಯುದ್ಧ ಭೂಮಿಗೆ ಹೋಗುವದು ಉಚಿತವೆಂದು ತಿಳಿದು (ವಿಜಯಾರಾಣಿಯನ್ನು ಎಬ್ಬಿಸುತ್ತ) ರಾಣೀ ವಿಜಯಾ ಏಳು ನಮ್ಮ ಕಡೆಗೆ ನೋಡು ನಿನ್ನನ್ನು ಈ ಅವಸ್ಥೆಯಲ್ಲಿ ಬಿಟ್ಟು ನಾವೆಲ್ಲಿಗೆ ಹೋಗಬಲ್ಲೆವು ? ಏಳು ಕಣ್ಣು ತೆರೆ (ರಾಣಿಯ ಮುಖ ಹಾಗು ಕರಗಳ ಮೇಲೆ ಕೈಯಾಡಿಸುತ್ತಾನೆ. ಕೈಯಿಂದ ರಾಣಿಯ ಕಣ್ಣುಗಳನ್ನು ತೆರೆಯಲು ಪ್ರಯತ್ನಿಸುತ್ತಾನೆ) ವಿಜಯಾ ! ಸ್ವಲ್ಪ ಮಾತ್ರವಾದ ವಿಪತ್ತಿಗೆ ಹೆದರುವದರಲ್ಲಿ ಅರ್ಥವಿಲ್ಲ. ಪ್ರತಿಯೊಂದು ಪ್ರಾಣಿಗಳಿಗೆ ವಿಪತ್ತಗಳು ಬಂದೇ ಬರುವವು. ಅವುಗಳನ್ನು ಎದುರಿಸುವದೇ ನಮ್ಮ ಕ್ಷತ್ರಿಯರ ಮೂಲ ಸಿದ್ಧಾಂ

ತವು. (ರಾಣಿಯು ಸ್ವಲ್ಪ ಜಾಗ್ರತಳಾಗುತ್ತಾಳೆ) ರಾಣೀ ದೀಪವು ನಂದಿ ಹೋದ ಮೇಲೆ ಅಂಧಃಕಾರವನ್ನು ಆಮಂತ್ರಿಸುವ ಆವಶ್ಯಕತೆಯೇ ಇಲ್ಲ. ಅದರಂತೆ ಪುಣ್ಯ ಸಮಾಪ್ತಿಯಾದ ಮೇಲೆ ದುಃಖಗಳನ್ನು ಆಮಂತ್ರಿಸುವ ಅಗತ್ಯವೇ ಇಲ್ಲ.

ವಿಜಯಾರಾಣಿ— (ಮಂದ ಸ್ವರದಲ್ಲಿ) ಏನು? ನಮ್ಮ ಪುಣ್ಯವು ತೀರಿ ಹೋಯಿತೇ?

ಸತ್ಯಂಧರ— ಹಾಗೇನಲ್ಲಾ ಈ ಸಮಯದಲ್ಲಿ ನಮ್ಮ ಪಾಪ ಕರ್ಮ ಸ್ವಲ್ಪ ಉದಯವಾಗಿರುವದರಿಂದ ದುಃಖ ಮತ್ತು ಆಪತ್ತುಗಳು ಸಂಭವಿಸುವದು ಅನಿವಾರ್ಯವಾಗಿದೆ. ಅದಕ್ಕಾಗಿ ಶೋಕ ಮಾಡುವ ಕಾರಣವಿಲ್ಲ.

ವಿಜಯಾರಾಣಿ— ಪತಿದೇವರೇ (ಮುಖದ ಕಡೆಗೆ ನೋಡುತ್ತಾಳೆ.)

ಸತ್ಯಂಧರ— ವಿಜಯಾ ಸಂಸಾರವೇನೆಂಬುದನ್ನು ತಿಳಿದುಕೊಳ್ಳುವದರಲ್ಲಿ ಜಾಣ್ಮೆಯಿದೆ. ಎಲೆಗಳ ಮೇಲಿನ ನೀರಿನ ಗುರುಳೆ ಇದ್ದಕ್ಕಿದ್ದಂತೆಯೇ ಸ್ಥಿರವಾಗಿದ್ದರೆ ಆಶ್ಚರ್ಯವು ಆದರೆ ಉತ್ಪನ್ನವಾದ ಕೂಡಲೇ ನಾಶವಾಗುವದರಲ್ಲಿ ಆಶ್ಚರ್ಯವೇನು? ಅದರಂತೆ ಶರೀರ, ಪ್ರಾಯ, ದ್ರವ್ಯ, ಸಂಪತ್ತಗಳು ಸ್ಥಿರವಾಗಿದ್ದರೆ ಆಶ್ಚರ್ಯ. ಜನಿಸಿದವನು ಮರಣ ಹೊಂದುವನು ಅಂದ ಮೇಲೆ ಇದರಲ್ಲಿ ಪರಿವರ್ತನ ಅಥವಾ ನಾಶವಾದರೆ ಆಶ್ಚರ್ಯವೇನು? ಇಂಥ ಪರಿವರ್ತನ ಶೀಲ ಪರ್ಯಾಯಗಳನ್ನು ಧರಿಸಿದ ನಮ್ಮಂಥವರಿಗೆ ಖೇದ ಮಾಡುವದರಲ್ಲಿ ಅರ್ಥವೇನು ರಾಣೀ!

ವಿಜಯಾರಾಣಿ— ಪತಿದೇವರೇ ನೀವಾಡುವ ಮಾತು ನಿಜ. ಈ ಹೊತ್ತು ದಿನಕರನು ಅಸ್ತಮಿಸಿದರೂ ಮರುದಿನ ಉದಯಿಸುವನು. ಚಂದ್ರನು ಅಮಾವಾಸ್ಯೆಯ ದಿನ ಅಂಧಃಕಾರವನ್ನು ನೀಡಿದರೂ ಪೌರ್ಣಿಮೆಯ ದಿನ ಅವನು ಪೂರ್ಣ ರೂಪದಿಂದ ಉದಯನಾಗಿ ಮಾನವನ ಮನಸ್ಸನ್ನು ಪ್ರಫುಲ್ಲಿತಗೊಳಿಸುವನು. ಇದು ಯುದ್ಧದ ಪ್ರಸಂಗವಿದೆ ಮಹಾರಾಜರೇ.

ಸತ್ಯಂಧರ— ಹೌದು ವಿಜಯಾ, ಆದರೆ ಪ್ರಸಂಗವಶಾತ್ ಯಾವದೊಂದು ಕಾರಣದಿಂದ ಒಂದಕ್ಕೊಂದು ಹೊಂದಿಕೊಂಡಿರುವ ಪದಾರ್ಥಗಳು ಒಂದಿಲ್ಲೊಂದು ದಿನ ಬೇರೆಯಾಗುವದು ಸ್ವಾಭಾವಿಕ. ಇಷ್ಟೇ ಅಲ್ಲಾ ವಿಜಯಾ ಶರೀರ ಮತ್ತು ಆತ್ಮನು ಹಾಲು ನೀರಿನಂತೆ ಸಮಾನ ರೀತಿಯಿಂದ ಕೂಡಿದ್ದು ಕಂಡು ಬರುತ್ತಲಿದೆ. ಆದರೂ ಅವು ಮೃತ್ಯು ಸಮಯಕ್ಕೆ ಭಿನ್ನವಾಗುವವು. ಹಂಸಪಕ್ಷಿಯು ಚುಂಚಿನಿಂದ ಹಾಲು ನೀರಗಳಾದರೂ ಭಿನ್ನವಾದದ್ದು ಕಂಡು ಬರುತ್ತದೆ. ಅಂದ ಮೇಲೆ ನಾವು ಹಾಗು ನೀನು ಪ್ರತ್ಯಕ್ಷವಾಗಿ ಬೇರೆ ಬೇರೆ ಇದ್ದದ್ದು ಕಂಡು ಬರುತ್ತದೆ. ಮಹಾರಾಣೀ ಒಂದು ವೇಳೆ ಅಂಥ ಪ್ರಸಂಗ ಬಂದು ನಮ್ಮ ವಿಯೋಗವಾದರೆ ಅದರಲ್ಲಿ ಆಶ್ಚರ್ಯವೇನು ? ಇದಕ್ಕೆ ಆರ್ತ ರೌದ್ರ ಧ್ಯಾನ ಮಾಡಿದರೆ ಮಾತ್ರ ದುಃಖ ದುರ್ಗತಿಗೆ ಕಾರಣವಾಗುವದು. ವಿಜಯಾ ಯಾವ ಯಾವ ಜೀವದ ಪರಿಣಾಮ ಯಾವ ಯಾವ ಪ್ರಕಾರ ಆಗುತ್ತವೆಯೋ ಅದೇ ಪ್ರಕಾರ ಆ ಜೀವದ ಸಂಗಡ ಕರ್ಮ ಪ್ರಕೃತಿಗಳು ನಿಲ್ಲುತ್ತವೆ. ಆದ್ದರಿಂದಲೇ ನಮಗೆ ಧೈರ್ಯರೂಪಿ ಢಾಲವನ್ನು ಧರಿಸಿ ಆಪತ್ತುಗಳ ಸ್ವಾಗತ ಮಾಡಬೇಕಾಗಿದೆ. ಇದೇ ನಮ್ಮ ಕ್ಷಾತ್ರವೃತ್ತಿಯು. ಏನಾಗಬಹುದೆಂದು ಸ್ವಪ್ನದಲ್ಲಿಯೂ ವಿಚಾರ ಮಾಡಬಾರದು. ಆದರೆ ಈ ಸಮಯದಲ್ಲಿ ನಿನ್ನ ಶೋಕಾವಸ್ಥೆಯನ್ನು, ಅಸಾವಧಾನತೆಯನ್ನು ನೋಡಿ ನಮ್ಮ ಅಂತಃಕರಣವು ದುಃಖಿತವಾಗಿದೆ. ಮನಸ್ಸಿನ ಹೊಯ್ದಾಟವಾಗುತ್ತಲಿದೆ. ಹೆಜ್ಜೆಗಳು ಎತ್ತಲಾರದಾಗಿವೆ. ಹಾಗೆ ನೋಡಬೇಕಾದರೆ ಇಂಥ ಸಮಯಹಲ್ಲಿ ಸ್ವಸ್ಥವಾಗಿ ಕುಳಿತುಕೊಳ್ಳುವದು ಉಚಿತವೇ ? ನಿನ್ನಲ್ಲಿ ವಿಚಾರಶಕ್ತಿ, ಸಾಹಸವಿದೆ. ಸಮಯಾನುಸಾರವಾಗಿ ವಿವೇಕ ಬುದ್ಧಿಯಿಂದ ವರ್ತನೆ ಮಾಡುವ ಪಾತ್ರತೆಯೂ ನಿನ್ನಲ್ಲಿರುವದು.

ವಿಜಯಾರಾಣಿ— (ಎದ್ದು ಕುಳಿತುಕೊಳ್ಳುತ್ತಾಳೆ.) ಪ್ರಾಣನಾಥ ಎಲ್ಲವೂ ಒಳಿ

ತಾಗಿದ್ದರೂ ಮೃತ್ಯುವಿನ ಜೊತೆಗೆ ಯುದ್ಧವಿದೆ. ಇದೇನು ?

ಸತ್ಯಂಧರ— ಅಹುದು; ಮೃತ್ಯುವಿನ ಸಂಗಡವೇ ಯುದ್ಧವಿದೆ. ಹೊಸ ಮಾತಲ್ಲ.

ವಿಜಯಾರಾಣಿ— (ಆಶ್ಚರ್ಯದಿಂದ) ಏನು? ಇದು ಪೂರ್ವದಲ್ಲಿಯೂ ಇತ್ತೇ?

ಸತ್ಯಂಧರ— ವಿಜಯಾ ಈ ಸಂಸಾರದ ಸ್ಥಿತಿಯೇ ಹೀಗೆ. ಆದಿಯೂ ಇಲ್ಲಾ ಅಂತ್ಯವೂ ಇಲ್ಲಾ. ಪ್ರತ್ಯೇಕ ಜೀವನು ಮಾಡಿದ ಕರ್ಮಗಳ ಶುಭಾಶುಭ ಫಲವೇ ಶತ್ರು ಮಿತ್ರರಾಗುತ್ತಾರೆ. ಶುಭ ಕರ್ಮೋದಯದಿಂದ ಪ್ರಾಪ್ತವಾಗುವದು— ಸಾತಾ ಅಂದರೆ ಸುಖ, ನಮ್ಮ ಮಿತ್ರ. ಅಶುಭ ಕರ್ಮೋದಯದಿಂದ ಪ್ರಾಪ್ತವಾಗುವದು ಅಸಾತಾ ಅಂದರೆ ದುಃಖ, ನಮ್ಮ ಶತ್ರು. ಸ್ವಾಭಾವಿಕವಾಗಿ ಬಂಧು ಜನರು, ಶತ್ರುಗಳು, ಮಿತ್ರರು, ಪರಿವಾರಾದಿಗಳನ್ನು ಮನ್ನಿಸುವದೇ (ತಿಳಿಯುವದೇ) ಮಾನವನ ತಪ್ಪು. ಕೇವಲ ಕಲ್ಪನೆಯೇ ಇದೆ. ಆದ್ದರಿಂದ ಅಧೀರಳಾಗದೆ ಧೈರ್ಯ ಧಾರಣ ಮಾಡು ವಿಜಯಾ !

ವಿಜಯಾರಾಣಿ— (ದುಃಖಿತಳಾಗಿ) ಧೈರ್ಯವನ್ನೆಂತು ಧಾರಣ ಮಾಡಲಿ ? ಎಲ್ಲಿಯವರೆಗೆ ಸಹಿಸಲಿ ? ಹೇಗೆ ಆಚರಿಸಲಿ ? ಯಾರ ಜೊತೆಗೆ ಮಾತನಾಡಲಿ ? ಯಾರ ಮುಖದ ಕಡೆಗೆ ನೋಡಲಿ ? ಪತಿದೇವ ! (ಬಿಕ್ಕಿ ಬಿಕ್ಕಿ ಅಳಲಾರಂಭಿಸುತ್ತಾಳೆ.)

ಸತ್ಯಂಧರ—(ಸ್ವಗತ) ಹುರಿದ ಬೀಜವನ್ನು ಭೂಮಿಯಲ್ಲಿ ಬಿತ್ತಿದರೆ ಅದರಿಂದ ಮೊಳಕೆ ಒಡೆಯಲಾರದು. ಅದು ವ್ಯರ್ಥವಾಗುವಂತೆ ರಾಣಿಗೆ ಎಷ್ಟು ತಿಳಿಸಿ ಹೇಳಿದರೂ ಕೂಡ ವ್ಯರ್ಥವೇ ! ಇನ್ನು ಹೆಚ್ಚು ಹೇಳಲು ಸಮಯವಿಲ್ಲ. (ಪ್ರಕಟ) ರಾಣಿ ವಿಜಯಾ ಚಿಂತಿಸಬೇಡ. ಇದು ಚಿಂತಿಸುವ ಸಮಯವಲ್ಲ. ನಿನ್ನ ಮನಶಾಂತಿಗಾಗಿ, ಆರ್ತ ಧ್ಯಾನವನ್ನು ದೂರ ಮಾಡುವದಕ್ಕಾಗಿ ನೀನು ಪುಷ್ಪಕ ವಿಮಾನದಲ್ಲಿ ಕುಳಿತು ಆಕಾಶದಲ್ಲಿ ಸಂಚರಿಸಿ ಬಾ ಪ್ರಿಯೆ ! ಅಂದರೆ ಈ ವಿಚಾರಗಳು ಲೋಪವಾಗಿ

ಮನಸ್ಸಿಗೆ ಶಾಂತಿ ದೊರೆಯುವದು. ಸೇನಾಪತಿ. (ಸೇನಾಪತಿಯು ಬಂದು ನಮಸ್ಕರಿಸುತ್ತಾನೆ.)

ಸೇನಾಪತಿ— ಅಪ್ಪಣೆಯಾಗಲಿ.

ಸತ್ಯಂಧರ— ವಿಜಯಾರಾಣಿಯು ಪುಷ್ಪಕ ವಿಮಾನದಲ್ಲಿ ಕುಳಿತು ವಿಹಾರ ಮಾಡುವವಳಿದ್ದಾಳೆ.

ಸೇನಾಪತಿ— ಅಪ್ಪಣೆ (ಕೈ ಮುಗಿದು) ಪುಷ್ಪಕ ವಿಮಾನವು ತಯಾರಾಗಿದೆ.

ಸತ್ಯಂಧರ— ನಡೆ ವಿಜಯಾರಾಣೀ ಪುಷ್ಪಕ ವಿಮಾನದಲ್ಲಿ ಕುಳಿತು ವಿಹಾರ ಮಾಡಿ ಬಾ. (ಎಡಗೈಯಿಂದ ರಾಣಿಯ ಕೈ ಹಿಡಿದು ಬಲಗೈಯನ್ನು ಹೆಗಲಮೇಲಿಟ್ಟು) ನಡೆ ಪ್ರಿಯೇ.

ವಿಜಯಾರಾಣಿ— (ಅತ್ಯಂತ ದುಃಖದಿಂದ ಮೇಲಕ್ಕೆ ಎದ್ದು) ಪ್ರಾಣನಾಥ (ಇಬ್ಬರೂ ಹೋಗುತ್ತಾರೆ.)

ಸತ್ಯಂಧರ— (ರಾಣಿಯನ್ನು ಪುಷ್ಪಕ ವಿಮಾನದಲ್ಲಿ ಕುಳ್ಳಿರಿಸಿ ವಿಮಾನವು ಮೇಲಕ್ಕೆ ಹೋದ ತಕ್ಷಣವೇ ತಿರುಗಿ ಬಂದು ಒರೆಯಿಂದ ಖಡ್ಗವನ್ನು ಹಿರಿದು ಕೋಪಾವಿಷ್ಟನಾಗಿ) ಎಲೈ ಕಾಷ್ಠಾಂಗಾರ ! ನಿನ್ನ ರಕ್ತವನ್ನು ಹೀರುವ ಸಲುವಾಗಿ ಯುದ್ಧ ಭೂಮಿಯ ಕಡೆಗೆ ನಾನು ಬರುತ್ತಿರುವೆನು. ನೀಚ, ಅಧಮ, ಪಾಪಿ, ಕಾಷ್ಠಾಂಗಾರನೇ ಕ್ಷಣ ಮಾತ್ರದಲ್ಲಿ ಈ ಭೂಮಿಯಿಂದ ನಿನ್ನನ್ನು ಮೃತ್ಯುವಿಗೆ ಭೆಟ್ಟಿ ಕೊಡಲು ಕಳಿಸುತ್ತೇನೆ. ಕಾಷ್ಠಾಂಗಾರ! (ಅತ್ಯಂತ ಆವೇಶದಿಂದ ಮುಂದುವರೆಯುತ್ತಿರುವಾಗ ಹಿಂದಿನಿಂದ ರಾಜಾ ಸತ್ಯಂಧರನಿಗೆ ಜಯುವಾಗಲಿ, ಜಯುವಾಗಲಿ ಎಂಬ ಜಯಘೋಷದೊಡನೆ ಕಹಳೆ, ಭೇರಿ, ತಮ್ಮಟೆ ಮುಂತಾದ ವಾದ್ಯಗಳ ನಿನಾದವೂ ಕೇಳಿಸುತ್ತದೆ. ಸೈನಿಕರೇ ಮಹಾರಾಜರ ಸವಾರಿಯು ರಣಭೂಮಿಯತ್ತ ಸಾಗುತ್ತಿದೆ. ನಡೆಯಿರಿ ನಡೆಯಿರಿ, ಓಡಿರಿ, ಓಡಿರಿ. ಕುದುರೆಗಳ ಕಾಲುಗಳ ಸಪ್ಪಳ, ಸೈನಿಕರ ಹೆಜ್ಜೆಯ ಸಪ್ಪಳ ಬರುತ್ತಿದೆ. ಜಯುಜಯುಕಾರದೊಂದಿಗೆ ಯುದ್ಧದ ವಾತಾವರಣವು ಎಲ್ಲೆಡೆಗೆ ಹಬ್ಬಿದೆ.)

(ತೆರೆ ಬೀಳುವದು)

(ಸೈನಿಕರು ದೂರ ಹೋದಂತೆ ಸಪ್ಪಳವು ಕಡಿಮೆಯಾಗುವದು)

ಎರಡನೆಯ ದೃಶ್ಯ

(ಪ್ರಜೆಗಳಲ್ಲಿ ಕೋಲಾಹಲ, ವಿಚಾರ ತರಂಗಗಳು ಏಳುತ್ತಿವೆ. ಸ್ತ್ರೀಯರು, ಪುರುಷರು, ಬಾಲಕರು, ಧನಿಕರು, ದರಿದ್ರರು, ವಿದ್ವಾಂಸರು, ಸರದಾರರು ಎಲ್ಲ ಜಾತಿಯ ಜನರು ಬಂದು ತಮ್ಮ ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸುವರು.)

ಮೊದಲನೆಯ ನಾಗರಿಕ— (ಪ್ರವೇಶಿಸಿ) ಕಾಷ್ಠಾಗಾರನ ನೀತಿಯು ಜಡಲಾಗಿ ಇಂತಹ ಸಮಯ ಬಂದೊದಗಿತು. [ಹೋಗುವನು.]

ಎರಡನೆಯ ನಾಗರಿಕ— [ಪ್ರವೇಶಿಸಿ ಆಶ್ಚರ್ಯದಿಂದ] ರಾಜಾ ಸತ್ಯಂಧರನು ಸ್ವತಃ ಯುದ್ಧಕ್ಕೆ ಹೋಗಿದ್ದಾನೆ. ಇದೆಂಥ ವಿಚಿತ್ರ ಘಟನೆ? (ಹೋಗುವನು.)

ಸುಶಿಕ್ಷಿತ ಮೂರನೆಯ ನಾಗರಿಕ— [ಪ್ರವೇಶಿಸಿ] ಸಜ್ಜನರು ತಮ್ಮ ಮೇಲೆ ಮಾಡಿದ ಉಪಕಾರವನ್ನು ಎಂದಿಗೂ ಮರೆಯುವದಿಲ್ಲ. ಆದರೆ ದುರ್ಜನರು ತಮ್ಮ ದುರ್ಗುಣವನ್ನು ಎಂದಿಗೂ ಬಿಡುವದಿಲ್ಲ. [ಹೋಗುವನು.]

(ಜಮುನಾ ಯಮುನಾ ಪ್ರವೇಶಿಸುತ್ತಾರೆ.)

ಜಮುನಾ— ಯಮುನಾ, ಇದ್ಯಾನವ್ವಾ ಹೊಸ ಹೊಸ ಸುದ್ದಿ ಕೇಳಬೇಕಾಗಿತೆವ್ವಾ.

ಯಮುನಾ— ಹೌದವ್ವಾ ಜಮುನಾ, ಪರಾತನಾ ನಾನಾ ಅನ್ನವರಿಗಿ ಹುಚ್ಚ ಹಿಡಿಸತತಿ.

ಜಮುನಾ— ಯಮುನಕ್ಕಾ ರಾಜಾಂದಾದರೂನೂ ಹಿಂಗ ಆಗೇತಿ ನೋಡವ್ವಾ. ರಾಣಿ ಪಿರೂತ್ಯಾಗ ಗುಂಗ ಆಗಿ ಬಿಟ್ಟಾ ಹಿಂತಾ ಎಳೆ ಬತ್ತವ್ವಾ. ಹೆಂಗಸರ ಮ್ಯಾಲ ಹೆಚ್ಚ ಪ್ರೀತಿ ಮಾಡುವವರದ ಎಂದೂ ಛಲು ಆಗಿಲ್ಲ.

ಯಮುನಾ— ಗಣಸರ ಒಮ್ಮಿ ಹೆಂಗಸರ ವ್ಯಸನದಾಗ ಹತ್ತಿರಂದರ ಅದನ ಪೂರಾ ಮಾಡುತರಾಗ ತಮ್ಮ ಆಯುಸಾ, ಮನಿ, ಮಾರ ಎಲ್ಲಾ ಹಾಳ ಮಾಡಿ ಹತ್ತಿ ಬತ್ತಿ ಕುಂದತಾರ ನೋಡವ್ವಾ.

ಜಮುನಾ— ಗಂಡಸರಿಗಿ ವ್ಯಸನ ಹಚ್ಚಲಾಕ ಹೆಂಗಸರ ಕಾರಣ

ನೋಡವ್ವಾ. ಗಂಡಸರ ಬಾಳ್ವಿ ಹಾಳ ಮಾಡಿ ಇಡತಾರ.

ಯಮುನಾ— ಸತ್ಯಂಧರ ರಾಜಾ ಬ್ಹಾಳ ವಿಚಾರವಂತ ಇದ್ದವ್ವಾ ಆದರ ಮಾಡುದ್ಯಾನ.

ಜಮುನಾ— ರಾಣಿ ಪಿರೀಮದಾಗ ಬಿದ್ದ. ಆ ದರಿದ್ರಗ ರಾಜ್ಯ ನಡಸಾಕ ಕೊಟ್ಟಾ ಎಲ್ಲಾ ಗೋಳಾತ ನೋಡವ್ವಾ.

ಯಮುನಾ— ಜಮುನಾಬಾಯಿ ಕಾಗಿ ಕೈಯಾಗ ಕಾರಭಾರ ಕೊಟ್ಟರ ದರಬಾರ ಎಲ್ಲಾ ಘಾಣಿ ಮಾಡಿತತ ಹಾಂಗ ಮಾಡಿಟ್ಟವ, ಯಾನ ಕೇಳಕಿ ಕತಿ.

ಜಮುನಾ— ಸಾಕ ನಡಿವ್ವಾ ಯಾರರೆ ಕೇಳ್ಯಾರು ಊರ ಉಸಾಬರಿ ಮಾಡಿ ಉಣದ ಹ್ವಾದರತ, ಹಾಂಗ ಆದೀತು ನಮ್ಮ ಗತಿ. ನಡಿ ಹೋಗುನ ಗಡಾನ.

ಯಮುನಾ— ನಡಿವ್ವಾ ನಡಿ ಇದ ಮಾತಾಡುವ ವೇಳೆಯಲ್ಲ ನಡಿ ಸರಾನ (ಇಬ್ಬರೂ ಹೋಗುವರು.)

ನಾಲ್ಕನೆಯ ನಾಗರಿಕ— (ಪ್ರವೇಶಿಸಿ) ಒಂದು ಕ್ಷಣದ ಹಿಂದೆ ಎಲ್ಲ ಸಾಮ್ರಾಜ್ಯವು ನಂದನವನದಲ್ಲಿಯ ಪುಷ್ಪಗಳಂತೆ ನಗುತ್ತಿತ್ತು. ಬಿರುಗಾಳಿಯ ಹೊಡೆತಕ್ಕೆ ಸಿಲುಕಿ ನಾಶವಾಗುವ ಪುಷ್ಪಗಳಂತೆ ಮಾನವರು ಅನ್ಯಾಯರೂಪಿ ಹಾಹಾಕಾರವೆಂಬ ಗಾಳಿಗೆ ಸಿಲುಕಿ ದಿಕ್ಕುಗಾಣದೆ ಹೆದರಿ ಓಡಾಡುತ್ತಲಿದ್ದಾರೆ. ಇನು ಏನಾಗಬಹುದು ? (ಹೋಗುವನು.)

ಐದನೆಯ ನಾಗರಿಕ— (ಪ್ರವೇಶಿಸಿ) ಇನ್ನು ಪ್ರಜೆಗಳ ಗತಿ ಏನು ? ಘನ ಘೋರ ಯುದ್ಧವು ಕಾಳ್ಗಿಚ್ಚಿನಂತೆ ಹೊತ್ತಿಕೊಂಡಿದೆ. ಅದರಲ್ಲಿ ಯಾರ ಗೆಲವೋ ಯಾರ ಸೋಲೋ ಅದಾರು ಬಲ್ಲರು?

ಆರನೆಯ ನಾಗರಿಕ— (ಪ್ರವೇಶಿಸಿ) ರಾಜಾ ಸತ್ಯಂಧರನು ಮತಿಗೆಟ್ಟು ಸಿಂಹನಂತೆ ಯುದ್ಧಭೂಮಿಗೆ ಓಡಿ ಹೋಗಿದ್ದಾನೆ. ಅಲ್ಲಿ ರಾಶಿಗಟ್ಟಲೇ ಶವಗಳು ಹುಲ್ಲಿನ ಸೂಡಿನಂತೆ ಬೀಳುತ್ತಿರಬಹುದು.

ಐದನೆಯ ನಾಗರಿಕ— ಅನ್ಯಾಯ, ಅನ್ಯಾಯ ಪಾಪದ ಬಲ ಹೆಚ್ಚಾ

ಯಿತು. ರಾಜಾ ಸತ್ಯಂಧರನು ತನ್ನ ಕೈಯಿಂದಲೇ ತನ್ನ ಪ್ರಜೆಗಳನ್ನು, ಸೈನಿಕರನ್ನು ಹತ್ಯೆ ಮಾಡುತ್ತಿದ್ದಾನೆ.

ಆರನೆಯ ನಾಗರಿಕ— ಅತಿಶಯ ಪಾಪವಾದ ಮೇಲೆ ದೇವ ದೇವತೆಗಳಾದರೂ ಸಮೀಪಕ್ಕೆ ಬರುವದಿಲ್ಲ. ಅದಕ್ಕೋಸ್ಕರ ಪಾಪವು ಆಗದಂತೆ ಪೂರ್ವದಲ್ಲಿಯೇ ಜಾಗೃತರಾಗಿರಬೇಕು. (ಇಬ್ಬರೂ ಹೋಗುವರು.)

ಏಳನೆಯ ನಾಗರಿಕ— (ಪ್ರವೇಶಿಸಿ) ಆಶಾರೂಪಿ ಕಂದಕವು ಅತಿಶಯ ಆಳವಾಗಿದೆ. ಅದು ಎಂದಿಗೂ ತುಂಬಲಾರದು. ಅದೇ ರೀತಿಯಾಗಿ ಪಂಚೇಂದ್ರಿಯ ವಾಸನಾರೂಪಿ ಮೋಹಪಾಶವು ಬೆಳೆಯುತ್ತಲೇ ಹೋಗುತ್ತದೆ. ಎಂದಿಗೂ ಶಾಂತವಾಗಲಾರದು.

ಎಂಟನೆಯ ನಾಗರಿಕ— (ಪ್ರವೇಶಿಸಿ) ಅತಿಶಯವಾದ ಭಸ್ಮಕರೋಗವು ಒಂದು ವೇಳೆ ಹೆಚ್ಚು ಅಂದರೆ ತೃಪ್ತಿ ಹೊಂದಬಹುದು. ಆದರೆ ವಿಷಯ ವಾಸನೆಗಳು ಎಂದಿಗೂ ತೃಪ್ತಿ ಹೊಂದಲಾರವು.

ಏಳನೆಯ ನಾಗರಿಕ— ಇದಕ್ಕಾಗಿಯೇ ಈ ಭೂತಳದ ಮೇಲೆ ಇಂತಹ ಅನಾಹುತಗಳಾಗುತ್ತಿವೆ. (ಇಬ್ಬರೂ ಹೋಗುವರು)

(ಇಬ್ಬರು ಸ್ತ್ರೀಯರು ಪ್ರವೇಶಿಸಿ ಕಿವಿಯಲ್ಲಿ ಮಾತನಾಡುವರು)

ಮೊದಲನೆಯುವಳು— (ಮಂದ ಸ್ವರದಲ್ಲಿ ಎಲ್ಲರಿಗೂ ಕೇಳಿಸದಂತೆ) ಕಾಯ ಗಬಾಯಿ ರಾಜಾಲಾ ತರಿ ಸಮಝಾಯಲಾ ಪಾಹಿಜೆ ಹೋತ ಶಾಣಾ ಶಾಣಾ ಮ್ಹಣೂನ ಸ್ವತಾಲಾ ಸಮಝುತ ಹೋತಾ.

ಎರಡನೆಯುವಳು— ಶಾಣಾ ಅಸೂನ ಕಾಯ ಕರಾಯಚ ? ಜವಾಲಗಿನ ಹೋವೂನ ರಾಜ ಮಹಲಾತ ಮ್ಯೆನಾ ಆಲಿ ತವಾಚ ತಿಚಾ ಪಂದಾತ ಫಸಲಾಗಬಾಯಿ ಜೋ ಲಯ ಶಾಣಾ ತ್ಯಾಚಾ ಚೈಲ ರಿಕಾಮಾ.

ಮೊದಲನೆಯುವಳು— ಅಮ್ಹಿ ನಹಿ ಬಾಯಿ ಅಸ ಕಧಿಕೇಲ. ಕಾಮಾಚಾ ವೇಳೆ ತಿವಡಚ (ಜರಾ ಲಾಜೂನ) ತರಿ ಪಣ ಆಮಚ ಮಾಲಕ ಲಯ ಹುಶಾರ.

ಎರಡನೆಯುವಳು— ಅಮುಚ ಕುಶಲ ಖಿರಿತ ಖರಾಟ ಕವಡಿಚ ಸುದ್ಧಾ ಕಿಮುತ ನಹಿ ಆಮುಚಾ ಜವಳ.

ಮೊದಲನೆಯುವಳು— ಕಾಯು ಬಿ ಕರಾಯುಚ ಅಸಲ ತರಿ ವಿಚಾರ ಕರೂನ ಕರಾವ.

ಎರಡನೆಯುವಳು— ಬಘು ರಾಜಾ ರಾಣಿಚಾ ಘಂದಾತ ಘಸಲಾ ಆಣಿ ರಾಜ್ಯ ಓಲಾ ಅಸಚಕಿ ಸಗಳ ಜಗವ್ಹುಣಾಯುಚ.

ಮೊದಲನೆಯುವಳು— ಬಾಯಿ ರಾಜ್ಯದಿಲಾ ತವಾ ಲಯು ಚಾಂಗಲ್ಯಾ ಚಾಂಗಲ್ಯಾ ಮಾಣಸಾನಿ, ಪ್ರಧಾನ ಮಂತ್ರ್ಯಾನಿ ಲಯು ಸಮು ಜಾವುನ ಸಾಂಗಿಟಲ ಅಸ ಸಮುಸ್ತೈಕಿ ಅಶಾ ಮಾಣಸಾಲಾ ರಾಜ್ಯ ಚಾಲವಾಯುಲಾ ದೇವು ನಕಾ. ಧೋಕಾ ಹೋಯಿಲ ಸಿಂಹಾಚ ಶೂರಪಣಾ ಕೋಲ್ಯಾ ಕುತ್ರ್ಯಾಲಾ ಏತನಾಹಿ. ಚಾಂಗಲಾನಾಯಿ ಚಾಂಗಲನಾಹಿ ಅಸ ಲಯು ಸಾಂಗಿಟಲ ಪರ ಐಕತ್ಯೈ ಕೋಣ ?

ಎರಡನೆಯುವಳು— ಸತ್ತಾ ಪುಡ ಶಾಣಪಣಾ ಚಾಲತ ನಹಿ ಮನತಾತ ತೇಚ ಕರತ್ಯಾತಗ ಬಾಯಿ. ಚಾಂಗಲ ವಾಯಿಟ, ನ್ಯಾಯ ಅನ್ಯಾಯ, ಖರ ಖೋಟ ಕಾಯು ಬಿ ಬಘತ ನಹಿತ ಮಾಗನ ಪಶ್ಚಾತ್ತಾಪ ಕರುನ ಶೇವಟಾಲಾ ಸ್ವತಾಚಾ ಘಾತ ಅಪಲ್ಯಾ ಘರಾತ ಘಾತ, ಸಮಾಜಾಚ ಘಾತ ಆಣಿ ದೇಶಚಾಬಿ ಘಾತ ಕರತಾತ.

ಮೊದಲನೆಯುವಳು— ರಾಜಾಚ ಜವಾ ಅಸ ಐಕಲ ತವಾ ಪಾಸುನ ಕಾಯು ಬರಚ ವಾಟತ ನಾಹಿ ಕಸ ಕಸಚ ಹ್ವಾಯುಲಾಗಲಯು ಬಾಯಿ

ಎರಡನೆಯುವಳು— ಆಣಿ ಯಾ ವೇಳಿಲಾ ರಾಣಿಲಾ ಮುಲ ಹೋಣಾರ ಹಾಯುವ್ಹುಣ. ಕಾಯು ಬಾಯಿ ರಾಣಿ ಭಾತಿ ಠೂಕುನ ಧಾಯು ಧಾಯು ರಡತ ಅಸಲ ಬಿಚಾರಿ.

ಮೊದಲನೆಯುವಳು— ಹೋಯುಬಾಯಿ ರಾಣಿಚ ಕಾಯು ಹಾಲ ಹೋತ ಅಸಲ. ಬಾಯುಕಾಚ ದುಃಖ ಬಾಯುಕಾನಾಚ ಮಾಹಿತ.

ಚಲ ಕೋಣ ತರಿ ಏತೀಲ ಆಣಿ ಕಾಯತರಿ ಪ್ಲುಣಾತೀಲ.
(ಇಬ್ಬರೂ ಹೋಗುವರು)

ಒಂಬತ್ತನೆಯ ನಾಗರಿಕ— (ಪ್ರವೇಶಿಸಿ) ನಿರಪರಾಧಿಯಾದ ಸತ್ಯಂಧರ ರಾಜನನ್ನು ಕೊಲ್ಲುವ ಕೃಷ್ಣ ಕಾರಸ್ಥಾನವನ್ನು ಆ ಕಾಷ್ಠಾಂಗಾರನು ಮಾಡಬಾರದಾಗಿತ್ತು. ಏಕೆಂದರೆ ತನ್ನ ಮೇಲೆ ಪರೋಪಕಾರ ಮಾಡಿದಂಥ, ಅನನ್ಯ ಉಪಕಾರ ಮಾಡಿದಂಥ ರಾಜನನ್ನು ನೀಚತನದಿಂದ ಪ್ರಾಣ ಘಾತ ಮಾಡುವ ಕಾರ್ಯವನ್ನು ಮಾಡಲು ಆತನಿಗೆ ನಾಚಿಕೆಯಾಗಬೇಕಿತ್ತು.
(ಹೋಗುವನು)

ಹತ್ತನೆಯ ನಾಗರಿಕ— (ಪ್ರವೇಶಿಸಿ) ಅನ್ಯಾಯ, ದುಷ್ಟ ಪುರುಷರ ಮೇಲೆ ವಿಶ್ವಾಸ ಬಿಟ್ಟು ಜೀವನ ಕಳೆಯುವದಕ್ಕಿಂತ ಸತ್ತುಹೋಗುವದೇ ಲೇಸು. ಏಕೆಂದರೆ ದರಿದ್ರ, ವಿಚಾರಹೀನ, ಮೂರ್ಖ ಮನುಷ್ಯನಿಗೆ ರಾಜ್ಯ ಕೊಡುವದೆಂದರೆ ಮಂಗನ ಕೈಯಲ್ಲಿ ದಿವಟಿಗೆಯನ್ನು ಕೊಟ್ಟಂತೆ. (ಹೋಗುವನು)

ಸದ್ಗೃಹಸ್ಥ— (ಪ್ರವೇಶಿಸಿ) ಗತಿಸಿ ಹೋದ ಘಟನೆಯ ವಿಚಾರವನ್ನು ಬಿಟ್ಟು ಮುಂದಿನ ವಿಚಾರವನ್ನು ಮಾಡಿ ಕಾರ್ಯ ಆರಂಭಿಸುವದೇ ಸುಖಕರವು.

ಶೇಠ— (ಪ್ರವೇಶಿಸಿ) ರಾಣಿಯ ಮೇಲೆ ರಾಜನ ಪ್ರೇಮವು ಅದ್ವಿತೀಯ. ಈ ಜಗತ್ತಿನಲ್ಲಿ ಇಂಥ ಸಂಸಾರಿಕರು ಮತ್ತಾರೂ ಇರಲಿಕ್ಕಿಲ್ಲವೇ ? ಏನೋ ತಮ್ಮ ತಮ್ಮ ಪತಿ ಪತ್ನಿಯರ ಮೇಲೆ ಪ್ರೇಮವಿಲ್ಲವೇ ? ಕಲ್ಪನಾತೀತ ಗಾಢ ಪ್ರೇಮವಿರುತ್ತದೆ. ಅವರೇನು ತಮ್ಮ ಸಂಸಾರವನ್ನು ನಾಶಮಾಡಿಕೊಳ್ಳುವರೇ ? ಈಗ ನೋಡಿರಿ ನಮ್ಮ ಪ್ರೇಮವು ನಮ್ಮ ಹೆಂಡತಿಯ ಮೇಲೆ ಇಲ್ಲವೆ ? ಓಹೋ ಇನ್ನೇನು ಹೇಳಲಿ ಕಲ್ಪನಾತೀತ ಪ್ರೇಮವಿದೆ. ಆದರೆ ಹಾಗೆ ಇಲ್ಲ ಸಂಸಾರದ ಗಾಡಿಯನ್ನು ಸರಿಯಾಗಿ ಸಾಗಿಸಿಕೊಂಡು ಇದ್ದೇವೆ. ಪ್ರೇಮವು ಬಡವ, ಶ್ರೀಮಂತ, ರಾಜಾ, ರಾಣಾ, ವಿದ್ವಾನ್, ಬಲವಾನ ಎಲ್ಲರಲ್ಲಿಯೂ ಅವ

ರವರ ದೃಷ್ಟಿಯಿಂದ ಸಮಾನವಾಗಿರುತ್ತದೆ. ನಾವು ನಮ್ಮ ಕಾರ್ಯಭಾರ ಮತ್ತು ವಿಶ್ವಾಸವನ್ನು ನಮ್ಮ ನೌಕರ ಚಾಕರರ, ಗುಮಾಸ್ತರ, ಆಪ್ತ ಇಷ್ಟ ಸಂಬಂಧಕರ, ನೆರೆಹೊರೆಯವರ ಮತ್ತು ನಮ್ಮ ಮಕ್ಕಳ ಮೇಲೆ ಕೂಡ ಕೊಟ್ಟಿರುವದಿಲ್ಲ. ಇದನ್ನು ನಾವು ಸ್ಪಷ್ಟವಾಗಿ ಹೇಳುತ್ತೇವೆ. ಅಂತೆಯೇ ನಾವು ಹೀಗೆ ಇದ್ದೇವೆ– (ಇಬ್ಬರೂ ಹೋಗುವರು)

(ಗಂಡ ಹೆಂಡತಿ ಪ್ರವೇಶಿಸುವರು)

ಪತಿ— (ಪ್ರವೇಶಿಸಿ) ದೇಖ ತುಝೆ ಕಹ ರಹಾ ಥಾ ನಹಿ ಕಿ ಜಹಾ ಅತಿ ಹೋತಾ ಹೈ ವಹಾ ಮಟ್ಟಿ ಹೋತಿ ಹೈ ! ಪರ ತುಝೆ ಆತಾ ಥಾ ಗುಸ್ಸಾ ! ತೂನೆ ಹಮಾರೆ ಉಪರ ಪ್ರೇಮ ಕಿ ರಝಾಯಿ ಓಢನೆ ಕೀ ಕೋಶಿಸ ಕೀ ಲೇಕಿನ ಹಮನೆ ತುಝೆ ದಾದ ನಹಿ ದಿಯಾ ! ಬಾರ ಬಾರ ಕಹತಾ ಆಯಾ ಕಿ ಜೋ ಕುಛ ಕರನಾ ಹೈ ಸೋ ಸೋಚಕೆ ಕರನಾ ! ಔರ ತೂನೆ ಇಸ ಬಾತಕೋ ಮಾನಲೀ !. ತಭೀ ತೋ ಅಚ್ಛಾ ರಹಾ ! ಹಮಾರೆ ಜೀವನಕಾ ಗಾಡಾ ಅಚ್ಛಾ ಚಲ ರಹಾ ಹೈ ! ನಹಿ ತೋ ದೇಖ ಆಜಕೀ ಪರಿಸ್ಥಿತಿ ! ಸತ್ಯಂಧರ ರಾಜಾ ಕೆ ಉಪರ ಕೈಸಾ ಸಂಕಟ ಆ ಪಡಾ ಹೈ !

ಪತ್ನಿ— ಅಜಿ ಇಸ ಸಂಸಾರ ಮೆ ಕ್ಯಾ ಹೈ! ಸಂಸಾರ ಸ್ವಪ್ನ ಕೆ ಸಮಾನ ಹೈ ! ದೇಖೋ ಜಿಂದಾ ರಹನೆ ತಕ ಅಚ್ಛಾ ದೀಖತಾ ಹೈ ! ಇತನಾಹಿ !

ಪತಿ— ಹಮ ಕಹತೆ ಥೆ ! ವಹ ತುಝು ಜಚ ತಾ ನಹಿ ಥಾ ! ಕಲಕಾ ಕೌನ ದೇಖಾ ಹೈ ! ಕಲಕಾ ಕೌನ ದೇಖಾ ಹೈ ! ಐಸೆ ಕಹ ರಹಿ ಥಿ ! ತೂ ಫಿರ ಕಹದೇ ಕೀ ರಾಜಾಕಾ ಐಸಾ ಕ್ಯೂಂ ಹುವಾ ! ಔರ ಹಮ ಭಿ ವೈಸೆ ಕರತೆ ಥೆ ಹಮಾರಿ ಭೀ ಕ್ಯಾ ದಶಾ ಹೋ ಜಾತಿ ಥಿ ?

ಪತ್ನಿ— ತುಮ ಕಹತೇ ಥೆ ವಹೀ ಸಹೀ ದೋನೊಂಕಿ ವಿಚಾರಸೆ ಸಂಸಾರ ಅಚ್ಛಾ ಚಲತಾ ಹೈ !

ಪತಿ— ಅಬ ಆಗೆ ಅಧಿಕ ಸಾವಧಾನ ಹೋ ಜಾ ! ಇಸಕೆ ಆಗೆ ಇನಸೆ ಭಿ ಅಚ್ಛಾ ಚಲನೇಕಾ ಹೈ ಹ ! ಜೈಸ ಕರೂ ನಹಿ.

ಪತ್ನಿ— ಮುರ್ಝು ಮಂಜೂರ ಹೈ (ಇಬ್ಬರೂ ಹೋಗುತ್ತಾರೆ)

ಕುರುಬ— (ಪ್ರವೇಶಿಸಿ) ಕುರಿ ಮೇಸುವ ಸಲುವಾಗಿ ನಮ್ಮ ರಾಜಾ ಸತ್ಯಂಧರ ಯಾವಾಗ ಬೇಕಾದಾಗ ಎಷ್ಟ ಬೇಡಿದಷ್ಟ ದುಡ್ಡ ಮುಡ್ಡಿ ಕುಡತಿದ್ದನರಪ್ಪಾ ಇನ್ನ ಇವ ಯಾನ ಮಾಡತಾನೋ ಯಾರ ಬಲ್ಲರಿ. ನನ್ನ ಕುರಿಗೋಳಪ್ಪ ಉಪಾಸ ಸಾಯದಿದ್ದರ ಸಾಕರಿ ಇಷ್ಟೆ. (ಹೋಗುವನು)

ಒಬ್ಬ ಮುದುಕ— (ಕೆಮ್ಮುತ್ತ ಪ್ರವೇಶಿಸಿ) ಸದ್ಯದ ತರುಣರಿಗೆ ನಮ್ಮಂಥ ಮುದುಕರು ಹೇಳಿದ ಮಾತು ಸುಳ್ಳೆನಿಸುತ್ತದೆ. ಆದರೆ ಮುಪ್ಪಿನವರು ಒಳ್ಳೆಯದಾಗಬೇಕೆಂದು ಹೇಳದ ಹೊರತು ನಿಲ್ಲುವದಿಲ್ಲ.ಏನೋ ಆಗಲಿ ತನ್ನ ವಿಶ್ವಾಸ ತನ್ನ ಕುಟುಂಬದ ವಿಶ್ವಾಸ ಯಾರಿಗೂ ಕೊಡಬಾರದು. ಅದನ್ನು ಕೊಟ್ಟರೆ ಘಾತವಾಯಿತೆಂದು ತಿಳಿಯಬೇಕು. ಸಂಸಾರದಲ್ಲಿ ಹೀಗೆ ಇದೆ. ಎಷ್ಟರ ವರೆಗೆ ತನ್ನ ಹತ್ತರ ಹಣವಿದೆಯೋ ಅಷ್ಟರ ವರೆಗೆ ಎಲ್ಲರೂ ನಮ್ಮವರೆನ್ನುತ್ತಾರೆ. ಅದು ತೀರಿದೊಡನೆ ಯಾರೂ ಹತ್ತರ ಬರದೇ ದೂರ ದೂರ ಓಡುತ್ತಾರೆ. (ಕೆಮ್ಮುವನು) ಪಾಪದ ಅಪ್ಪನೇ ಲೋಭ. ಪಾಪದ ಅಪ್ಪ ಯಾರೆಂದರೆ ಲೋಭ, ಲೋಭ, ಲೋಭ. ಅದು ಯಾತರದೆಂದರೆ, ಹಣದ, ಧಾನ್ಯದ, ಸ್ತ್ರೀಯ, ಅಭಿಮಾನದ, ದೊಡ್ಡಸ್ತಿಕೆಯ, ವಿಷಯ ವಾಸನೆಯ ಜಗತ್ತಿನಲ್ಲಿರುವ ವಸ್ತುಗಳ ಒಂದಿಲ್ಲೊಂದು ವಸ್ತುವಿನ ಪ್ರಾಪ್ತಿಗಾಗಿ ಮನುಷ್ಯನು ಲೋಭದಲ್ಲಿ ಮುಳುಗುತ್ತಾನೆ. ತಾನು ಮುಳುಗಿದೆನೆಂದು ಅನ್ನದೇ ಜೀವವೆನ್ನುವನು. ಕಣ್ಣುಗಳು ಸ್ವಂತಕ್ಕೆ ನೋಡದೆ ಜಗತ್ತನ್ನೇ ನೋಡುವವು. ಅಲ್ಲದೆ ದೀಪದ ಕೆಳಗೆ ಕತ್ತಲೆ ಇರುವಂತೆ ಮನುಷ್ಯನು ಈ ಸಂಸಾರ ಚಕ್ರದಲ್ಲಿ ಅಜ್ಞಾನದಿಂದ ಲೋಭದ ಬಲಿಯಾಗಿದ್ದಾನೆ. ಮತ್ತು ಅದರಿಂದ ಕೊನೆಗೆ ಪಶ್ಚಾತ್ತಾಪ ಪಡುತ್ತಾನೆ. ಹೀಗೆಕಾಯಿತು ?

ಹೀಗೆಕಾಯಿತೆಂದು ಬುದ್ಧಿ ಭ್ರಷ್ಟ ಮತ್ತು ಮಂದಮತಿಯಾಗುತ್ತಾನೆ. ಇಲ್ಲದೆ ಕೆಲವರು ಜೀವ ಕೊಡಲು ಉದ್ಯುಕ್ತರಾಗುತ್ತಾರೆ. ಕೆಲವರು ಮಾನ ಕಾಯ್ದು ಕೊಳ್ಳುವದರ ಸಲುವಾಗಿ ಹಗಲಿರಳು ಪ್ರಯತ್ನಿಸುತ್ತಾರೆ. ಜೀವಿಸುವದರಲ್ಲಿ ಏನು ಅರ್ಥವಿಲ್ಲವೆಂದು ಕೆಲವರು ಚಿಂತಾಗ್ರಸ್ತರಾಗುತ್ತಾರೆ. ದೈವವಿದ್ದಂತೆ ಆಗುವದು. ರಾಜನಾದರೂ ಸಂಸಾರದ ಹೊರತಾಗಿರುವನೇ? (ಹೋಗುವನು)

(ನಾಲ್ವರು ಬಾಲಕರು ಪ್ರವೇಶಿಸುವರು)

ಮೊದಲನೆಯವ— ನಡೆಯಿರಿ, ನಡೆಯಿರಿ. ನಮ್ಮ ಪ್ರಾಣ ಹೋದರೂ ಅಡ್ಡಿ ಇಲ್ಲಾ. ಆದರೆ ಅನ್ಯಾಯತನದಿಂದ, ಸುಳ್ಳತನದಿಂದ ನಡೆಯುವವನನ್ನು ನಾಶಮಾಡೋಣ. ಸ್ವಾರ್ಥಕ್ಕಾಗಿ ಎಲ್ಲರ ಮೇಲೆ ಅನ್ಯಾಯ ಮಾಡುವವನನ್ನು ಇಡುವದೇತಕ್ಕೆ ?

ಎರಡನೆಯವ— ನನ್ನ ಮನಸ್ಸಿನಲ್ಲಿಯೂ ಅದೇ ವಿಚಾರವಿದೆ. ಆದರೆ ಮಾಡುವದೇನು ? ನಾವು ಸಣ್ಣವರು. ನಮ್ಮದನ್ನು ಕೇಳುವವರಾರು ? ಅದಕ್ಕಾಗಿ ಅಂಜಿಯೇ ಇದ್ದೆ.

ಮೂರನೆಯವ— ಎಲೋ ತಮ್ಮಾ ನಿನಗೆ ದೊಡ್ಡವರ ಕಪಟತನ ಇನ್ನೂವರೆಗೆ ಗೊತ್ತಿಲ್ಲ. ಆನೆಯ ಹಲ್ಲಿನಂತೆ ತೋರಿಸುವ ಹಲ್ಲುಗಳು ಬೇರೆ ತಿನ್ನುವ ಹಲ್ಲುಗಳು ಬೇರೆ. ಅದರಂತೆ ದೊಡ್ಡವರು ದೊಡ್ಡಸ್ತಿಕೆಯನ್ನು ತೋರಿಸಿ ಮೋಸ ಮಾಡುತ್ತಾರೆ. ಸಾದಾ ಮನುಷ್ಯನಿಗೆ ಅವನಂತೆ ಮಾತನಾಡಿ, ಅಜ್ಞಾನಿ ಜನರಿಗೆ ಅತ್ತಿತ್ತ ಕಡೆಯ ನಾಲ್ಕಾರು ಮಾತುಗಳನ್ನಾಡಿ ಸುಶಿಕ್ಷಿತರಿಗೆ ಸಭ್ಯತನದ ಮಾತುಗಳನ್ನಾಡಿ ಮೋಸಗೊಳಿಸುತ್ತಾರೆ. ಪರಸ್ಪರರಲ್ಲಿ ಭೇದ ಭಾವನ್ನುಂಟು ಮಾಡಿ ಕಲಹ ಉತ್ಪನ್ನ ಮಾಡಿ ಸ್ವಾರ್ಥಸಾಧನೆಯನ್ನು ಮಾಡಿಕೊಳ್ಳುತ್ತಾರೆ.

ಮೊದಲನೆಯವ— ಕಾಷ್ಠಾಂಗಾರನ ಕಪಟತನದ ಅರಿವು ಈಗ ನಮಗಾಯಿತು. ಸ್ವಾರ್ಥಕ್ಕೆ ಬಲಿಯಾಗಿ ರಾಜನಾಗಲು ರಾಜನ ಮತ್ತು ಪ್ರಜೆಗಳ ಮೇಲೆ ಅನ್ಯಾಯ ಮಾಡುತ್ತಿರುವನು. ಅವನನ್ನು

ಈಗಿಂದೀಗಲೇ ನಾಶ ಮಾಡಿಯೇ ಬಿಡಬೇಕು. ಅನ್ಯಾಯದಿಂದ ಜೀವಿಸುವದಕ್ಕಿಂತ ನ್ಯಾಯಕ್ಕಾಗಿ ಪ್ರಾಣ ಹೋದರೂ ಚಿಂತೆ ಇಲ್ಲಾ ನಡೆಯಿರಿ.

ನಾಲ್ಕನೆಯವ— ನೀವೆನ್ನುವದು ಅಕ್ಷರಶಃ ನಿಜವಾಗಿದೆ. ಆದರೆ ಒಮ್ಮೆಲೆ ಸಿಟ್ಟಿನ ಕೈಯಲ್ಲಿ ಬುದ್ಧಿಯನ್ನು ಕೊಡುವದು ಉಚಿತವಲ್ಲ. ಆದರ ಬಗ್ಗೆ ವಿಚಾರಿಸುವದು ಉತ್ತಮ. ಮೊದಲು ನಮ್ಮಲ್ಲಿ ಒಕ್ಕಟ್ಟನ್ನು ಮಾಡಿಕೊಂಡು ಜನರಲ್ಲಿ ನಿಜವಾದದ್ದನ್ನು ತಿಳಿಸಿ ಅವರನ್ನು ಜಾಗೃತಗೊಳಿಸಬೇಕು. ನಮ್ಮಲ್ಲಿ ಸಂಘಟನೆಯಾದ ಮೇಲೆ ಅನ್ಯಾಯ, ಕಪಟತನ, ಸ್ವಾರ್ಥ ಸಾಧಿಸುವವರನ್ನು ನಾಶ ಮಾಡಬಲ್ಲೆವು. ಈ ದಿನ ಯುದ್ಧವು ಪ್ರಾರಂಭವಾಗು ವದರಲ್ಲಿ ಸಂದೇಹವಿಲ್ಲ. ಇಂಥದರಲ್ಲಿ ನಮ್ಮದೇನು ನಡೆಯು ವದು? ನಡೆಯಿರಿ ಈಗಿನಿಂದಲೇ ತಯಾರಿ ಮಾಡೋಣ.

ಎಲ್ಲರೂ— ನಡೆಯಿರಿ ಹಾಗೇ ಆಗಲಿ. (ಹೋಗುವರು)

(ಪುರೋಹಿತ ಸಜ್ಜನರಾಯ ಪ್ರವೇಶಿಸುವರು)

ಪುರೋಹಿತ— ನೋಡಿರಿ ಸಜ್ಜನರಾಯರೇ ರಾಜಾ ಸತ್ಯಂಧರ ಕರ್ಮದ ಬಲವು ಎಷ್ಟು ಮಹತ್ತರವಾಗಿದೆ? ಇಂದು ಪ್ರತ್ಯಕ್ಷದಲ್ಲಿ ಯುದ್ಧದ ಪ್ರಸಂಗ!

ಸಜ್ಜನರಾಯ— ರಾಜಾ ಸತ್ಯಂಧರನಿಗೆ ಜಯವಾಗಿ ದೀರ್ಘಾಯು ಸಂಪನ್ನನಾಗಿ ಮೊದಲಿನಂತೆ ರಾಜ್ಯವಾಳುತ್ತಿರುವದನ್ನು ನಾವು ಕಣ್ಣು ತುಂಬಾ ನೋಡಬೇಕೆಂಬುದಿಷ್ಟೇ ದೇವರಲ್ಲಿ ಪ್ರಾರ್ಥನೆ.

ಪುರೋಹಿತ— ಓಹೋ ಇದು ಯುದ್ಧ. ಇದರಲ್ಲಿ ಏನು ಹೇಳಲೂ ಸಾಧ್ಯವಿಲ್ಲ. ಈ ಸಮಯದಲ್ಲಿ ಪೂರ್ವ ಕೃತ ಪುಣ್ಯ ಹಾಗೂ ಈಗಿನ ಪುರುಷಾರ್ಥ ಇವುಗಳ ಮೇಲೆ ಜಯವು ಅವಲಂಬಿಸಿದೆ. ನಡೆಯಿರಿ. ನಮ್ಮ ಸೈನಿಕರಿಗೆ. ಜನರಿಗೆ ಸಾಧ್ಯವಾದಷ್ಟು ಹುರುಪು ಕೊಡೋಣ. (ಇಬ್ಬರೂ ಹೋಗುವರು.)

[ಅನೇಕರು ರಾಜಾ ಸತ್ಯಂಧರನಿಗೆ ಮತ್ತು ಕಾಷ್ಠಾಂಗಾರನಿಗೆ ಯುದ್ಧದಲ್ಲಿ

ಸಹಾಯ ಮಾಡಲು ಅನೇಕ ರೀತಿಯ ಆಯುಧಗಳನ್ನು ತೆಗೆದುಕೊಂಡು ಜಯಘೋಷಣೆ ಮಾಡುತ್ತ ಬರುತ್ತಲಿದ್ದಾರೆ, ಹೋಗುತ್ತಿದ್ದಾರೆ.]

ಮೊದಲನೆಯವ— ಸತ್ಯಂಧರ ರಾಜನಿಗೆ ಜಯವಾಗಲಿ. [ಹೋಗುವನು.]

ಎರಡನೆಯವ— ಕಾಷ್ಠಾಂಗಾರನು ಕಣ್ಣಿಗೆ ಬೀಳುವದೇ ಅವಕಾಶ. (ಹೋಗುವನು.)

ಮೂರನೆಯ— ಸತ್ಯಂಧರ ರಾಜನಿಗೆ ವಿಜಯವಾಗಲಿ. (ಹೋಗುವನು.)

ಮೂವರು— (ಪ್ರವೇಶಿಸಿ) ಸಾವಿಗೆ ನಾವು ಹೆದರುವವರೇ. ಕಾಷ್ಠಾಂಗಾರ ನನ್ನು ಬಿಡುವದಿಲ್ಲ. (ಹೋಗುವರು.)

ಇಬ್ಬರೂ— (ಪ್ರವೇಶಿಸಿ) ಕಾಷ್ಠಾಂಗಾರನಿಗೆ ವಿಜಯವಾಗುವದೇ ತಡ ನಮಗೆ ಕೆರೆ ಜೂಜಾಟ ಮುಂತಾದವುಗಳಿಗೆ ಅಪ್ಪಣೆ ಸಿಕ್ಕಂತೆಯೇ ತಿಳಿಯಿರಿ. [ಹೋಗುವರು.]

ಒಬ್ಬನು— ಕಾಷ್ಠಾಂಗಾರ ರಾಜನಿಗೆ ವಿಜಯವಾಗಲಿ. (ಹೋಗುವನು.)

(ಮಾಣಿಕಬಾಯಿ, ಪದ್ಮಾಬಾಯಿ ಪ್ರವೇಶಿಸುವರು.)

ಮಾಣಿಕಬಾಯಿ— ಪದ್ಮಿಣಿಬಾಯಿ ತೀರ್ಥಂಕರರು, ಚಕ್ರವರ್ತಿಗಳು, ರಾಜರು ಎಲ್ಲ ರೀತಿಯ ತ್ಯಾಗ ಮಾಡಿ ಮಹರ್ಷಿ, ತಪಸ್ವಿಗಳಾಗಿ ಆತ್ಮಹಿತದ ಸಾಧನೆಯನ್ನು ಮಾಡಿಕೊಂಡರು. ಏಕೆಂದರೆ ಸಂಸಾರವು ಅಸಾರವಿದೆಯೆಂದು ತಿಳಿದು

ಪದ್ಮಾಬಾಯಿ— ಮಾಣಿಕಬಾಯಿ ನಮ್ಮದೂ ಪುಣ್ಯವೆಂದೇ ತಿಳಿಯಿರಿ. ನಮಗೆ ಮೋಕ್ಷಮಾರ್ಗಿಗಳಾದ ಸಾಧು ಸಂತ ಸನ್ಯಾಸಿಗಳ ಆಶ್ರಯವು ದೊರೆತಿದೆ. ದಾನ, ಪೂಜೆ, ಜಪ-ತಪಾದಿ ಪುಣ್ಯ ಕಾರ್ಯಗಳನ್ನು ಮಾಡುವ ಸುಯೋಗವು ಲಭಿಸಿದೆ. ಇಲ್ಲದಿದ್ದರೆ ಮನೆಯಲ್ಲಿ ನಿಂತು ಮಾಡಬೇಕೆಂದಿದ್ದರೆ ಸಿಗುತ್ತಿದ್ದಿತೇ?

ಮಾಣಿಕಬಾಯಿ— ಹೌದು ನಮಗೆ ಸತ್ಸಂಗತಿಯು ದೊರೆತದ್ದು ಒಳ್ಳೆಯದಾಗಿದೆ. ನಮ್ಮ ಕೈಗಳಿಂದ ಸಾಧ್ಯವಾದಷ್ಟು ದಾನ, ಪೂಜೆ, ಜಪ, ತಪ ಧ್ಯಾನಾಧ್ಯಯನಗಳನ್ನು ಮಾಡೋಣ. ಕೊನೆಗೆ ಜಿನ ದೀಕ್ಷೆಯನ್ನು ಸ್ವೀಕರಿಸಿ ಆತ್ಮ ಕಲ್ಯಾಣವನ್ನು ಮಾಡಿಕೊಳ್ಳೋಣ. (ಹೋಗುವರು.)

(ತೆರೆ ಬೀಳುವದು)

ಮೂರನೆಯ ದೃಶ್ಯ

(ಸೂರ್ಯೋದಯದ ಸಮಯ, ರಣಭೂಮಿಯ ಮೇಲೆ ಕಾಷ್ಠಾಂಗಾರನ ಜಯಜಯಕಾರದ ಧ್ವನಿಯು ದೂರಿನಿಂದ ಕೇಳ ಬರುತ್ತಿದೆ. ಸತ್ಯಂಧರ ರಾಜನ ಜಯಘೋಷಣೆ ನಡೆದಿದೆ. ಬೇರೆ ಬೇರೆ ರೀತಿಯ ವಾದ್ಯಗಳು ಮೊಳಗುತ್ತಲಿವೆ. ಕುದುರೆಗಳ ಖುರಗಳ ಸಪ್ಪಳವು ಆಗಹತ್ತಿದೆ. ಸೈನ್ಯವೆಲ್ಲವೂ ಯುದ್ಧ ಭೂಮಿಯ ಕಡೆಗೆ ಓಡುತ್ತಲಿದೆ. ಕಹಳೆ, ಭೇರಿ ಮುಂತಾದವುಗಳ ನಿನಾದ ಕೇಳಿಸುತ್ತಿದೆ. ಯುದ್ಧ ಪ್ರಾರಂಭವಾದದ್ದು ಪ್ರೇಕ್ಷಕರಿಗೆ ಕಂಡು ಬರುತ್ತಿದೆ. ಎಲ್ಲ ಕಡೆಗೆ ಹಾಹಾ ಕಾರವಾಗಿದೆ. ರಣಭೂಮಿಯಿಂದ ಹೊಡೆಯಿರಿ ಕಡಿಯಿರಿ, ಬಡಿಯಿರಿ ಹಾಗೂ ಅಯ್ಯೋ ಸತ್ತೆನು. ಘಾತವಾಯಿತು ಎಂಬ ಆಕ್ರಂದನ ಕೇಳ ಬರುತ್ತಿದೆ, ಎರಡೂ ಪಕ್ಷಗಳಿಂದ ಜಯಜಯಕಾರವಾಗುತ್ತಲಿದೆ. ಖಡ್ಗಗಳ ಸಪ್ಪಳ, ಆನೆ, ಕುದುರೆ, ಒಂಟೆ ಮುಂತಾದ ಪ್ರಾಣಿಗಳ ಧ್ವನಿಯು ನಡೆದಿದೆ. ಅದರಲ್ಲಿಯೇ ಒಂದು ಧ್ವನಿಯು ಯುದ್ಧ ಘನಘೋರವಾಗಿ ನಡದಿರುತ್ತದೆ. ರಾಜಾ ಸತ್ಯಂಧರನು ಸಿಂಹದ ಸಮಾನ ಜಿಗಿದು ಕಾಷ್ಠಾಂಗಾರನ ಸೈನ್ಯವನ್ನು ತುಂಡರಿಸುತ್ತ ರಕ್ತಪಾತ ಮಾಡುತ್ತಲಿದ್ದಾನೆ. ಆಣೆಕಲ್ಲು ಸುರಿಯುವಂತೆ ಕಾಷ್ಠಾಂಗಾರನ ಸೈನ್ಯವು ಭೂಮಿಯ ಮೇಲೆ ಬೀಳುತ್ತ ಲಿದೆ. ರಾಜಾ ಸತ್ಯಂಧರನು ವಾಯು ವೇಗದಿಂದ ಕಾಷ್ಠಾಂಗಾರನನ್ನು ಹುಡುಕುತ್ತ ಲಿದ್ದಾನೆ. ಕಾಷ್ಠಾಂಗಾರನು ಇದುವರೆಗೆ ರಾಜಾ ಸತ್ಯಂಧರನ ಕಣ್ಣಿಗೆ ಬಿದ್ದಿಲ್ಲ. ರಕ್ತ ದಿಂದ ಲಿಪ್ತವಾದ, ಗಾಯ ಹೊಂದಿದ ಜೀವಿಗಳು, ಪ್ರೇತಗಳು ರಣರಂಗದ ಮೇಲೆ ಬಿದ್ದಿವೆ. ರಾಜಾ ಸತ್ಯಂಧರನು ಸಂತಪ್ತನಾಗಿದ್ದಾನೆ. ಸಿಟ್ಟಿನಿಂದ ಕಣ್ಣುಗಳಲ್ಲಿ ಕಿಡಿ ಹಾರುತ್ತಿವೆ. ಕಾಷ್ಠಾಂಗಾರನ ಸೈನ್ಯವು ಹಿಂದೆ ಹಿಂದೆ ಸರಿಯುತ್ತಿರುವದು.)

(ತೆರೆ ಏಳುವದು)

ಸತ್ಯಂಧರ— (ಒಂದೆರಡು ನಿಮಿಷಗಳ ವರೆಗೆ ಕಾಷ್ಠಾಂಗಾರನನ್ನು ಶೋಧಿಸುತ್ತಾನೆ ಆದರೆ ಅವನು ಎಲ್ಲಿಯೂ ಕಾಣಿಸುವದಿಲ್ಲ. ಆಗ ಆತನ ಮನದಲ್ಲಿ ಆಕಸ್ಮಿಕವಾಗಿ ಒಂದು ವಿಚಾರವು ಹೊಳೆಯುತ್ತದೆ.] ಎಲ್ಲಿದ್ದಾನೆ ಆ ಕಾಷ್ಠಾಂಗಾರ! ಏನು ಕಾಷ್ಠಾಂಗಾರನು ಕಾಣುವದೇ ಇಲ್ಲ. (ಸ್ವಲ್ಪ ವಿಚಾರಿಸಿ) ನಾನು ಏನು ಮಾಡುತ್ತಲಿದ್ದೇನೆ. ಯಾರೊಡನೆ ಯುದ್ಧ ಮಾಡುತ್ತಿರುವೆ! ಕಾಷ್ಠಾಂಗಾರನು ಇಲ್ಲವೇ ಇಲ್ಲ. ಈ ಸೇನೆ ಯಾರದು! ಈ ಪ್ರೇತಗಳು ಯಾರವು! ರಾಜ್ಯವು ಯಾರದು! ಯುದ್ಧವು ಯಾರ ಸಂಗಡ! ಏನು ನನ್ನ ಸೈನ್ಯ ವನ್ನು ನಾನೇ ನನ್ನ ಕೈಯಿಂದಲೇ ಕೊರೆಯುತ್ತಿದ್ದೆನೆಯೇ?

ನನ್ನ ಪ್ರಜೆಗಳನ್ನು ನನ್ನ ಕೈಯಿಂದಲೇ ನಾಶ ಮಾಡುತ್ತಿದ್ದೆನೆಯೇ ? ಧಿಕ್ಕಾರವಿರಲಿ, ಧಿಕ್ಕಾರವಿರಲಿ ನನ್ನ ಪಾಪ ಕೃತ್ಯಗಳಿಗೆ. ನನ್ನ ಕೈಯಿಂದಲೇ ಪ್ರಜೆಗಳ ಪ್ರಬಲ ಹಿಂಸೆಯೇ ? (ಬೇರೆ ಜನರ ಯುದ್ಧವು ನಡೆದಿದೆ ಅಯ್ಯಯ್ಯೋ ಮಹಾ ಪಾಪಿ, ಮಹಾನ ಚಾಂಡಾಲ, ಮಹಾ ದುರ್ದೈವಿ ನಾನು. ಸತ್ಯಂಧರನೇ ಇದೇನು ಮಾಡಿದೆ! ಕೈಯೊಳಗಿನ ಶಸ್ತ್ರವನ್ನು ಕೆಳಗಿಟ್ಟು ಆತ್ಮ ವಿಚಾರವನ್ನು ಮಾಡಲಾರಂಭಿಸುತ್ತಾನೆ.) ಎಲೈ ಆತ್ಮನೇ ನೀನು ಅನಾದಿ ಕಾಲದಿಂದ ಈ ಸಂಸಾರದಲ್ಲಿ ವಿಷಯ ಭೋಗಗಳನ್ನು ಮತ್ತು ರಾಗದ್ವೇಷಾದಿ ಕಷಾಯಗಳನ್ನು ಮಾಡುತ್ತ ಸಂಸಾರದಲ್ಲಿ ಭ್ರಮಣ ಮಾಡುತ್ತಲಿರುವೆ. ಪ್ರತ್ಯೇಕ ಪರ್ಯಾಯದಲ್ಲಿ ನೀನು ಪ್ರತ್ಯೇಕ ವಸ್ತುಗಳನ್ನು ಅನಂತ ಸಲ ಭೋಗಿಸಿರುವೆ. ಆದರೂ ನಿನಗೆ ತೃಪ್ತಿಯಾಗಿಲ್ಲ. ಕೇವಲ ಪಂಚೇಂದ್ರಿಯ ಸುಖಗಳಲ್ಲಿ ಅಧಿಕ ಆಸಕ್ತಿಯನ್ನಿಟ್ಟುಕೊಂಡದ್ದರಿಂದ ಎಷ್ಟೋ ಅನಾಹುತಗಳಾಗುತ್ತವೆಂಬುದನ್ನು ನೀನು ಪ್ರತ್ಯಕ್ಷದಲ್ಲಿ ಅನುಭವಿಸುತ್ತಿರುವಿ. ಅಲ್ಲದೆ ವಿಷಯಾಸಕ್ತನಾಗುವದರಿಂದ ಪ್ರತ್ಯಕ್ಷದಲ್ಲಿಯೇ ಪ್ರಾಣಿಗಳ ಹಿಂಸೆಯನ್ನು ಮಾಡಬೇಕಾಯಿಲ್ಲ? ಅದರಂತೆ ಪಂಚೇಂದ್ರಿಯ ವಿಷಯ ವಾಸನೆಗೆ ಬಲಿಯಾಗಿ ಪ್ರಾಣ ಕೊಡತಕ್ಕಂಥ ಆನೆ, ಭ್ರಮರ, ದೀಪದ ಹುಳ, ಮೀನು ಮತ್ತು ಚಿಗರೆ ಇವುಗಳ ಸಾಕ್ಷಾತ್ ದೃಷ್ಟಾಂತವಿದೆ. ನಿನಗೆ ಸ್ವಂತದ ಹಿತವು ಬೇಕಾಗಿದ್ದರೆ ನೀನು ಈಗಿನಿಂದಲೇ ಸಂಸಾರ ವ್ಯಾಮೋಹವನ್ನು ತ್ಯಜಿಸು. ಎಲೈ ಆತ್ಮನೇ! ನೀನು ಅನಾದಿ ಕಾಲದಿಂದ ಅನಂತ ಪರ್ಯಾಯಗಳಲ್ಲಿ ಯಾವ ಯಾವ ವಸ್ತುಗಳ ಅನಂತ ಸಲ ಭೋಗ ಮಾಡಿರುವೆ ಅಂತಹ ಭೋಗಾದಿಗಳನ್ನು ಪುನಃ ಪುನಃ ಇಚ್ಛಿಸುವಿ. ಒಂದು ಸಲ ಭೋಗಿಸಿದ ವಸ್ತುವು ಎಂಜಲವೆಂದು ತಿಳಿಯುವದು. ಇದಕ್ಕಾಗಿಯೇ ಎಂಜಲ ಸಮಾನವಾದಂಥ ಈ ರಾಜ್ಯವನ್ನು ಬಿಟ್ಟು ಆತ್ಮ ಹಿತಸಾಧನೆಯನ್ನು ಮಾಡಿ

ಕೊಳ್ಳು. ಕ್ಷಣಿಕ ಸುಖಕ್ಕಾಗಿ ಮೋಸ ಹೋಗುವವನು ಖಂಡಿತವಾಗಿ ನಾಶ ಹೊಂದುವನು. ಆದರೆ ಯಾವನು ವಿಚಾರಶೀಲನಿರುವನೋ ಅವನು ಕ್ಷಣಿಕ ಸುಖವನ್ನು ತ್ಯಾಗ ಮಾಡುವನು. ಪಂಚೇಂದ್ರಿಯಗಳನ್ನು ಆಶ್ರಯಿಸುವವನು ಅವುಗಳ ದಾಸನಾಗುತ್ತಾನೆ. ಸಂಸಾರದ ವಸ್ತುಗಳನ್ನು ಇಚ್ಛಿಸುವವನಿಗೆ ಇಚ್ಛೆಯು ಪೂರ್ತಿಯಾಗುವದಿಲ್ಲ. ಧನಾದಿ ಸಂಪತ್ತುಗಳನ್ನು ತ್ಯಾಗ ಮಾಡುವವನಿಗೆ ಅವು ಬೆನ್ನಟ್ಟಿ ಬರುವವು. ಸಂಸಾರದಲ್ಲಿ ಪ್ರಾಪ್ತವಾದ ವಸ್ತುಗಳನ್ನು ನಾವು ಬಿಡದಿದ್ದರೂ ಕೂಡಾ ಅವು ನಮ್ಮನ್ನಗಲಿ ಹೋಗುವವು. ಅದಕ್ಕಿಂತಲೂ ನಾವೇ ಮೊದಲೇ ತ್ಯಾಗ ಮಾಡಿದರೆ ಸ್ವರ್ಗ ಮೋಕ್ಷಗಳು ಪ್ರಾಪ್ತವಾಗುವವು. ಆದರೆ ಮಾನವನಿಗೆ ಯಾವಾಗ ಹೊಸ ಕಷ್ಟಗಳ ಅನುಭವವು ಆಗುವದೋ ಆವಾಗ್ಗೆ ಸಂಸಾರವು ಅಸಾರವೆಂದು ತಿಳಿಯುತ್ತಾನೆ. ಸಾಕು ! ಒಂದೇ ವಿಚಾರ ಸರ್ವಸ್ವದ ತ್ಯಾಗ ಮತ್ತು ಆತ್ಮ ಕಲ್ಯಾಣ. ಆತ್ಮ ಕಲ್ಯಾಣ ಮಾಡಿಕೊಳ್ಳುವದಕ್ಕೆ ಇದೇ ಕೊನೆಯ ಸಮಯ.

(ಕಣ್ಣು ಮುಚ್ಚಿ ಧ್ಯಾನ ಮಗ್ನನಾಗಿ ಓಂ ಣಮೋ ಅರಿಹಂತಾಣಂ ಣಮೋ ಸಿದ್ಧಾಣಂ ! ಣಮೋ ಆ ಇರಿಯಾಣಂ । ಣಮೋ ಉವಜ್ಝಾಯಾಣಂ । ಣಮೋ ಲೋಏ ಸವ್ವ ಸಾಹೂಣಂ । ಹೀಗೆ ಅನ್ನುತ್ತ ಅನ್ನುತ್ತ ಮೌನ ಧರಿಸುತ್ತಾನೆ.)

ಸರದಾರ— (ರಾಜಾ ಸತ್ಯಂಧರನು ಸ್ತಬ್ಧನಾಗಿ ನಿಂತದ್ದನ್ನು ಕಾಷ್ಠಾಂಗಾರನ ಸರದಾರನು ನೋಡಿ ಅವನ ಹತ್ತಿರ ಹೋಗುತ್ತಾನೆ.) ಮಹಾರಾಜರೇ ಸತ್ಯಂಧರ ಮಹಾರಾಜರು ಕಣ್ಣು ಮುಚ್ಚಿ ಸ್ತಬ್ಧವಾಗಿ ನಿಂತಿದ್ದಾರೆ.

ಕಾಷ್ಠಾಂಗಾರ— (ಪರದೆಯೊಳಗೆ ಸರದಾರನಿಗೆ ಹೇಳುತ್ತಾನೆ.) ಎಲೇ ಸರದಾರನೇ ಈ ಸಂಧಿಯನ್ನು ಸಾಧಿಸುವದು ಯೋಗ್ಯ ನಡೆ. (ಮುಖವನ್ನು ಓರೆ ಮಾಡಿ ಸತ್ಯಂಧರನನ್ನು ನೋಡುತ್ತಾನೆ. ಅವನು ಸ್ತಬ್ಧವಾಗಿ ನಿಂತದ್ದನ್ನು ನೋಡಿ ವಿಶ್ವಾಸ ಪಟ್ಟುಕೊಳ್ಳುತ್ತಾನೆ. ಸಾವಕಾಶವಾಗಿ ಭಯದಿಂದ ಮುಂದೆಬಂದು ನೋಡುತ್ತಾನೆ.) (ಸ್ವಗತ) ಇದು ಯೋಗ್ಯ ಸಮ



ಯುದ್ಧ ಭೂಮಿಯಲ್ಲಿ ರಾಜಾ ಸತ್ಯಂಧರ ಮಹಾರಾಜನು ವೈರಾಗ್ಯವನ್ನು ಹೊಂದಿದ್ದಾನೆ
ಕೈಯೊಳಗಿನ ಖಡ್ಗವನ್ನು ಬಿಟ್ಟು, ಆತ್ಮ ಚಿಂತನದಲ್ಲಿ ಮಗ್ನನಾಗಿದ್ದಾನೆ.

ಯವಿದೆ. ಇಲ್ಲಿಯವರೆಗೆ ಇಂತಹ ಸಂಧಿ ಸಿಕ್ಕಿರಲಿಲ್ಲ. ಮುಂದೆ ಬರುವ ಸಾಹಸವೂ ಕೂಡಾ ನನಗೆ ಆಗಿದ್ದಿಲ್ಲ. ಸಿಂಹದ ಭಯವು ಜಾಗ್ರತಾವಸ್ಥೆಯಲ್ಲಿಯೇ ಇರುವದು. ಮಲಗಿದಾಗ ಇರಲಾರದು. ಇಲ್ಲಿಯವರೆಗೆ ಕುರಿಯಂತೆ ಜೀವಿಸಬೇಕಾ ಯಿತು. ಸಮಯವು ನಡೆದು ಬಂದಿದೆ ಅಹಹಹಹ ರಾಜಾ ಸತ್ಯಂಧರನಿಗೆ ಮೃತ್ಯು, ಕಾಷ್ಠಾಂಗಾರನು ರಾಜ (ಪ್ರಕಟ ಹಲ್ಲು ಕಚ್ಚಿ ಸಿಟ್ಟಿನಿಂದ) ರಾಜಾ ಸತ್ಯಂಧರರೇ (ಒರೆಯಿಂದ ಖಡ್ಗ ವನ್ನು ಹಿರಿಯುತ್ತ) ಇದೋ ತೆಗೆದುಕೊಳ್ಳು ನಿನ್ನ ಸಾಮ್ರಾಜ್ಯ ವನ್ನು. (ಖಡ್ಗವು ಮೇಲೆ ಹೋಗಿ ಕೆಳಗೆ ಬರುವಾಗ ತೆರೆ ಬೀಳುವದು.

(ಪರದೆಯೊಳಗಿಂದ ಕಾಷ್ಠಾಂಗಾರನು—ಸಮಾಪ್ತವಾಯಿತು ನಿನ್ನ ಸಂಸಾರ.)

ಆರನೆಯ ದೃಶ್ಯ

(ಸಜ್ಜನರಾಯ, ಪುರೋಹಿತ ಬಡಜನರು ಒಕ್ಕಟ್ಟಾಗಿ)

ಪುರೋಹಿತ— ನೋಡಿರಿ ಕ್ಷಣಾರ್ಧದಲ್ಲಿಯ ಚಮತ್ಕಾರ. ಕರ್ಮಗಳು ಎಷ್ಟು ವಿಚಿತ್ರವಾಗಿವೆ. ಸಂಸಾರವು ಇದೆ ಮತ್ತು ಇಲ್ಲ. ಒಂದೇ ಸಮಯದಲ್ಲಿ ರಾಜಾ ಸತ್ಯಂಧರನ ಸಾವು ಮತ್ತು ವಿಜಯಾ ರಾಣಿಯ ವೈಧವ್ಯ. ರಾಜ್ಯಹೀನ ಮತ್ತು ಸ್ಮಶಾನ ಭೂಮಿ ಯಲ್ಲಿ ಪುಷ್ಪಕ ವಿಮಾನದ ಪತನದಿಂದ ನಿರಾಶ್ರಿತಳಾದ ವಿಜಯಾರಾಣಿ ಸಂಸಾರವು ಕ್ಷಣಭಂಗುರವಾಗಿದೆ.

ಓಂ ಣಮೋ ಅರಿಹಂತಾಣಂ ।
ಣಮೋ ಸಿದ್ಧಾಣಂ ।
ಣಮೋ ಆಇರಿಯಾಣಂ ।
ಣಮೋ ಉವಜ್ಝಾಯಾಣಂ ।
ಣಮೋ ಲೋಏ ಸವ್ವಸಾಹೂಣಂ ।

(ತೆರೆ ಬೀಳುವದು)

ಅಂತ್ಯ ಮಂಗಲ ಪದ

(ಧಾಟಿ— ಜನ ಗಣ ಮನ)

ಸುರಚಿರ ಮುಕ್ತಿ ವಿನಾಯಕ ಜಯ ಹೇ ಸನ್ಮತಿ ದೇವ ಜಿನೇಂದ್ರ ॥
ಸಿದ್ಧಾರ್ಥ ರಾಜ ನಂದನ ಮಹಾವೀರಾ ।
ತ್ರಿಶಲಾ ದೇವಿ ಕುಮಾರಾ ॥
ಶುದ್ಧ ಅಹಿಂಸಾ ಧರ್ಮಾರ್ಣವ ಮುದದಿ
ಧರೆಯೊಳು ಗೈದೆ ಪ್ರಸಾರಾ ।
ನಿರುಪಮ ನಿತ್ಯಾನಂದ ।
ವಿರಹಿತನೆ ಭವ ಬಂಧ ॥
ಪರಿ ಪೂಜಿತ ಸುರ ವೃಂದ ॥
ಚಿರ ಸುಖ ಶಾಂತಿ ಪ್ರದಾಯಕ ಜಯ ಹೇ ॥
ಮಂಗಲ ಮಯ ಗುಣ ಚಂದ್ರ ।
ಜಯ ಹೇ । ಜಯ ಹೇ । ಜಯ ಹೇ ।
ಜಯ ಜಯ ಜಯ ಜಯ ಹೇ
ಶ್ರೀ ಮಹಾವೀರ ಜಿನೇಂದ್ರ ॥ ೧ ॥